ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ಹೇಮಾ.ಎಸ್

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಹೇಮಾ.ಎನ್

ಮಾರ್ಗದರ್ಶಕರು
ಡಾ.ವಿರೂಪಾಕ್ಷಿ ಪೂಜಾರಹಳ್ಳಿ
ಸಹ ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ದೃಢೀಕರಣ ಪತ್ರ

'ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು : ಚಾರಿತ್ರಿಕ ಅಧ್ಯಯನ' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗದ ಎಂ.ಫಿಲ್. ಪದವಿಗಾಗಿ **ಹೇಮಾ.ಎನ್.,** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 15-10-09

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು : ಚಾರಿತ್ರಿಕ ಅಧ್ಯಯನ' ಎಂಬ ನಿಬಂಧವನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಸಹ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯ, ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 15.10.09

(ಹೇಮಾ.ಎನ್)
ಸಂಶೋಧಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆ

''ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು: ಚಾರಿತ್ರಿಕ ಅಧ್ಯಯನ'' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಒಪ್ಪಿಸಲು ಅವಕಾಶ ಕಲ್ಪಿಸಿಕೊಟ್ಟ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಹಾಗೂ ಕುಲಸಚಿವರಾದ ಎಸ್.ಎಸ್.ಪೂಜಾರ್ ಅವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುವೆ.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಸಲಹೆ, ಸಹಕಾರನೀಡಿದ ಅಧ್ಯಯನಾಂಗದ ನಿರ್ದೇಶಕರಿಗೆ ಹಾಗೂ ನನಗೆ ನಿಬಂಧದ ವಿಷಯ ಸೂಚಿ ಅಧ್ಯಯನದ ಕ್ರಮವನ್ನು ಭೋದಿಸಿ, ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ, ಸಹಕಾರ ಪ್ರೇರಣೆಗಳನ್ನು ಅತ್ಯಂತ ಆತ್ಮೀಯವಾಗಿ ಮಾರ್ಗದರ್ಶನ ನೀಡಿದ ಹಾಗೂ ಮುಖ್ಯಸ್ಥರಾದ ಡಾ.ವಿರೂಪಾಕ್ಷ ಪೂಜಾರ ಹಳ್ಳಿ ಅವರಿಗೆ ನನ್ನ ಮನಃಪೂರ್ವಕ ಧನ್ಯವಾದಗಳು ಮತ್ತು ನನ್ನ ಅಧ್ಯಯನದ ಸಂರ್ಧದಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಪ್ರೊ.ಟಿ.ಪಿ.ವಿಜಯ್, ಡಾ. ಕೆ. ಮೋಹನ್‌ಕೃಷ್ಣ ರೈ., ಪ್ರೊ.ಸಿ.ಆರ್ ಗೋವಿಂದರಾಜು, ಡಾ.ಚಿನ್ನಸ್ವಾಮಿ ಸೋಸಲೆ ಅವರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುವೆ.

ಮಗಳ ಓದನ್ನು ಮತ್ತು ಏಳ್ಗೆಯನ್ನು ಬಯಸುತ್ತಿರುವ ತಂದೆಯಾದ ಎನ್. ಕಲ್ಲಪ್ಪ ತಾಯಿಯಾದ ಎನ್.ಶಕುಂತಲಮ್ಮ ಅವರಿಗೆ ಹೃದಯ ಪೂರ್ವಕ ಪ್ರಣಾಮಗಳು. ನನ್ನ ಓದಿಗೆ ಸೂಕ್ತ ಪ್ರೇರಣೆ, ಸಹಕಾರ, ಪ್ರೋತ್ಸಾಹ, ಶ್ರೇಯಸ್ಸನ್ನು ಬಯಸುತ್ತಿರುವ ಅಕ್ಕ ಎಚ್. ಜಯಶ್ರೀ, ಅಣ್ಣಂದಿರಾದ ಎನ್.ಜಯಪ್ರಕಾಶ, ಎನ್. ಆನಂದ ವಂದನೆಗಳನ್ನು ಅರ್ಪಿಸುವೆ

ಪುಸ್ತಕ ಸೌಲಭ್ಯಗಳನ್ನು ಒದಗಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಗಳಿಗೆ, ಮತ್ತು ಇತರ ಸಿಬ್ಬಂದಿ ವರ್ಗದ ಸಹಕಾರವನ್ನು ಈ ಸಂರ್ಧದಲ್ಲಿ ನೆನೆಯುತ್ತೇನೆ.

ಸ್ನೇಹಿತರಾಗಿ, ಹಿತೈಷಿಗಳಾಗಿ ಎಂದಿಗೂ ನನ್ನ ಏಳಿಗೆಯನ್ನು ಬಯಸುತ್ತಿರುವ ಹಾಗೂ ನನಗೆ ಸಹಕಾರ ನೀಡಿದ ಆಪ್ತ ಸ್ನೇಹಿತೆಯರಾದ ವಿ.ಸುನಿತಾ ಮತ್ತು ರಮಾದೇವಿ ಹಾಗೂ ನನ್ನ ವಿಭಾಗದ ಸಹ ಸಂಶೋಧಕರಾದ ನನ್ನ ಸ್ನೇಹಿತರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚರಿತ್ರೆ ವಿಭಾಗದ ಆಡಳಿತ ಸಿಬ್ಬಂದಿಯಾದ ಗಂಗಾಧರ ಮತ್ತು ಪ್ರೀತಿಯಿಂದ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಗುರು ಮೌನೇಶ್ವರ ಗ್ರಾಫಿಕ್ಸ್‌ನ ನಾಗರಾಜ ಬಡಿಗೇರ ಅವರುಗಳನ್ನು ಸ್ಮರಿಸಿಕೊಳ್ಳುತ್ತೇನೆ.

ಹೇಮಾ.ಎನ್

ಪರಿವಿಡಿ

• • •

ಅಧ್ಯಾಯ-೧

ಪ್ರಸ್ತಾವನೆ

ಅಧ್ಯಾಯ-೧

ಪ್ರಸ್ತಾವನೆ

ಮಾನವನು ಉಗಮವಾದ ಮೇಲೆ ಬದುಕನ್ನು ರೂಪಿಸಿಕೊಳ್ಳುವ ಹಂತದಲ್ಲಿ ಆಹಾರ, ಉಡುಗೆ, ತೊಡುಗೆ, ವಾಸದ ನೆಲೆ (ಗುಹೆ) ಮೊದಲಾದ ಸ್ಥಿತ್ಯಂತರಗಳನ್ನು ಕಂಡುಕೊಂಡ. ಬೇಟೆ, ಪಶುಪಾಲನೆ ಮತ್ತು ಕೃಷಿ ಹಂತದಲ್ಲಿ ಬದುಕನ್ನು ರೂಪಿಸಿಕೊಂಡ. ಹೀಗೆ ಭೂಮಿಯ ಮೇಲೆ ಒಡೆತನ ಬಂದಾಗ ಹಕ್ಕು ಚಲಾವಣೆ ಮಾಡಿದ. ನಂತರ ನನ್ನದು, ನನ್ನ ಸಂಪತ್ತು ಎಂಬ ಪರಿಕಲ್ಪನೆ ಬಂತು.

ಹೀಗೆ ನಾಗರಿಕತೆ ಮತ್ತು ಸಂಸ್ಕೃತಿ ಬೆಳೆದಂತೆ ಕುಟುಂಬವು ವಿಸ್ತಾರವಾಯಿತು. ಮನೆ, ಬೀದಿ, ಹಟ್ಟಿ, ಗ್ರಾಮ, ಊರು, ಪಟ್ಟಣ, ನಗರಗಳಲ್ಲಿ ಬದುಕುವಾಗ ತನ್ನದೇ ಆದ ಜೀವನ ವಿಧಾನ ರೂಪಿಸಿಕೊಂಡ. ಅದರಲ್ಲಿ ನ್ಯಾಯ, ನೀತಿ, ಧರ್ಮದಿಂದ ಬಾಳುವುದನ್ನು ಕಲಿತ. ನ್ಯಾಯವು ಆದಿ ಕಾಲದಿಂದಲೂ ಚಾಲ್ತಿಯಲ್ಲಿತ್ತು.

- ಬೇಟೆ ಆಡುವಾಗ ಮಾನವ ಯಾವ ಪ್ರಾಣಿಯನ್ನು ಕೊಲ್ಲಬೇಕು, ಯಾವ ಪ್ರಾಣಿಯನ್ನು ಕೊಲ್ಲಬಾರದೆಂಬ ನಿಯಮವನ್ನು ಪಾಲಿಸುತ್ತಿದ್ದ.
- ಜೀವನ ನಡೆಸುವ ಸಂದರ್ಭದಲ್ಲಿ ಹಿಂಸೆ ಅಹಿಂಸೆಯ ಕೃತ್ಯಗಳ ಬಗ್ಗೆ ಮಾನವ ತನ್ನದೇ ರೂಪಗಳನ್ನು ಕಂಡುಕೊಂಡ.
- ಸಮಾಜ ಬೆಳೆದಂತೆ ರೀತಿ, ನೀತಿ, ಧರ್ಮ, ಕಾಯ್ದೆ, ಕಾನೂನು, ಕಟ್ಟಳೆಗಳನ್ನು ಗಾಳಿಗೆ ತೂರಿದಾಗ ಹಿರಿಯರು, ಬುದ್ಧಿಜೀವಿಗಳು ಸಮಾಜವನ್ನು ತಿದ್ದಲು ಪ್ರಯತ್ನಿಸಿದರು.
- ಸಂಸಾರದಲ್ಲಿ ಕಲಹ, ಕುಟುಂಬಗಳಲ್ಲಿನ ಸಂಘರ್ಷ, ದಾಯಾದಿ ಮತ್ಸರ, ಸಂಪತ್ತಿನ ಹಂಚಿಕೆ ಇತ್ಯಾದಿ.
- ಭಾರತೀಯ ಸಂಪ್ರದಾಯದಲ್ಲಿ ಹೆಣ್ಣು, ಹೊನ್ನು, ಮಣ್ಣಿಗಾಗಿ ಯುದ್ದಗಳೇ ನಡೆದಿವೆ. ಯಾವುದು ಸತ್ಯ ಎಂಬುದು ಸಮಾಜಕ್ಕೆ ತಿಳಿದಿದೆ. ಸಮಾಜವಿರೋಧಿ ಕೃತ್ಯ ನಡಿಸಿದರೆ ಆ ಸಮಾಜವೇ ಅವರನ್ನು ಶಿಕ್ಷಿಸುತ್ತಿತ್ತು.

ಉದಾಹರಣೆಗೆ: ಬ್ಯಾಬಿಲೋನಿಯಾದ ದೊರೆ ಹಮ್ಮುರಾಬಿ ಹಲ್ಲಿಗೆ ಹಲ್ಲು ಕಣ್ಣಿಗೆ ಕಣ್ಣು ನೀತಿ ಅನುಸರಿಸಿದ್ದ. ಭಾರತದಲ್ಲಿ ರಾಮಾಯಣದ ಮೂಲಕ ನ್ಯಾಯನೀತಿಗಳನ್ನು ತಿಳಿಯಬಹುದಾಗಿದೆ. ಪರಸ್ವತ್ತು, ಪರಧನ, ಪರಸ್ತ್ರೀ ಇವುಗಳಿಂದಾಗುವ ವಿಪತ್ತು ಕಳ್ಳತನಕ್ಕೆ ಯಾವ ಶಿಕ್ಷೆ, ಪರಸ್ತ್ರೀ ಅಪಕಾರಕ್ಕೆ ಶಿಕ್ಷೆ, ಗೋವನ್ನು ಕೊಲ್ಲುವುದಕ್ಕೆ ಯಾವ ಯಾವ ಶಿಕ್ಷೆ ಎಂಬುವುದನ್ನು ರಾಮಾಯಣವು ತಿಳಿಸುತ್ತದೆ. ಭಾರತೀಯ ಸಂದರ್ಭದಲ್ಲಿ ರಾಮಾಯಣವು ನಾಗರಿಕತೆ ಮತ್ತು ಸಂಸ್ಕೃತಿ ಹಿನ್ನೆಲೆಯಲ್ಲಿ ಬಹು ಮುಖ್ಯ ಪಾತ್ರವಹಿಸುತ್ತದೆ. ಇದರಲ್ಲಿ ಮನುಷ್ಯ ಹೇಗೆ ಬಾಳಬೇಕೆಂದು ತಿಳಿಸಲಾಗಿದೆ. ಹಾಗೆಯೇ ಮಹಾಭಾರತದಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಹೇಗಿತ್ತು ಎಂದು ತಿಳಿಸಲಾಗಿದೆ. ವೇದ, ಪುರಾಣ (ಸಭಾ–ಸಮಿತಿ) ಇತರ ಕೃತಿಗಳನ್ನು ಹಿಂದೂಸ್ಥಾನ ಸಮಾಜವು ಕಾನೂನು ನ್ಯಾಯ ನೀತಿಗಳನ್ನು ರೂಪಿಸಿದೆಯೆಂದು ತಿಳಿಯಲಾಗಿದೆ.

ಮೌರ್ಯರ ಅಶೋಕ ತನ್ನ ಕಾಲದಲ್ಲಿ ನಡೆದ ಹಿಂಸೆಯನ್ನು ನೋಡಿ ಪರಿವರ್ತನೆಗೊಳ್ಳುವುದು ಮುಖ್ಯ ಸಂಗತಿ. ರಾಜ, ಮಂತ್ರಿ ಜನಸಾಮಾನ್ಯರ ನಡುವೆ ಕಾನೂನುಗಳಿದ್ದವು. ತಪ್ಪಿತಸ್ಥನಿಗೆ ಗಲ್ಲುಶಿಕ್ಷೆ ವಿಧಿಸುವ ಕ್ರಮಗಳು ಇದ್ದವು.

ಕದಂಬ, ಗಂಗ, ಚಾಲುಕ್ಯ, ಹೊಯ್ಸಳ, ರಾಷ್ಟ್ರಕೂಟ, ವಿಜಯನಗರ, ಪಾಳೆಗಾರರು, ಬ್ರಿಟಿಷರ ಮೊದಲು ಹಿಂದು ಧರ್ಮದ ನೆಲೆಯಲ್ಲಿ ಕಾನೂನುಗಳಿದ್ದವು. ನಂತರ ಮಧ್ಯ ಕಾಲದಲ್ಲಿ ಮಹಮ್ಮದೀಯರ ಪ್ರಭಾವ ಬೀರಿತು. ಆಧುನಿಕದಲ್ಲಿ ಬ್ರಿಟಿಷರ ಕಾನೂನು ಜಾರಿಗೆ ಬಂತು.

ಬ್ರಿಟಿಷರ ಕಾಲದಲ್ಲಿ (೧೮೦೦) ಕರ್ನಾಟಕ ಹರಿದು ಹಂಚಿಹೋಗಿತ್ತು. ಹೈದ್ರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಮದ್ರಾಸ್ ಕರ್ನಾಟಕದಲ್ಲಿ ಅಪರಾಧ ಇರುವಾಗ ಕಾನೂನು ಕೋರ್ಟ್‌ಗಳು ಕಾರ್ಯ ನಿರ್ವಹಿಸುತ್ತಿರುವಾಗ ಅಲಹಾಬಾದ್ ಮುಂಬೈ ಪ್ರಮುಖ ಕೇಂದ್ರಗಳಾಗಿದ್ದವು.

ಮುಂಬೈ ಕರ್ನಾಟಕದಲ್ಲಿ ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಬಿಜಾಪುರ ಜಿಲ್ಲೆಗಳು ಸೇರಿದ್ದವು. ಇಲ್ಲಿನ ವ್ಯಾಜ್ಯಗಳನ್ನು ತಾಲೂಕು, ಜಿಲ್ಲಾ ನ್ಯಾಯಾಲಯಗಳಲ್ಲಿ ಇತ್ಯರ್ಥಪಡಿಸಲಾಗುತ್ತಿತ್ತು.

ಬ್ರಿಟಿಷರ ಆಳ್ವಿಕೆ ಇರುವಾಗ ಮೈಸೂರು ಸಂಸ್ಥಾನದಲ್ಲಿ ಕೋರ್ಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದವು. ಕಾನೂನು ಕ್ಷೇತ್ರದಲ್ಲಿ ವಿಕೇಂದ್ರೀಕರಣ ಕಂಡುಬಂದಿದ್ದು ವಸಾಹತುಶಾಹಿ ನಂತರದ ಕಾಲಘಟ್ಟದಲ್ಲಿ ನಂತರ ೧೮೦೦ರಿಂದ ೧೯೦೦ ವರೆಗೆ ಮತ್ತು ೧೯೦೦ರಿಂದ ೧೯೪೪ ರವರೆಗೆ ನ್ಯಾಯಾಲಯದ ಕಾರ್ಯಚಟುವಟಿಕೆಗಳು, ಕಾಯ್ದೆ ಕಾನೂನುಗಳು ಸಾಕಷ್ಟು ಪರಿಣಾಮ ಬೀರಿದೆ. ೧೮೩೭ರಲ್ಲಿ ಸರ್ ಥಾಮಸ್ ಮೆಕಾ ಅವರ–ಭಾರತೀಯ ಅಪರಾಧ ಸಂಹಿತೆ (ಐ.ಪಿ.ಸಿ.,/ಸಿ.ಆರ್.ಪಿ.ಸಿ/ಸಿ.ಪಿ.ಸಿ) ಆಗಿನ ಬ್ರಿಟಿಷರ ಕಾನೂನುಗಳು ಕಠಿಣವಾಗಿದ್ದವು. ಆ ಕಾಲದಲ್ಲಿಯೇ ಸ್ವಾತಂತ್ರ್ಯ ಹೋರಾಟ ನಡೆದು ಅವರ ಕಾಯ್ದೆ ಕಾನೂನು ವಿರೋಧಿಸಿದರು. ಸಶಸ್ತ್ರ ನಿಷೇಧ ಕಾಯ್ದೆ ಬಗ್ಗೆ ಹಲಗಲಿ ಬೇಡರು ೧೮೫೭ರಲ್ಲಿ ದಂಗೆ ಮಾಡಿದರು. ಆಗಿನಿಂದಲೇ ಕಾನೂನಿನಲ್ಲಿ ಪ್ರತ್ಯೇಕತೆ ಬಯಸಲು ಭಾರತೀಯರು ಬಯಸಿದ್ದರು.

೧೮೭೩ರ ಸುಮಾರಿನಲ್ಲಿ ಸಂಗ್ಯಾಬಾಳ್ಯಾ ಘಟನೆಗಳು ಕೋರ್ಟ್ ಹತ್ತಿ ಬ್ರಿಟಿಷರ ಕಾನೂನುಗಳಿಂದ ಮಹತ್ವ ಪಡೆದಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಮೊದಲು ಹೇಳಿಕೊಳ್ಳುವಂಥ ಕೋರ್ಟ್‌ಗಳಿರಲಿಲ್ಲ.

ಜಿಲ್ಲೆ ತಾಲೂಕುಗಳಿದ್ದವು. ಆದರೆ ಜನರು ಪುನಃ ಹೈಕೋರ್ಟ್‌ಗೆ ಹೋಗಲು ಊರಿಂದ ಊರಿಗೆ ಹೋಗಬೇಕಾಗಿತ್ತು. ಇದು ವಿಪರ್ಯಾಸ ಹಾಗಾಗಿ ಹಿಂದಿನಿಂದಲೇ ಈ ಭಾಗದ ಜನರಲ್ಲಿ ಪ್ರತ್ಯೇಕ ಹೈಕೋರ್ಟ್‌ನ ಬಗ್ಗೆ ಕನಸುಗಳಿದ್ದವು ಎಂದು ನಂಬಬಹುದಾಗಿದೆ.

೧೯೨೦ರ ಸಮಯದಲ್ಲಿ ಕನ್ನಡಿಗರು ಪ್ರತ್ಯೇಕ ಹೈಕೋರ್ಟ್‌ನ ಬಗ್ಗೆ ಚಿಂತಿಸಿದರು. ಹಾಗಾಗಿ ಉತ್ತರ ಕರ್ನಾಟಕದಲ್ಲಿ ಜನ, ಭಾಷೆ, ಸಂಸ್ಕೃತಿ ಪರಿಸರ ಎಲ್ಲವೂ ದಕ್ಷಿಣ ಕರ್ನಾಟಕಕ್ಕಿಂತ ಭಿನ್ನವಾಗಿದ್ದು ಇಲ್ಲಿನ ಜನರಿಗೆ ನ್ಯಾಯ ಒದಗಿಸಲು ಹೈಕೋರ್ಟ್ ಪೀಠವನ್ನು ಸ್ವಾತಂತ್ರ್ಯನಂತರ ಸ್ಥಾಪಿಸಲು ಹಲವಾರು ಸಂಘಟನೆಗಳು ವಿವಿಧ ವಿಷಯಗಳಲ್ಲಿ ಚಳವಳಿ ನಡೆಸಿದ್ದಾರೆ. ಆ ಚಳವಳಿಗಳ ಸಂಕ್ಷಿಪ್ತ ಅಧ್ಯಯನವನ್ನು ಈ ಪ್ರಬಂಧದಲ್ಲಿ ನಿರೂಪಿಸಲಾಗಿದೆ.

೧೯೨೦ರಲ್ಲಿ ಧಾರವಾಡದ ಉಳವಿ ಚೆನ್ನಬಸಪ್ಪನ ಗುಡ್ಡದ ಮೇಲೆ ಕರ್ನಾಟಕ ರಾಜ್ಯ ಪರಿಷತ್ತಿನ ಮೊದಲ ಅಧಿವೇಶನ ನಡೆಯಿತು. ಆ ಅಧಿವೇಶನದ ಅಧ್ಯಕ್ಷತೆಯನ್ನು ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ನಿವೃತ್ತರಾಗಿದ್ದ ಪಿ.ವಿ.ಮಾಧವರಾಯರು ವಹಿಸಿದ್ದರು. ಆ ಸಂದರ್ಭದಲ್ಲಿ ಹೈಕೋರ್ಟ್ ಪೀಠ ಎಲ್ಲಿ ಆಗಬೇಕು ಎಂದು ಚರ್ಚೆಯಾಗಿತ್ತು[೧].

ಉತ್ತರ ಕರ್ನಾಟಕದಲ್ಲೊಂದು ಹೈಕೋರ್ಟ್ ಪೀಠದ ಸ್ಥಾಪನೆ ಆಗಬೇಕು ಎಂಬ ಚಳವಳಿ ಆರಂಭವಾಗಿದ್ದು ೧೯೫೮ರಲ್ಲಿ, ಅಂದಿನ ಮೈಸೂರು ಸರ್ಕಾರದ ಮಂತ್ರಿಗಳಾಗಿದ್ದ ಎಂ.ಶೇಷಾದ್ರಿ ಮತ್ತು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಾದ ಟಿ.ಸಿಂಗಾರವೇಲು ಅವರ ನೇತೃತ್ವದಲ್ಲಿ ಉನ್ನತ ಸಮಿತಿಯೊಂದು ರಚನೆಯಾಗಿತ್ತು. ಈ ಸಮಿತಿಯ ವರದಿಯಲ್ಲಿ ಹುಬ್ಬಳ್ಳಿ–ಧಾರವಾಡದಲ್ಲಿ ಹೈಕೋರ್ಟ್ ಪೀಠವೊಂದು ಅಗತ್ಯವಿದೆ ಎಂಬ ಅಂಶ ಪ್ರಧಾನವಾಗಿ ಉಲ್ಲೇಖವಾಗಿದೆ[೨]. ನಂತರ ೧೯೬೨ರಲ್ಲಿ ಬಿ.ಡಿ. ಜತ್ತಿಯವರು ಧಾರವಾಡ ಮಹಾನಗರ ಪಾಲಿಕೆಯ ಉದ್ಘಾಟನೆ ವೇಳೆ ಈ ಕುರಿತು ಸರ್ಕಾರದ ಗಮನ ಸೆಳೆದಿದ್ದರು. ಅದರೆ ಫಲಿತಾಂಶ ಮಾತ್ರ ಶೂನ್ಯವಾಗಿತ್ತು.

೧೯೭೭ರಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಡಿ.ಎಂ.ಚಂದ್ರಶೇಖರ್ ಅವರು ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬಹುದೆಂದು ಶಿಫಾರಸ್ಸು ಮಾಡಿದ್ದರು. ಈ ಕುರಿತು ಸರಕಾರ ಇತರ ಆವಶ್ಯಕ ಏರ್ಪಾಟು ಮಾಡಿದಲ್ಲಿ ಮಹಾನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬಹುದು ಎಂದಿದ್ದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾವ್ ಅವರು ಮುಖ್ಯ ನ್ಯಾಯಮೂರ್ತಿಗಳ ವರದಿಗೆ ಸಂಬಂಧಿಸಿ ಅಂದಿನ ಕೇಂದ್ರ ಸರಕಾರದ ಕಾನೂನು ಮಂತ್ರಿ ಶಿವಶಂಕರ ಇವರಿಗೆ ತಮ್ಮ ಒಪ್ಪಿಗೆ ಪತ್ರವನ್ನು ದಿನಾಂಕ ೧೦.೦೮.೧೯೮೧ರಂದು ಕಳುಹಿಸಿದ್ದರು[೩].

೧೯೮೧ರಲ್ಲಿ ನ್ಯಾಯಮೂರ್ತಿ ಜಸ್ವಂತ್ ಸಿಂಗ್ ಅವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಲಾಯಿತು. ಭಾರತ ಸರ್ಕಾರವು ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಹೆಚ್ಚುವರಿ ಹೈಕೋರ್ಟ್ ನ್ಯಾಯಪೀಠವನ್ನು ಸ್ಥಾಪಿಸುವ ಕುರಿತು ಈ ಆಯೋಗವನ್ನು ರಚಿಸಲಾಗಿತ್ತು[೪]. ಈ ಆಯೋಗವು ಬೇರೆ ಬೇರೆ ರಾಷ್ಟ್ರದ ಭಾಗಗಳಿಗೆ ಸಂಚರಿಸಿ ಧಾರವಾಡಕ್ಕೆ ಬಂದಾಗ ಇಲ್ಲಿಯ ಅನೇಕ ಸಂಘಸಂಸ್ಥೆಗಳು ಹಾಗೂ ವಕೀಲಸಂಘದವರು ಹಾಜರಾಗಿ ಹುಬ್ಬಳ್ಳಿ–ಧಾರವಾಡ ಮಧ್ಯ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು ಮನವಿ ಮಾಡಿದರು. ಈ ಆಯೋಗವು ತನ್ನ ವರದಿಯನ್ನು

೧೯೮೫ರಲ್ಲಿ ಸಲ್ಲಿಸಿ ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು ಶಿಫಾರಸ್ಸು ಮಾಡಿತ್ತು. ಆದರೆ ಈ ಪ್ರಸ್ತಾವನೆಯು ಕಾರ್ಯಾಚರಣೆಗೆ ಬರಲಿಲ್ಲ.

೧೯೯೬ರಲ್ಲಿ ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ.ಹಿರೇಮಠ ಅವರ ನೇತೃತ್ವದಲ್ಲಿ ಚಳವಳಿಯು ಇನ್ನೂ ತೀವ್ರಗೊಂಡಿತ್ತು. ವಕೀಲರು ಕೋರ್ಟ್ ಕಲಾಪಗಳಿಂದ ಸುಮಾರು ದಿನಗಳವರೆಗೆ ದೂರ ಉಳಿದು ಪ್ರತಿಭಟಿಸಿದರು. ೧೯೯೯ರಲ್ಲಿ ಬಿ.ಡಿ. ಹಿರೇಮಠ ಮತ್ತು ಕೆಲವು ಜನ ವಕೀಲರು ಉಪವಾಸ ಸತ್ಯಾಗ್ರಹವನ್ನು ಮಾಡಿದರು. ಈ ಉಪವಾಸವು ೧೯ ದಿನಗಳಿಗೆ ಸರ್ಕಾರದ ಭರವಸೆಯ ಮೇಲೆ ಮುಕ್ತಾಯವಾಯಿತು. ಈ ರೀತಿಯ ಪ್ರತಿಭಟನೆಗಳು ನಿರಂತರವಾಗಿ ನಡೆದು ನಂತರ ಭರವಸೆಗಳ ಮೂಲಕ ಮುಕ್ತಾಯವಾಗುತ್ತಿದ್ದವು. ಇಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆಯು ಎದ್ದುಕಾಣುತ್ತಿತ್ತು.

ನಂತರ ರಾಜ್ಯ ಸರ್ಕಾರದ ಮಾಹಿತಿಯನ್ನು ಆಧರಿಸಿ ಬೇಡಿಕೆ ಪರಿಶೀಲಿಸಲು ನ್ಯಾಯಮೂರ್ತಿ ಅಶೋಕ ಭಾನ್ ನೇತೃತ್ವದಲ್ಲಿ ಐವರು ನ್ಯಾಯಮೂರ್ತಿಗಳ ಸಮಿತಿಯನ್ನು ರಚಿಸಲಾಗಿತ್ತು. ಆದರೆ ಪ್ರಧಾನ ಪೀಠದಿಂದ ಹೊರಗೆ ಬೇರೊಂದು ಪೀಠ ಸ್ಥಾಪಿಸುವ ಅಗತ್ಯವಿಲ್ಲ ಮತ್ತು ಇದು ಕಾರ್ಯಸಾಧುವಲ್ಲವೆಂದು ಸಮಿತಿ ಶಿಫಾರಸ್ಸು ಮಾಡಿತು.

ಹುಬ್ಬಳ್ಳಿ-ಧಾರವಾಡದಲ್ಲಿ ಚಳವಳಿ ತೀವ್ರಗೊಳ್ಳುತ್ತಿದ್ದಂತೆ ಇಲ್ಲಿಂದ ದೂರದಲ್ಲಿರುವ ಕಲಬುರ್ಗಿ ವಿಜಾಪುರ, ಮುಂತಾದೆಡೆ ಸಹ ತಮ್ಮಲ್ಲಿಗೆ ಹೈಕೋರ್ಟ್ ಪೀಠ ಬೇಕು ಎಂದು ಚಳುವಳಿ ನಡೆಯುವುದು ಸಹ ಮಾಮೂಲಿನ ವಿಷಯವಾಗಿತ್ತು. ಬೇರೆ ಬೇರೆ ಸ್ಥಳಗಳಿಂದ ಒತ್ತಡ ಬಂದಾಗ ಯಾವುದೋ ಒಂದು ಭರವಸೆಯ ಮೇಲೆ ನಿಂತು ಹೋಗುವುದು ಕೂಡ ಸಾಮಾನ್ಯವಾಗಿತ್ತು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಬೇಡಿಕೆ ಪರಿಶೀಲಿಸಲು ಹೈಕೋರ್ಟ್‌ನ ನ್ಯಾಯಮೂರ್ತಿ ಜೆ.ಸಿ.ಭರೂಕ ಅವರ ನೇತೃತ್ವದಲ್ಲಿ ಹಿರಿಯ ನ್ಯಾಯಮೂರ್ತಿಗಳನ್ನು ಒಳಗೊಂಡ ಸಮಿತಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ರಚಿಸಿದ್ದರು. ಸಮಿತಿಯಲ್ಲಿ ನ್ಯಾಯಮೂರ್ತಿಗಳಾದ ಆರ್.ಬಿ.ರವೀಂದ್ರನ್ ಬಿ.ವಿಶ್ವನಾಥಶೆಟ್ಟಿ, ಎ.ಎಂ.ಫರೂಕ್, ಹೆಚ್.ರಂಗವಿಠಲಾಚಾರ್, ಎಸ್.ಆರ್.ಬನ್ನೂರಮಠ ಇದ್ದರು. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಹಿನ್ನೆಲೆಯಲ್ಲಿ ಆ ಭಾಗದ ಜನರಿಂದ ಮನವಿಗಳನ್ನು ಸ್ವೀಕರಿಸಲು ನ್ಯಾಯಮೂರ್ತಿ ಜೆ.ಸಿ.ಭರೂಕ ನೇತೃತ್ವದ ಏಳು ಮಂದಿ ನ್ಯಾಯಮೂರ್ತಿಗಳನ್ನೊಳಗೊಂಡ ಸಮಿತಿ ತೀರ್ಮಾನಿಸಿತು. ಸಮಿತಿ ಉತ್ತರ ಕರ್ನಾಟಕದ ಜನರು ಸಲ್ಲಿಸುವ ಮನವಿಗಳನ್ನು ಪರಿಶೀಲಿಸಿ ಪೀಠ ಸ್ಥಾಪನೆ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ನಿರ್ಧರಿಸಿತು.

ಸಮಿತಿಯು ಉತ್ತರ ಕರ್ನಾಟಕದ ಭಾಗಗಳಿಗೆ ತೆರಳಿ ಮನವಿಯನ್ನು ಸ್ವೀಕರಿಸುವ ಪ್ರಕ್ರಿಯನ್ನು ಪ್ರಾರಂಭಿಸಿತು. ಸಮಿತಿಯು ಗುಲ್ಬರ್ಗ, ಬೀದರ, ವಿಜಾಪುರ, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮತ್ತು ಮುಂತಾದ ಸ್ಥಳಗಳಿಗೆ ಭೇಟಿ ನೀಡಿದಾಗ ಎಲ್ಲಾ ಜಿಲ್ಲೆಗಳ ಜನರು ತಮ್ಮಲ್ಲಿ ಹೈಕೋರ್ಟ್ ಪೀಠ ಆಗಬೇಕೆಂದು ಮನವಿ ಮಾಡಿಕೊಂಡರು. ಇದು ಒಂದು ರೀತಿಯ ಗೊಂದಲವನ್ನು ಸೃಷ್ಟಿ ಮಾಡಿತ್ತು. ಸಮಿತಿಯು ಹೋದ ಎಲ್ಲಾ ಸ್ಥಳಗಳಿಂದ ಸಾವಿರಾರು ಮನವಿಗಳನ್ನು ಸ್ವೀಕರಿಸಿತು. ಹೈಕೋರ್ಟ್ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸುವ ಸಾಧ್ಯತೆ ಇದೆ ಎಂದು ಬಂದ

ಒಂದು ಸುದ್ದಿಯು ಹೈದ್ರಾಬಾದ್-ಕರ್ನಾಟಕ ಭಾಗವನ್ನು ಕಡೆಗಣಿಸಲಾಗಿದೆ ಎಂದು ಆ ಭಾಗದವರೆಗೆ ತೀವ್ರ ಅಸಮಾಧಾನವನ್ನು ಉಂಟುಮಾಡಿತ್ತು. ಇದರ ಮಧ್ಯೆ ೨೦೦೩ರಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ಸದ್ಯದ ಸ್ಥಿತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಅಗತ್ಯವಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದರು.

ಎನ್.ಕೆ.ಜೈನ್ ಅವರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಇಲ್ಲ ಎಂದು ಬರೆದ ಪತ್ರಕ್ಕೆ ಹಲವರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಅವರಲ್ಲಿ ಪ್ರೊ.ಡಿ.ಎಂ.ನಂಜುಂಡಪ್ಪ, ಡಾ.ಪಾಟೀಲ ಪುಟ್ಟಪ್ಪ, ಡಾ.ಚಂದ್ರಶೇಖರ ಪಾಟೀಲ, ಮೋಹನ ನಾಗಮ್ಮನವರ, ನ್ಯಾಯವಾದಿಗಳು, ಜನತೆ ಮತ್ತು ಸಂಘಸಂಸ್ಥೆಗಳು ಮುಖ್ಯನ್ಯಾಯಮೂರ್ತಿ ಎನ್.ಕೆ.ಜೈನ್ ಅವರ ನಿಲುವನ್ನು ಪ್ರತಿಭಟಿಸಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ ಕೂಗು ಆರಂಭಿಸಿದರು. ಈ ಪ್ರತ್ಯೇಕತೆಯ ಕೂಗನ್ನು ಕೆಲವರು ವಿರೋಧಿಸಿದರು.

ಎನ್.ಕೆ.ಜೈನ್ ಅವರು ೨೦೦೪ ಅಕ್ಟೋಬರ್‌ನಲ್ಲಿ ಧಾರವಾಡದಲ್ಲಿ ಮತ್ತು ಕಲಬುರ್ಗಿಗಳಲ್ಲಿ ಸಂಚಾರಿ ಪೀಠ ಸ್ಥಾಪಿಸುವ ನಿರ್ಧಾರವನ್ನು ಮಾಡಿ ಅಧಿಕೃತ ಪ್ರಕಟಣೆಯನ್ನು ಹೊರಡಿಸಿದರು. ಇದರ ಪರಿಣಾಮ ೨೦೦೫ರ ಆಗಸ್ಟ್ ೧೪ರಂದು ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಎನ್.ಕೆ.ಸೋಧಿ ಅವರು ಧಾರವಾಡದ ಪೀಠಕ್ಕೆ ಶಂಕು ಸ್ಥಾಪನೆ ಮಾಡಿದರು. ಧಾರವಾಡ ಮತ್ತು ಗುಲ್ಬರ್ಗದಲ್ಲಿ ಎರಡು ಹೈಕೋರ್ಟ್ ಸಂಚಾರಿ ಪೀಠಗಳು ಬಂದವು. ಈ ಹಿನ್ನಲೆಯಲ್ಲಿ ಬಳ್ಳಾರಿ ಜನತೆ ಮತ್ತು ಕೊಪ್ಪಳ ಜನತೆಯು ನ್ಯಾಯಾಲಯಗಳಿಗೆ ನ್ಯಾಯ ಕೋರಿ ಆಗಮಿಸುವ ಕಕ್ಷಿದಾರರ ಹಿತದೃಷ್ಟಿಯಿಂದ ಬಳ್ಳಾರಿ ಜಿಲ್ಲೆ ಹಾಗೂ ಕೊಪ್ಪಳ ಜಿಲ್ಲೆಯನ್ನು ಧಾರವಾಡ ಹೈಕೋರ್ಟ್ ಸಂಚಾರಿ ಪೀಠಕ್ಕೆ ಸೇರಿಸಬೇಕೆಂದು ಚಳವಳಿ ನಡೆಯಿತು.

ಅಧ್ಯಯನದ ಉದ್ದೇಶ

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಬಹುವರ್ಷಗಳಿಂದ ಚಳವಳಿ ನಡೆದಿದೆ. ಈ ಧ್ಯೆಯೋದ್ದೇಶಕ್ಕಾಗಿ ಉತ್ತರ ಕರ್ನಾಟಕದ ಜನತೆ, ನ್ಯಾಯವಾದಿಗಳು, ವಿವಿಧ ಸಂಘ-ಸಂಸ್ಥೆಗಳು ಚಳವಳಿ ಮಾಡಿದ್ದನ್ನು ಇಲ್ಲಿ ಬೆಳಕಿಗೆ ತರುವ ಪ್ರಯತ್ನ ಮಾಡಲಾಗಿದೆ. ಇದರ ಬಗ್ಗೆ ಈ ವರಗೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲವಾದರೂ ಸಣ್ಣ ಪುಟ್ಟ ಲೇಖನಗಳು ಮಾತ್ರ ಪ್ರಕಟವಾಗಿವೆ. ಈ ಕುರಿತಂತೆ ಸಂಪೂರ್ಣ ಅಧ್ಯಯನ ಕಂಡುಬರುವುದಿಲ್ಲವಾದ್ದರಿಂದ ಈ ವಿಷಯವನ್ನು ಪ್ರಸ್ತುತ ಸಂಶೋಧನೆಗೆ ಅಧ್ಯಯನ ವಸ್ತುವನ್ನಾಗಿ ಕೈಗೆತ್ತಿಕೊಳ್ಳಲಾಗಿದೆ.

ಉತ್ತರ ಕರ್ನಾಟಕದ ಹೈಕೋರ್ಟ್ ಪೀಠದ ಚಳವಳಿಯನ್ನು ಯಾರು ನಡೆಸುತ್ತಿದ್ದರು? ಏಕೆ ನಡೆಸುತ್ತಿದ್ದರು? ಪ್ರಮುಖ ಚಳವಳಿಕಾರರು ಯಾರು? ಚಳವಳಿಯ ಹಾದಿ ಯಾವ ರೀತಿ ಇತ್ತು? ಇದಕ್ಕೆ ಸರ್ಕಾರದ ಪ್ರತಿಕ್ರಿಯ ಏನು? ಚಳವಳಿಯ ಪ್ರತಿಫಲ ಏನು ಎಂಬ ವಿಚಾರಗಳನ್ನು ಬೆಳಕಿಗೆ ತರವುದು ಈ ಅಧ್ಯಯನದ ಪ್ರಮುಖ ಆಶಯವಾಗಿದೆ. ಈ ಬಗೆಯ ಇನ್ನೂ ಅನೇಕ ಅಂಶಗಳನ್ನು ಅಧ್ಯಯನಕ್ಕೆ ಸಂಬಂಧಪಟ್ಟಂತೆ ಚರ್ಚಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಚರಿತ್ರೆಯಲ್ಲಿ ವಿಶೇಷವಾಗಿ ನ್ಯಾಯಾಂಗ, ಕಾನೂನು ಚರಿತ್ರೆಯ ಶಾಖೆಗಳ ಸಂಗತಿಗಳನ್ನು ಒಳಗೊಂಡಿದೆ. ಕಾನೂನು ಚರಿತ್ರೆ ಬಹು ಪುರಾತನವಾದದು. ಕಾನೂನು-ನ್ಯಾಯಾಂಗ ವ್ಯವಸ್ಥೆಯ ಬೆಳೆದಂತೆ ಅದರ ಶಾಖೆಗಳು ವಿಸ್ತರಣೆಗೊಂಡವು. ವಸಾಹತುಪೂರ್ವ, ವಸಾಹತುಕಾಲ ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ನ್ಯಾಯಾಂಗ ವ್ಯವಸ್ಥೆ ಸಂಕೀರ್ಣವಾಗಿತ್ತು. ಅದು ಆಂಗ್ಲ ಪದ್ಧತಿಯ ಲಕ್ಷಣಗಳ ವ್ಯವಸ್ಥೆಯಿಂದ ಕೂಡಿದ್ದಾಗಿತ್ತು. ಸ್ವಾತಂತ್ರ್ಯಪೂರ್ವ ಮತ್ತು ಅನಂತರದಲ್ಲಿ ಕಾನೂನು-ನ್ಯಾಯಾಂಗದಲ್ಲಿ ಬದಲಾವಣೆಯ ಗಾಳಿ ಬೀಸಿತು. ನಗರ, ಪಟ್ಟಣಗಳಲ್ಲದೆ ಗ್ರಾಮೀಣ ಭಾಗದಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಿ ಜನಸಾಮಾನ್ಯರಿಗೆ ನ್ಯಾಯವನ್ನು ಕೊಡುವ ಕಾರ್ಯ ನಡೆದು ಬಂದಿತ್ತು. ಏಕಾಏಕಿ ಯಾವುದೇ ಒಂದು ವ್ಯವಸ್ಥೆ ಸಮಾಜದಲ್ಲಿ ಪರಿವರ್ತನೆ ಮೂಡಿಸಲು ಪ್ರಯತ್ನಿಸುವುದು ಸಹಜ. ಅದರ ಪರಿಣಾಮ ಮಾತ್ರ ಆನಂತರ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ನ್ಯಾಯಾಲಯ-ನ್ಯಾಯ ಸ್ಥಾನಮಾನವಿದೆ ಎಂದು ಈ ಭಾಗದ ಎಲ್ಲಾ ಜನರು ಕೂಡಿಕೊಂಡು ಹೋರಾಟಕ್ಕೆ ಮುಂದಾದರು. ಇದು ಒಂದು ಶತಮಾನಕ್ಕೂ ಹೆಚ್ಚು ಕಾಲವನ್ನು ಹೊಂದಿದೆ.

ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಹೊಂದಿದೆ. ಹೈಕೋರ್ಟ್ ಪೀಠಕ್ಕೆ ಸಂಬಂಧಿಸಿದಂತೆ ಸುಮಾರು ೫ ದಶಕಗಳಿಂದ ನಡೆದ ಚಳವಳಿಯನ್ನು ಮಾತ್ರ ಈ ಅಧ್ಯಯನದ ವ್ಯಾಪ್ತಿಯಲ್ಲಿ ಮಾಡಲಾಗಿದೆ. ಈ ಅಧ್ಯಯನ ವ್ಯಾಪ್ತಿಯು ಉತ್ತರ ಕರ್ನಾಟಕ ಮತ್ತು ಧಾರವಾಡ ಜಿಲ್ಲೆಯನ್ನು ಪ್ರಮುಖವಾಗಿ ಅನುಲಕ್ಷಿಸಲಾಗಿದೆ. ಇದಕ್ಕೆ ಪೂರಕವಾಗಿ ಹುಬ್ಬಳ್ಳಿ, ಬೆಳಗಾವಿ, ಗದಗ, ಉತ್ತರ ಕನ್ನಡ, ಗುಲ್ಬರ್ಗ, ಬೀದರ್, ಬಿಜಾಪುರ, ರಾಯಚೂರು, ಬಾಗಲಕೋಟೆ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನಡೆದ ಚಳವಳಿಗಳನ್ನು ಪ್ರಸ್ತಾಪಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಚಳವಳಿಗಳು ಮತ್ತು ಚಳವಳಿಕಾರರನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಆ ಮೂಲಕ ೧೯೨೦ರಿಂದ ೨೦೦೯ರವರೆಗೆ ಚಳವಳಿಗಳ ವಿವಿಧ ಹಂತಗಳನ್ನು, ಅವುಗಳ ಪ್ರಸ್ತಾಪವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಅಧ್ಯಯನದ ವಿಧಾನ

'ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು" : ಚಾರಿತ್ರಿಕ ಅಧ್ಯಯನ ಎಂಬ ಈ ಅಧ್ಯಯನವು ಚರಿತ್ರೆ ಸಂಶೋಧನೆ ವಿಧಿ-ವಿಧಾನಗಳನ್ನು ಒಳಗೊಂಡಿದೆ. ಇಲ್ಲಿ ಪ್ರಾಥಮಿಕ ಹಾಗೂ ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಬಗ್ಗೆ ನಡೆದ ಚಳವಳಿಗಳು ಮತ್ತು ವರದಿಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಸರ್ಕಾರದ ಗೆಜಿಟೆಯರ್‌ಗಳು, ಪತ್ರಿಕೆ, ನಿಯತಕಾಲಿಕೆ, ಸ್ಮರಣಸಂಚಿಕೆ, ಬಿಡಿ ಬಿಡಿಯಾಗಿ ಪ್ರಕಟವಾದ ಲೇಖನಗಳು ಮುಂತಾದವುಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯ ಕೈಗೊಂಡು ಚಳವಳಿ ಬಗ್ಗೆ ನಡೆದ ವಾದ ಪ್ರತಿವಾದಗಳನ್ನು ಚರ್ಚೆಗೆ ಎತ್ತಿಕೊಂಡು ವರ್ಗೀಕರಿಸಿ ಕಾಲಾನುಕ್ರಮವಾಗಿ ನಡೆದ ಘಟನೆಗಳನ್ನು ಇಲ್ಲಿ ವಿಶ್ಲೇಷಿಸಲಾಗುತ್ತದೆ.

ಅಧ್ಯಯನದ ಸ್ವರೂಪ

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್(ಸಂಚಾರಿ) ಪೀಠ ನಡೆದ ಚಳವಳಿಗಳು : ಚಾರಿತ್ರಿಕ ಅಧ್ಯಯನ ತನ್ನದೇ ಆದ ಸ್ವರೂಪವನ್ನು ಹೊಂದಿದೆ. ಇಲ್ಲಿ ಅಧ್ಯಯನದ ಅನುಕೂಲತೆಗಾಗಿ ೫

ಅಧ್ಯಾಯಗಳನ್ನಾಗಿ ರೂಪಿಸಿಕೊಳ್ಳಲಾಗಿದೆ. ಇವು ಒಳಗೊಂಡ ವಿಷಯ ಮತ್ತು ಅದರ ತಾತ್ವಿಕ ಸ್ವರೂಪ ಹೀಗಿದೆ.

ಅಧ್ಯಾಯದಲ್ಲಿ ಒಂದನೇ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನವನ್ನು ವಿವರಿಸಲಾಗಿದೆ. ಇಲ್ಲಿ ಈ ಅಧ್ಯಯನದ ಅಗತ್ಯ ಮತ್ತು ವಿಮರ್ಶಾತ್ಮಕ ಟೀಕೆಗಳ ಜೊತೆ ಅದನ್ನು ಮೀರುವ ಹೊಸ ವಿಧಾನಗಳ ಚರ್ಚೆ ಇದೆ.

ಅಧ್ಯಾಯದಲ್ಲಿ ಎರಡನೇ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದ ನ್ಯಾಯಾಂಗ ವ್ಯವಸ್ಥೆಯು ಬೆಳೆದು ಬಂದ ಬಗೆಯ ಬಗ್ಗೆ ವಿವರಿಸಲಾಗಿದೆ. ಪ್ರಾಚೀನ ಕಾಲದಲ್ಲಿ ರಾಜ ಯಾವ ರೀತಿಯಾದ ನ್ಯಾಯಿಕ ವ್ಯವಸ್ಥೆಯನ್ನು ಅನುಸರಿಸುತ್ತಿದ್ದನು ಮತ್ತು ಸ್ಥಳೀಯ ಮಟ್ಟದಲ್ಲಿ ನ್ಯಾಯಾಡಳಿತವು ಯಾವ ರೀತಿ ನಡೆಯುತ್ತಿತ್ತು ಎಂಬುದನ್ನು ವಿವರಿಸಿದೆ. ಈ ಕೋರ್ಟ್ ಅಥವ ನ್ಯಾಯಾಲಯ ಎನ್ನುವ ಕಲ್ಪನೆಯು ಕರ್ನಾಟಕದಲ್ಲಿ ಯಾವಾಗ ಬಂತು ಮತ್ತು ಅದಕ್ಕಿಂತ ಮುಂಚಿತವಾಗಿ ಯಾವ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿತ್ತು ಎನ್ನುವುದನ್ನು ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯದಲ್ಲಿ ಮೂರನ್ಲೇ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕಾಗಿ ಚಳವಳಿಯು ಯಾವಾಗ ಮೊದಲು ಆರಂಭವಾಯಿತು, ಅದು ಹೇಗೆ ಮುಂದುವರೆಯಿತು, ಈ ಚಳವಳಿಯಲ್ಲಿ ಭಾಗವಹಿಸಿದ ಹಲವಾರು ಸಂಘ ಸಂಸ್ಥೆಗಳು, ನ್ಯಾಯವಾದಿಗಳು, ರಾಜಕೀಯ ಪಕ್ಷಗಳು ಮತ್ತು ಸಾಮಾನ್ಯ ಜನರು ಯಾವ ರೀತಿಯಲ್ಲಿ ಚಳವಳಿಯಲ್ಲಿ ಭಾಗವಹಿಸಿ ಬೆಂಬಲಿಸಿದರು ಎಂದು ವಿವರಿಸಲಾಗಿದೆ. ಒಂದು ಹಂತದಲ್ಲಿ ಚಳವಳಿಯ ಪ್ರತ್ಯೇಕ ರಾಜ್ಯದ ಕೂಗಿಗಾಗಿ ಹೇಗೆ ಪರಿವರ್ತನೆಗೊಂಡಿತು ಮತ್ತು ಹೇಗೆ ಅದು ತಣ್ಣಗಾಯಿತು ಎನ್ನುವುದನ್ನು ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಚಳವಳಿಯ ಸ್ವರೂಪವನ್ನು ವಿವರಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆಯಿಂದ ಯಾರಿಗೆ ಅನುಕೂಲವಾಗುತ್ತದೆ ಮತ್ತು ಯಾರಿಗೆ ಅನನುಕೂಲವಾಗುತ್ತದೆ ಎನ್ನುವುದನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಇನ್ನೂ ಹೆಚ್ಚಿನ ವಿಷಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯದಲ್ಲಿ ಐದನೇ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಸಂದರ್ಶನ, ೧೩.೦೯.೨೦೦೯

೨. ಹೈಕೋರ್ಟ್ (ಬಿ.ಡಿ. ಹಿರೇಮಠ ಅವರೊಂದಿಗೆ)ಪೀಠ ವಿಶೇಷಾಂಕ ೦೪.೦೭.೨೦೦೮, ಪು-೪

೩. ಕರ್ಮ ವೀರ, ೨೧.೦೯.೨೦೦೫, ಪು-೧೧

೪. ಅದೇ ಪುಟ.

* * *

ಅಧ್ಯಾಯ-೨

ಕರ್ನಾಟಕದಲ್ಲಿ ನ್ಯಾಯಾಂಗ ವ್ಯವಸ್ಥೆ : ಚಾರಿತ್ರಿಕ ಹಿನ್ನೆಲೆ

ಅಧ್ಯಾಯ-೨

ಕರ್ನಾಟಕದಲ್ಲಿ ನ್ಯಾಯಾಂಗ ವ್ಯವಸ್ಥೆ : ಚಾರಿತ್ರಿಕ ಹಿನ್ನೆಲೆ

ಮಾನವನ ಉಗಮವಾದ ಮೇಲೆ ಬದುಕನ್ನು ರೂಪಿಸಿಕೊಳ್ಳುವ ಹಂತದಲ್ಲಿ ಆಹಾರ, ಉಡುಗೆ, ತೊಡುಗೆ, ವಾಸದ ನೆಲೆ(ಗುಹೆ) ಮೊದಲಾದ ಸ್ಥಿತ್ಯಂತರಗಳನ್ನು ಕಂಡುಕೊಂಡನು. ಬೇಟೆ, ಪಶುಪಾಲನೆ ಮತ್ತು ಕೃಷಿ ಹಂತದಲ್ಲಿ ಬದುಕನ್ನು ರೂಪಿಸಿಕೊಂಡನು. ಹೀಗೆ ಭೂಮಿಯ ಮೇಲೆ ಒಡೆತನದ ಪ್ರಶ್ನೆ ಬಂದಾಗ ಹಕ್ಕು ಚಲಾವಣೆ ಮಾಡಿದನು. ನನ್ನದು, ನನ್ನ ಸಂಪತ್ತು ಎಂಬ ಪರಿಕಲ್ಪನೆ ಬೆಳೆದು ಬಂತು.

ಭಾಷಾವಾರು ಪ್ರಾಂತ್ಯಗಳ ವಿಂಗಡಣೆ ಸಮಯದಲ್ಲಿ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಅಗತ್ಯವಿದೆ ಎಂಬ ಕೂಗು ಎದ್ದಿತ್ತು. ೧೯೫೪ರ ಜೂನ್ ೫ ಮತ್ತು ೭ರಂದು ಅಂದಿನ ಮೈಸೂರು ಸರ್ಕಾರದ ಮಂತ್ರಿಗಳು ಮತ್ತು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಉನ್ನತ ಸಮಿತಿಯೊಂದು ರಚನೆಯಾಗಿತ್ತು. ಆ ಸಮಿತಿಯಲ್ಲಿದ್ದ ಸದಸ್ಯರೆಗಳೆಂದರೆ ಮೈಸೂರು ಸರ್ಕಾರದ ಮಾಜಿ ಮಂತ್ರಿ ಎಂ.ಶೇಷಾದ್ರಿ, ಮೈಸೂರು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಟಿ.ಸಿಂಗಾರ ವೇಲು, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ವಿ.ಎಲ್.ಡಿಸೌಜಾ, ಬೆಂಗಳೂರು ಜಿಲ್ಲಾ ಮಂಡಳಿಯ ಮಾಜಿ ಅಧ್ಯಕ್ಷ ಎಚ್.ಆರ್.ಗುರುವಾರೆಡ್ಡಿ ಮತ್ತು ಚಿತ್ರದುರ್ಗ ನ್ಯಾಯವಾದಿಗಳಾಗಿದ್ದ ಓ.ವೀರಬಸಪ್ಪ ಅವರು. ಮದ್ರಾಸ್, ಮುಂಬೈ, ಹೈದರಾಬಾದ್ ಹಾಗೂ ಕೊಡಗು ಪ್ರಾಂತ್ಯದಲ್ಲಿ ವಾಸವಾಗಿರುವ ಕನ್ನಡಿಗರ ಬಗ್ಗೆ ಅಧ್ಯಯನ ನಡೆಸುವುದು ಹಾಗೂ ನೀರಾವರಿ, ವಿದ್ಯುತ್, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯದ ಸ್ಥಿತಿಗತಿ ಸಂಪನ್ಮೂಲ ಲಭ್ಯತೆ ಹೀಗೆ ಹಲವು ಹತ್ತು ವಿಷಯಗಳನ್ನು ಪರಿಶೀಲಿಸುವಂತೆ ಅಂದಿನ ಸರ್ಕಾರ ಈ ಸಮಿತಿಗೆ ಆದೇಶಿಸಿತ್ತು. ಈ ಸಂಬಂಧ ಮೈಸೂರು ಸರ್ಕಾರ ಅಧಿಕೃತ ಗೆಜೆಟ್ ಪ್ರಕಟಣೆ ಕೂಡ ನೀಡಿತ್ತು. ಸಮಿತಿಯು ಅಧ್ಯಯನದ ಸಲುವಾಗಿ ರಾಯಚೂರು, ಬೀದರ್, ಕೊಪ್ಪಳ, ಗುಲ್ಬರ್ಗ, ಬಿಜಾಪುರ, ಧಾರವಾಡ, ಬೆಳಗಾವಿ ಮೊದಲಾದ ಪ್ರದೇಶಗಳಿಗೆ ಭೇಟಿ ನೀಡಿ ತನ್ನ ವರದಿಯನ್ನು ಸಲ್ಲಿಸಿತ್ತು. ಆದರೆ ಈ ವರದಿಯನ್ನು ಸರ್ಕಾರವು ಪರಿಗಣನೆಗೆ ತೆಗೆದುಕೊಳ್ಳಲಿಲ್ಲ. ಇದರೊಂದಿಗೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಚಳವಳಿ ಆರಂಭವಾಯಿತು.

ಈ ಚಳವಳಿಯ ಬಗ್ಗೆ ವಿವರಿಸುವ ಮೊದಲು ಕರ್ನಾಟಕದಲ್ಲಿ ನ್ಯಾಯಾಂಗ ವ್ಯವಸ್ಥೆಯು ಬೆಳೆದು ಬಂದ ಬಗೆಯನ್ನು ತಿಳಿದುಕೊಳ್ಳುವುದು ಮುಖ್ಯ.

ವ್ಯವಹಾರದಲ್ಲಿ (ನ್ಯಾಯಿಕ ವ್ಯವಹಾರಣೆಯನ್ನು ವಿನಿಮಯಿಸುವ ನ್ಯಾಯಗಳು) ಮತ್ತು ಧರ್ಮದಲ್ಲಿ (ಎಲ್ಲ ವಿಷಯದ ನ್ಯಾಯದಲ್ಲಿ) ಪರಿಣತನಾದ ಮತ್ತು ಬಹು ಶ್ರುತನಾದ [ಪ್ರಗಲ್ಭ ಪಂಡಿತನಾದ] ಪ್ರಮಾಣಜ್ಞನಾದ [ಸಾಕ್ಷ್ಯನ್ಯಾಯದಲ್ಲಿ ಪರಿಣತನಾದ) ನ್ಯಾಯಶಾಸ್ತ್ರಾವಲಂಬಿಯಾದ ಮತ್ತು ವೇದ ಮತ್ತು ತರ್ಕಶಾಸ್ತ್ರವನ್ನು ಪೂರ್ಣವಾಗಿ ಅಧ್ಯಯನ ಮಾಡಿದ ವ್ಯಕ್ತಿಯನ್ನು ನ್ಯಾಯಾಡಳಿವನ್ನು ನಿರ್ವಹಿಸಲು ನಿಯುಕ್ತಿ ಮಾಡಬೇಕು ಎಂದು ಮಹಾಭಾರತವು ಹೇಳುತ್ತದೆ. ಎಲ್ಲಾ ಸ್ಮೃತಿಗಳು ಈ ಅರ್ಹತೆಯನ್ನು ಪುನಾರಚಿಸಿವೆ. ನಿಷ್ಪಕ್ಷಪಾತವಾಗಿ ಮತ್ತು ನಿರ್ಭೀತವಾಗಿ ನ್ಯಾಯದಾನ ಮಾಡುವುದೇ ರಾಜನ ಮತ್ತು ನ್ಯಾಯಾಧೀಶನ ಪರಮೋಚ್ಚ ಧರ್ಮವಾಗಿತ್ತೆಂಬುದನ್ನು ಮನ್ನಿಸಲಾಗಿತ್ತು ಮತ್ತು ಘೋಷಿಸಲಾಗಿತ್ತು. ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶನು (ಸಭ್ಯ ಎಂದರೆ ನ್ಯಾಯ ಸಭೆಯ ಸದಸ್ಯ) ಪ್ರೀತಿ, ಅನಾದರಗಳನ್ನು ಬದಿಗಿಟ್ಟು ತನ್ನ ನ್ಯಾಯವಾದ ಅಭಿಪ್ರಾಯವನ್ನು ನೀಡಬೇಕು ಎಂದು ಧರ್ಮಕೋಶ ವಿಧಿಸುತ್ತದೆ. ನ್ಯಾಯಾಧೀಶನ ಪಕ್ಷಪಾತಕ್ಕೆಡೆಕೊಡುವ ಐದು ಕಾರಣಗಳಿವೆ. ಆ ಕಾರಣಗಳೆಂದರೆ ಶುಕ್ರನೀತಿಯ ಪ್ರಕಾರ 'ಒಬ್ಬ ಪಕ್ಷಕಾರನ ಬಗ್ಗೆ ಒಲವು, ಭಯ, ಲೋಭ, ಒಬ್ಬ ಪಕ್ಷಕಾರನ ಬಗ್ಗೆ ದ್ವೇಷ ಮತ್ತು ಪಕ್ಷಕಾರರಲ್ಲಿ ಒಬ್ಬರೊಂದಿಗೆ ರಹಸ್ಯವಾದ ಭೇಟಿ ಹಾಗೂ ಸಂಭಾಷಣೆ' ಇವೇ ಆಗಿರುತ್ತವೆ. ನ್ಯಾಯಾಡಳಿತ ನಡೆಸುವ ರಾಜನಾಗಲಿ ನ್ಯಾಯಾಧೀಶನಾಗಲಿ ಒಂದು ಪಕ್ಷದ ಬಗ್ಗೆ ಮತ್ತೊಂದು ಪಕ್ಷದವರ ಮನಸ್ಸಿನಲ್ಲಿ ಪಕ್ಷಪಾತದ ಸಂದೇಹಕ್ಕೆ ಅವಕಾಶ ಕೊಡುವಂತೆ ವರ್ತಿಸತಕ್ಕದ್ದಲ್ಲ ಎಂದು ಪ್ರಾಚೀನ ಧರ್ಮಶಾಸ್ತ್ರಗಳು ಒತ್ತಿ ಹೇಳಿವೆ. ಪ್ರಾಚೀನ ಭಾರತದ ನ್ಯಾಯ ಪದ್ಧತಿಯ ಮೇರೆಗೆ ಇತರ ಪ್ರಾಚೀನ ಪದ್ಧತಿಗಳಂತಲ್ಲದೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ಬಗ್ಗೆ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಲಾಗಿತ್ತು. ಅವುಗಳನ್ನು ಸಂಪತ್ತಿನ ಮೂಲಕ ಹುಟ್ಟುವ (ಅರ್ಥಸಮುತ್ಥಾನಿ) ಮತ್ತು ಹಿಂಸೆಯಿಂದ ಹುಟ್ಟುವ (ಹಿಂಸೋಧ್ಭಾವನಿ) ಎಂದು ಗುರುತಿಸಲಾಗಿದೆ. ಉತ್ಪತ್ತಿ ವಿಧಿಯನ್ನು ೧೮ ಶೀರ್ಷಿಕೆಗಳಲ್ಲಿ ವಿಭಜಿಸಲಾಗಿದೆ. ಅವುಗಳಲ್ಲಿ ೧೩ ಸಿವಿಲ್ ಮತ್ತು ಐದು ಕ್ರಿಮಿನಲ್ ಶೀರ್ಷಿಕೆಗಳಾಗಿವೆ. ಇದಲ್ಲದೆ ಆಧುನಿಕ ಕಾನೂನುಗಳನ್ನು ಒಳಗೊಳ್ಳುವಂತಹ ಅನೇಕ ವಿಷಯಗಳಿಗೆ ಸಂಬಂಧಿಸಿದ ಸಿವಿಲ್ ಮತ್ತು ಕ್ರಿಮಿನಲ್ ವಿಷಯಕ್ಕೆ ಅಪಾರ ಸಂಖ್ಯೆಯ ಉಪಬಂಧಗಳು ಇವೆ.

ಸಿವಿಲ್ ವಿಧಿಗಳಲ್ಲಿ ಋಣ, ಜಾಮೀನು, ಠೇವಣಿಗಳು, ಒತ್ತೆ, ಮಾರಾಟ, ದಾನ, ಪಾಲುಗಾರಿಕೆ ಕರಾರುಭಂಗ, ಒಡೆಯ ಮತ್ತು ನೌಕರ, ಗಡಿ ಜಗಳಗಳು, ಪಂದ್ಯ ಮತ್ತು ಜೂಜಾಟ ವಿಭಾಗ ಮತ್ತು ಗಂಡ ಹೆಂಡತಿಯರ ವಿವಾದಗಳು, ಇವು ೧೩ ನ್ಯಾಯ ಶೀರ್ಷಿಕೆಗಳಾಗಿವೆ. ಸಂಕೀರ್ಣ ಶೀರ್ಷಿಕೆಗಳಲ್ಲಿ ಬರುವ ವಿಷಯಗಳು ಅಪಾರವಾಗಿವೆ. ಅವುಗಳಲ್ಲಿ ತೂಕ ಮತ್ತು ಅಳತೆಗಳು, ತೆರಿಗೆ ವಿಧಿಸುವಿಕೆ, ಭೂವಿಧಿಗಳು ಮತ್ತು ಕೆಲಸ ಕಲಿಯುವವರು ಇತ್ಯಾದಿ ವಿಷಯಗಳು ಸೇರಿರುತ್ತವೆ. ಕ್ರಿಮಿನಲ್ ವಿಧಿಗಳಲ್ಲಿ ಐದು ಪ್ರಧಾನ ಕ್ರಿಮಿನಲ್ ಶೀರ್ಷಿಕೆಗಳೆಂದರೆ ಮಾನಹಾನಿ, ಹಲ್ಲೆ, ಹಿಂಸಾತ್ಮಕ ಅಪರಾಧಗಳು, ನರಹತ್ಯೆ ಮತ್ತು ಕಳ್ಳತನ, ಅಪರಾಧವನ್ನು ತಡೆಗಟ್ಟಲು ಅಥವಾ ಸಾರ್ವಜನಿಕ ಸ್ವತ್ತಿಗೆ ನಷ್ಟವಾಗುವುದನ್ನು ತಪ್ಪಿಸಲು ತಪ್ಪುವುದು. ರಾಜ್ಯ ಮತ್ತು ನ್ಯಾಯಾಡಳಿತದ ವಿರುದ್ಧ ಅಪರಾಧಿಗಳು, ಸರ್ಕಾರಿ ನೌಕರರಿಂದ ಅಪರಾಧಗಳು, ವೃತ್ತಿ ವ್ಯಾಪಾರಿಗಳ ಅಪವರ್ತನೆ, ಇತ್ಯಾದಿಗಳು ಸಂಕೀರ್ಣ ಶೀರ್ಷಿಕೆಗಳಲ್ಲಿ ಸೇರಿವೆ.

ಸಂಪತ್ತಿಗೆ ಸಂಬಂಧಿಸಿ ಉದ್ಭವಿಸುವ ವಿವಾದಗಳಲ್ಲಿ ತನ್ನ ಅಧಿಕಾರಕ್ಕೆ ಬಾಧೆಯುಂಟಾದ ಪಕ್ಷಕಾರನ ಕೋರಿಕೆಯ ಮೇರೆಗೆ ಪ್ರಕರಣವನ್ನು ಪ್ರಾರಂಭಿಸಲಾಗುತ್ತಿತ್ತು ಮತ್ತು ವಾದಿಗೆ ದೊರಕಬೇಕಾಗಿದ್ದ

ಆರ್ಥಿಕ ಪರಿಹಾರವನ್ನು ದೊರಕಿಸಿಕೊಡುವುದೇ ಅಂತಿಮ ಉದ್ದೇಶವೂ ಆಗಿತ್ತು ಹಿಂಸೆಯಿಂದ ಉದ್ಭವಿಸುವ ಪ್ರಕರಣವನ್ನು ತೊಂದರೆಗೀಡಾದವನ ಕೋರಿಕೆಯ ಮೇರೆಗೆ ಅಥವಾ ಯಾವೊಬ್ಬ ವ್ಯಕ್ತಿಯಿಂದ ದೊರೆತ ಮಾಹಿತಿಯ ಆಧಾರದ ಮೇಲೆ ಅಥವಾ ಆ ಉದ್ದೇಶಕ್ಕಾಗಿ ನಿಯುಕ್ತನಾದ ಯಾವೊಬ್ಬ ಸರ್ಕಾರಿ ಅಧಿಕಾರಿಯಿಂದ ತಿಳಿದು ಬಂದಾಗ ಆರೋಪಿತನ ವಿರುದ್ಧ ಹೂಡಬಹುದಾಗಿತ್ತು. ಉತ್ಕಟಗೊಳಿಸುವ ಅಥವಾ ತೀವ್ರಗೊಳಿಸುವ ಎಲ್ಲಾ ಅಂಶಗಳನ್ನು ಗಮನಕ್ಕೆ ತಂದುಕೊಂಡು ಅಪರಾಧಿಗೆ ನ್ಯಾಯವಾದ ದಂಡನೆ ವಿಧಿಸುವುದು ಅಂತಿಮ ಆದೇಶದ ಸ್ವರೂಪವಾಗಿತ್ತು. ದಂಡನೆಯ ಉದ್ದೇಶವು ಅಪರಾಧಿ ವ್ಯಕ್ತಿಯನ್ನು ಸುಧಾರಿಸುವುದು, ನಿಗ್ರಹಿಸುವುದು ಆಗಿತ್ತು. ಆರ್ಥಿಕ ಹಾನಿಗೊಳಗಾದವರಿಗೆ ಪರಿಹಾರ ನೀಡುವ ಅಂಶವು ಕೂಡ ಕ್ರಿಮಿನಲ್ ಪ್ರಕ್ರಿಯ ವಿಧಿಯಲ್ಲಿ ಸೇರಿತ್ತು. ಆದಾಗ್ಯೂ ಕ್ರಿಮಿನಲ್ ವಿಧಿ ವಿಧಾನಗಳಲ್ಲಿ ಅಧಿಕ ಹಾನಿಯಿಂದ ತೊಂದರಿಗೊಳಗಾದವರಿಗೆ ಪರಿಹಾರ ನೀಡುವ ಅಂಶವನ್ನು ಸೇರಿಸಲಾಗಿದೆ. ಕಳ್ಳತನ ಅಥವಾ ದರೋಡೆ ಆದ ಸಂದರ್ಭದಲ್ಲಿ ಅಪರಾಧಿಯು ಸಿಕ್ಕಿದ್ದರೆ ಅಥವಾ ಸಿಕ್ಕರೂ ಒಡೆಯನಿಗೆ ಸ್ವತ್ತನ್ನು ಹಿಂದಿರುಗಿಸಲು ಅವನು ಅಸಮರ್ಥನಾಗಿದ್ದರೆ ಜನರಿಂದ ವಸೂಲು ಮಾಡಿಕೊಳ್ಳುವ ಕರಕ್ಕೆ ಪ್ರತಿಯಾಗಿ ಜನತೆಗೆ ರಕ್ಷಣೆ ನೀಡುವ ತನ್ನ ಕರ್ತವ್ಯದ ಭಾಗವಾಗಿ ಒಡೆಯನಿಗೆ ನಷ್ಟವನ್ನು ತುಂಬಿಕೊಡುವುದು ರಾಜನ ಹೊಣೆಯಾಗಿತ್ತು. ಅಂದರೆ ರಾಜ್ಯಕ್ಕೆ ಕರ ಸಂದಾಯ ಮಾಡುವುದೆಂದರೆ ಕಳ್ಳತನ ಅಥವಾ ದರೋಡೆಯ ವಿರುದ್ಧ ವಿಮೆ ಮಾಡಿದಂತೆ ಎಂದು ಪರಿಗಣಿಸಲಾಗಿತ್ತು. ಸ್ಮೃತಿಗಳು, ಅದರಲ್ಲಿಯೂ ಬೃಹಸ್ಪತಿ ಕಾತ್ಯಾಯನ ಮತ್ತು ನಾರದರ ಸ್ಮೃತಿತ್ರಯಗಳು ಪ್ರಕ್ರಿಯಾ ವಿಧಿಗಳನ್ನು ನಿರೂಪಿಸಿವೆ. ಇವು ಪ್ರಗತಿಪರ ರಾಜ್ಯದ ಸಂಕೇತಗಳಾಗಿವೆ. ಅವುಗಳಲ್ಲಿರುವ ಕೆಲವು ಮಹತ್ವದ ಅಂಶಗಳು ಫಿರ್ಯಾದು ಮತ್ತು ಲಿಖಿತ ಹೇಳಿಕೆಯ ಒಳಾಂಶಗಳಿಗೆ ರುಜುವಾತಿನ ಹೊಣೆಯ ನಿಯಮಗಳಿಗೆ ಸಾಕ್ಷಿಗಳನ್ನು ಮತ್ತು ದಸ್ತಾವೇಜುಗಳನ್ನು ಪರೀಕ್ಷಿಸುವುದೂ ಸೇರಿ ವಿಚಾರಣೆಯ ಪ್ರಕ್ರಿಯೆಗೆ ಮತ್ತು ತೀರ್ಪುಗಳ ಬರವಣಿಗೆಗೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡಿವೆ. ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವನ್ನು ಒಳಗೊಂಡ (ವ್ಯವಹಾರ) ಧರ್ಮ ಎಂಬ ಅಭಿವ್ಯಕ್ತಿಯನ್ನು ಬೃಹದಾರಣ್ಯಕ ಉಪನಿಷತ್ತಿನಲ್ಲಿ 'ರಾಜನಿಗೆ ರಾಜ್ಯ ನ್ಯಾಯಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ. ರಾಜಸತ್ತೆಯ ನೆರವಿನಿಂದ ಅದು ದುರ್ಬಲರನ್ನು ಕೂಡ ಬಲಿಷ್ಠರನ್ನು ಬಗ್ಗಿಸುವಂತೆ ಮಾಡುತ್ತದೆ'. ಎಂದು ಪರಿಭಾವಿಸಲಾಗಿದೆ. ಹೀಗೆ ಧರ್ಮವೇ ಪರಮೋಚ್ಚ ನ್ಯಾಯವೆಂಬ ನ್ಯಾಯ ನಿಯಮದ ಪಾರಮ್ಯವನ್ನು ರಾಜರೂ ಜಗಳವಾಡಿ ಒಪ್ಪಿಕೊಂಡು ಆ ಪ್ರಕಾರ ನಡೆಯುತ್ತಿದ್ದರು. ಈ ಪದ್ಧತಿಯಲ್ಲಿ ಧರ್ಮವೇ ಅಂತಿಮ ಪರಮಾಧಿಕಾರವಾಗಿದ್ದು, ರಾಜಾಧಿಕಾರವು ಅದಕ್ಕೆ ಅಧೀನವಾದುವಾಗಿತ್ತು[೨].

೨.೧. ಪ್ರಾಚೀನ ಕರ್ನಾಟಕದಲ್ಲಿ ನ್ಯಾಯಾಡಳಿತ

ಕರ್ನಾಟಕದಲ್ಲಿ ನ್ಯಾಯಾಡಳಿತವು ಭಾರತದಲ್ಲಿ ಬೇರೆ ಕಡೆ ಇದ್ದಂತೆ ರಾಜಧರ್ಮದ ಮೇರೆಗೆ ರಾಜನ ಮತ್ತು ರಾಜ್ಯದ ಮೂಲಭೂತವಾದ ಮತ್ತು ಅವಶ್ಯಕ ಕಾರ್ಯಭಾಗಗಳಲ್ಲಿ ಒಂದಾಗಿತ್ತು. ದುಷ್ಟಮರ್ದನ, ಶಿಷ್ಟರಕ್ಷಣ, ನ್ಯಾಯಮಾರ್ಗದಿಂದ ಭಂಡಾರವನ್ನು ಸಮೃದ್ಧಿಗೊಳಿಸುವುದು, ವಾದಿಗಳಿಗೆ ನಿಷ್ಪಕ್ಷಪಾತವಾದ ನ್ಯಾಯ ಪ್ರದಾನ ಮತ್ತು ರಾಜ್ಯ ರಕ್ಷಣೆ ಇವರು ರಾಜನಿಗೆ ವಿಧಿಸಿದ ಯಜ್ಞರೂಪದ ೫ ಬಗೆಯ ಪವಿತ್ರ ಕರ್ತವ್ಯಗಳಾಗಿದ್ದವು ಎಂದು ಪ್ರಾಚೀನ ವಿಚಾರವಂತನಾದ ಅತ್ರಿ ಹೇಳಿದ್ದಾನೆ.[೩] ಹೀಗೆ ನಿಷ್ಪಕ್ಷಪಾತ ರೀತಿಯಲ್ಲಿ ನ್ಯಾಯಾಡಳಿತ ನಡೆಸುವುದು ರಾಜ್ಯದ ಮೂಲ ಪ್ರಕಾರಗಳಲ್ಲಿ

ಒಂದಾಗಿತ್ತು. ರಾಜನು ಈ ರೂಪದ ಕಾರ್ಯವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಸಾರಭೂತ ಪ್ರಕ್ರಿಯಾ ನ್ಯಾಯಗಳ ಕ್ರೋಡಿಕರಣವು ಅವಶ್ಯವಾಗಿತ್ತು.

ಈ ಕರ್ತವ್ಯವನ್ನು ನ್ಯಾಯ ನಿರೂಪಕರು ಸಮರ್ಥವಾಗಿ ನಿರ್ವಹಿಸಿದ್ದಾರೆ ಮತ್ತು ಅವರು ಧರ್ಮ ಶಾಸ್ತ್ರಗಳನ್ನು ಅಥವಾ ಸ್ಮತಿಗಳನ್ನು ಕ್ರೋಡಿಕರಿಸಿದ್ದಾರೆ. ಸ್ಮೃತಿಕಾರರಲ್ಲಿ ಮನು, ಯಾಜ್ಞವಲ್ಕ್ಯ, ಪರಾಶರ, ನಾರದ, ಬೃಹಸ್ಪತಿ, ಕಾತ್ಯಾಯನ ಮತ್ತು ಕೌಟಿಲ್ಯ ಇವರು ಬಹು ಮುಖ್ಯವಾಗಿದ್ದಾರೆ. ಇವರ ಕೃತಿಗಳಲ್ಲಿ ರಾಜಧಾನಿಯಲ್ಲಿರುವ ಅತ್ಯುನ್ನತ ನ್ಯಾಯಾಲಯದ ಮತ್ತು ರಾಜಾಧಿಕಾರದ ಮೇರೆಗೆ ಸ್ಥಾಪಿತವಾದ ಕೆಳ ನ್ಯಾಯಾಲಯಗಳ ರಚನೆ ಮತ್ತು ಅಧಿಕಾರಿಗಳಿಗೆ ಸಂಬಂಧಿಸಿದ ವಿಸ್ತಾರವಾದ ನಿಯಮಗಳನ್ನು ಅಳವಡಿಸಲಾಗಿದೆ. ಈ ನಿಯಮಗಳು ವಿವಾದಗಳನ್ನು ತೀರ್ಮಾನಿಸುವ ಜನತಾ ನ್ಯಾಯಾಲಯಗಳನ್ನು ಮನ್ನಿಸುವ ಬಗ್ಗೆ ಉಪಬಂಧಗಳನ್ನು ಒಳಗೊಂಡಿವೆ. ರಾಜರ ಆ ಸ್ಥಾನಗಳ ನ್ಯಾಯಾಧೀಶರ ಮತ್ತು ಅಧಿಕಾರಿಗಳ ಅರ್ಹತೆಗಳು ಮತ್ತು ಅಗತ್ಯವಿದ್ದಾಗ ತಾಂತ್ರಿಕ ಪ್ರಶ್ನೆಗಳ ವಿಷಯದಲ್ಲಿ ನ್ಯಾಯಾಲಯಕ್ಕೆ ಸಹಾಯ ನೀಡುವ ತಜ್ಞ ಸಭ್ಯರ ನೇಮಕ, ವಿಧಿ ವಿಧಾನ ನಿಯಮಗಳು ಮತ್ತು ಸಾಕ್ಷ್ಯ ಸ್ವೀಕಾರವನ್ನು ನಿಯಂತ್ರಿಸುವ ಕಾನೂನು ಇವೆಲ್ಲವುದರ ಬಗ್ಗೆ ಕೂಡ ಅವಕಾಶಗಳನ್ನು ಕಲ್ಪಿಸಲಾಗಿತ್ತು. ನ್ಯಾಯಾಧೀಶರ ಮತ್ತು ನ್ಯಾಯಾಡಳಿತಕ್ಕೆ ಸಂಬಂಧಿಸಿದ ನಡೆ-ನಡಾವಳಿಯ ಬಗ್ಗೆ ಸಂಹಿತೆಯನ್ನು ಮತ್ತು ನ್ಯಾಯಾಡಳಿತದ ವಿರುದ್ಧ ನಡೆಯುವ ಅಪರಾಧದ ಬಗ್ಗೆ ದಂಡನೆಗಳನ್ನು ವಿಧಿಸುವ ಬಗ್ಗೆ ಸಂಬಂಧಗಳನ್ನು ರಚಿಸಲಾಗಿತ್ತು.[೪]

ಸ್ಥಳೀಯ ನ್ಯಾಯಾಡಳಿತಕ್ಕೆ ಸಂಬಂಧಪಟ್ಟಂತೆ ಪ್ರಾಚೀನ ಕರ್ನಾಟಕದಲ್ಲಿ ನ್ಯಾಯ ತೀರ್ಮಾನವು ಗ್ರಾಮ ಸಭೆ ಇಲ್ಲವೇ ಪಟ್ಟಣ ಸಮುದಾಯಗಳೆಂಬ ಸ್ಥಳೀಯ ಆಡಳಿತ ಬಹುಮಟ್ಟಿಗೆ ನಡೆಯುತ್ತಿತ್ತು. ಅಗ್ರಹಾರಗಳಲ್ಲಿ ಮಹಾಜನರ ಸಭೆ ಇತ್ತು. ಕೆಲವೊಮ್ಮೆ ಜಾತಿಯ ಶ್ರೇಣಿ(ಗಿಲ್ಡ್) ಅಥವಾ ನಿಗಮಗಳೇ ಈ ಕಾರ್ಯ ಮಾಡುತ್ತಿದ್ದವು. ಜಾತಿಗಳು ನಿರ್ಣಯಿಸುವ ವಿಚಾರಗಳು ಕೌಟುಂಬಿಕ ವ್ಯವಹಾರ (ಗಂಡ ಹೆಂಡಿರ ವ್ಯಾಜ್ಯಗಳು), ಆಸ್ತಿ ಪಾಲುಗಾರಿಕೆಯ ವ್ಯಾಜ್ಯಗಳು ಸಾಮಾಜಿಕ ಸ್ಥಾನಮಾನಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಇರುತ್ತಿದ್ದವು. ಜಾತಿಯ ಹಿರಿಯರು ಅಥವಾ ಕಟ್ಟೆ ಮನೆಗಳೂ ಇದ್ದವು. ತೆಲ್ಲಿಗ ಐವತ್ತು ಎಂಬ ಜಾತಿ ಶ್ರೇಣಿ (ಗಾಣಿಗರದು) ಉಗುರ ಮುನ್ನೂರ್ವರು ಅಥವಾ ಗಳೆಮುನ್ನೂರ್ವರು ಎಂಬ ತೋಟದ ಕೆಲಸಗಾರರ ಶ್ರೇಣಿ ಇವೆಲ್ಲ ಜಾತಿ ಸಂಘಟನೆಗಳಿಗೆ ಉದಾಹರಣೆಗಳು. ಅದೇ ರೀತಿ ಊರು ಸಮುದಾಯಗಳೆಂದರೆ ಹಿರಿಯ ಕುರಿಯಟ್ಟಿಯ ಐವತ್ತೊಕ್ಕಲು ಕೊಡಮಗ್ಗಿಯ ಅರ್ವತ್ತೊಕ್ಕಲು, ನೀರಲಗಿಯ ಅರುವತ್ತೊಕ್ಕಲು ಮುಂತಾದ ಗ್ರಾಮ ಸಭೆಗಳ ಉಲ್ಲೇಖವಿದೆ. ಅಗ್ರಹಾರಗಳಲ್ಲಿ ಚಕ್ಕಲಿಯ ೨೦೦ ಮಹಾಜನರು ಚಿಕ್ಕೆರೂರ ೧೦೦೦ ಮಹಾಜನರು ಹೀಗೆ ಉಲ್ಲೇಖ ಬರುತ್ತದೆ. ಒಂದು ಊರಲ್ಲಿ ಅಗ್ರಹಾರವು ಅದರ ಭಾಗವಾಗಿದ್ದಾಗ ಅಗ್ರಹಾರದ ಮಹಾಜನರೂ ಊರ ಒಕ್ಕಲೂ ಕೂಡಿ ಊರ ಆಡಳಿತ ನಡೆಸುತ್ತಿದ್ದ ಸಂಗತಿ ನೇರಲಗಿಯಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ.[೫]

ಸ್ಥಳೀಯ ಸಂಸ್ಥೆಗಳು ನ್ಯಾಯ ತೀರ್ಮಾನವನ್ನು ಸಾಧ್ಯವಿದ್ದಷ್ಟು ಎರಡೂ ಪಕ್ಷಕ್ಕೆ ಮಾನ್ಯವಾಗುವಂತೆ ಮಾಡುತ್ತಿದ್ದರು. ಮಹಾಪರಾಧಗಳು (ಪಾತಕಗಳು) ಹಾಗೂ ಆಸ್ತಿಯ ಬಗೆಗಿನ ಭಾರೀ ದಾವೆಗಳಿದ್ದಲ್ಲಿ ಸರಕಾರಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದರು. ಅವರಲ್ಲಿ ಸೇನಾನಿಗಳು (ದಂಡನಾಯಕರು)

ನಾಡಪೆರ್ಗಡೆ, ನಾಡಗೌಡ ಅಥವಾ ಮಂಡಲೇಶ್ವರರೂ ಸೇರಿದ್ದರು. ನ್ಯಾಯಾಧಿಕರಣ ಎಂಬ ಹೆಸರು ಶಾಸನಗಳಲ್ಲಿ ಕಾಣಬರುತ್ತದೆ. ಮರಾಠರು 'ರಾಜ್ಯಾಧ್ಯಕ್ಷ' ಎಂಬ ನ್ಯಾಯಾಧೀಶನನ್ನು ನೇಮಿಸಿದ್ದರು. ಆದಿಲ್ ಷಾಹಿ ಮತ್ತು ಮೊಘಲ್ ಆಡಳಿತದಲ್ಲಿ 'ಖಾಜಿ' ಎಂಬ ನ್ಯಾಯಾಧಿಕಾರಿಯಿದ್ದನು. ಸ್ವತಃ ರಾಜ, ಮಂತ್ರಿ ಇಲ್ಲವೇ ರಾಜನೇ ನ್ಯಾಯ ತೀರ್ಮಾನ ನೀಡಿದ ಪ್ರಕರಣಗಳು ಇಲ್ಲದೇ ಇಲ್ಲ. ಅಬ್ಬಲೂರು ಶಾಸನದಲ್ಲಿ ರಾಜ ಬಿಜ್ಜಳನೇ ನ್ಯಾಯ ನೀಡಿದ ವಿವರವಿದೆ. ಲಕ್ಷ್ಮೇಶ್ವರದ ಶೈವರಿಗೂ ಜೈನರಿಗೂ ಆದ ವ್ಯಾಜ್ಯವೊಂದನ್ನು ಹಂಪಿಯಿಂದ ರಾಜ ಪುರೋಹಿತರು ಬಂದು ಜೈನರ ಪರ ತೀರ್ಮಾನಿಸಿದ ಪ್ರಕರಣವಿದೆ.[೬]

ಮನುವಿನ ಬಗ್ಗೆ ವ್ಯಾಖ್ಯಾನಕಾರರಾದ ಅಪರಾರ್ಕ ಮತ್ತು ವಿಜ್ಞಾನೇಶ್ವರ, ನಾರದನ ಬಗ್ಗೆ ವ್ಯಾಖ್ಯಾನಕಾರರಾದ ಅಸಹಾಯ ಹಾಗೂ ಪರಾಶರ, ಕೌಟಿಲ್ಯ ಮತ್ತು ಜೀಮೂತವಾಹನರ ಬಗ್ಗೆ ವ್ಯಾಖ್ಯಾನಕಾರನಾದ ಮಾಧವ ಇವರಲ್ಲಿ ವಿಜ್ಞಾನೇಶ್ವರ ಮತ್ತು ಮಾಧವ ಕರ್ನಾಟಕದವರಾಗಿರುವುದು ಕರ್ನಾಟಕಕ್ಕೆ ಸಂದ ಗೌರವವಾಗಿದೆ. ವಿಜ್ಞಾನೇಶ್ವರನು ಒಬ್ಬ ಮಹಾನ್ಯಾಯವಂತನಾಗಿ ಕಲ್ಯಾಣದ ಚಾಳುಕ್ಯ ಮನೆತನದ ೬ನೆಯ ವಿಕ್ರಮಾದಿತ್ಯನ ಕಾಲದಲ್ಲಿ(೧೦೭೬-೧೧೨೭) ಪ್ರಸಿದ್ಧಿ ಹೊಂದಿದ್ದನು. ಮಾಧವನು ವಿಜಯನಗರ ಸಾಮ್ರಾಜ್ಯದಲ್ಲಿ ಮಂತ್ರಿಯಾಗಿದ್ದನು. "ಮಿತಾಕ್ಷರ ಸಂಹಿತ" ರಚಿಸಿದ ವಿಜ್ಞಾನೇಶ್ವರನು ಮರತೂರು ಗ್ರಾಮದಲ್ಲಿ ನೆಲಸಿದ್ದನು. ಕೆಲವೊಂದು ಅಲ್ಪ ಬದಲಾವಣೆ ಬಿಟ್ಟರೆ ಹಿಂದೂ ಅವಿಭಕ್ತ ಕುಟುಂಬ, ಆಸ್ತಿ ಹಂಚಿಕೆ, ಆಸ್ತಿ ಹಕ್ಕುಗಳು ಸ್ತ್ರೀಧನ, ಉತ್ತರಾಧಿಕಾರತ್ವ ಮೊದಲಾದವುಗಳಿಗೆ ಸಂಬಂಧಿಸಿದ ಕಾನೂನುಗಳಿಗೆ 'ಮಿತಾಕ್ಷರ'ವೇ ಮೂಲಾಧಾರ. ಮಿತಾಕ್ಷರ, ಯಾಜ್ಞವಲ್ಕ್ಯ ಸ್ಮೃತಿ, ಮನುಸ್ಮೃತಿಯ ನಂತರ ರಚಿಸಿದಂಥ ಮೂರು ಕೃತಿಗಳಾಗಿವೆ. 'ಮಿತಾಕ್ಷರ' ಎಂಬ ಹೆಸರಿನ ವಿಜ್ಞಾನೇಶ್ವರನ ವ್ಯಾಖ್ಯಾನವು ಅಸಾಧಾರಣ ಮಹತ್ವದ್ದಾಗಿದೆ. ಅದರಲ್ಲಿ ವಿಶೇಷವಾಗಿ ಅವಿಭಕ್ತ ಹಿಂದೂ ಕುಟುಂಬದ ದಾಯಾದಿಗಳು ಮತ್ತು ಇತರ ಸದಸ್ಯರ ಪಿತ್ರಾರ್ಜಿತ ಸ್ವತ್ತಿನ ಸಂಬಂಧದಲ್ಲಿ ಜನ್ಮಸಿದ್ಧವಾದ ಅಧಿಕಾರಗಳನ್ನು ಕುರಿತ ಅವನ ನ್ಯಾಯ ನಿರೂಪಣೆಯನ್ನು ಬಂಗಾಳವೊಂದನ್ನುಳಿದು ಇಡೀ ಭಾರತದಲ್ಲಿ ಪ್ರಮಾಣವೆಂದು ಒಪ್ಪಿಕೊಳ್ಳಲಾಗಿದೆ. ಬಂಗಾಳದಲ್ಲಿ ಜೀಮೂತವಾಹನನ ವ್ಯಾಖ್ಯಾನವು ಪ್ರಮಾಣವಾಗಿದ್ದು ಅದು ಪಿತ್ರಾರ್ಜಿತ ಸ್ವತ್ತಿನಲ್ಲಿ ಜನ್ಮಸಿದ್ಧವಾದ ಅಧಿಕಾರವನ್ನು ಒಪ್ಪುವುದಿಲ್ಲ. ಹೊಸ ಕಾನೂನುಗಳ ಬದಲಾವಣೆಗಳಿಗೆ ಒಳಪಟ್ಟರೂ ಇವು ಇಂದಿಗೂ ಆಚರಣೆಯಲ್ಲಿವೆ.[೭]

ಪ್ರಾಚೀನ ಸಮಾಜದಲ್ಲಿ ಹೀಗೆ ವಿಕಾಸಗೊಂಡು ಅಭಿವೃದ್ಧಿಯಾದ ನ್ಯಾಯ ವ್ಯವಸ್ಥೆಯು ಮತ್ತು ನ್ಯಾಯ ವ್ಯವಸ್ಥೆಯ ಮೂಲತತ್ವಗಳು ಪ್ರಭಾವಶಾಲಿಯಾಗಿದ್ದು ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ಕಾಲಾಂತರದಿಂದ ನ್ಯಾಯಾಡಳಿತಕ್ಕೆ ಮೂಲಾಧಾರವನ್ನು ಸ್ಫೂರ್ತಿಯನ್ನು ನೀಡಿವೆ.

ಹಿಂದಿನ ರಾಜರು ನ್ಯಾಯಾಡಳಿತವನ್ನು ನಿರ್ವಹಿಸಿದ ರೀತಿಯ ಒಂದು ಸಂಕ್ಷಿಪ್ತ ವಿವರವು ಹೀಗಿದೆ: ಹೊಯ್ಸಳರು ಹೆಚ್ಚಾಗಿ ತಮಗೆ ಗಂಗರಿಂದ ಮತ್ತು ಚಾಲುಕ್ಯರಿಂದ ಬಳುವಳಿಯಾಗಿ ಬಂದ ನ್ಯಾಯಾಡಳಿತ ಕ್ರಮವನ್ನೇ ಅನುಸರಿಸಿದರು. ಗಂಗರು, ಕದಂಬರು, ಚಾಲುಕ್ಯರು ಮತ್ತು ರಾಷ್ಟ್ರಕೂಟರು ಕೇವಲ ಸಾಮಾನ್ಯ ಆಡಳಿತದಲ್ಲಿ ಅಷ್ಟೇ ಅಲ್ಲದೆ ನ್ಯಾಯಾಡಳಿತದಲ್ಲಿಯೂ ಸ್ಮೃತಿಕಾರರ ಆದೇಶಗಳನ್ನು ಅನುಸರಿಸಿದರೆಂಬುದು ಅವರ ದಾಖಲೆಗಳಿಂದ ಕಂಡುಬರುತ್ತದೆ. ಅತೀ ಮಹತ್ವದ ಪ್ರಕರಣಗಳಲ್ಲಿ ರಾಜನೇ ನ್ಯಾಯದಾನದ ಪರಮಾಧಿಕಾರಿಯಾಗಿದ್ದನು. ನ್ಯಾಯ ನಿಷ್ಠುರವಾದ ರಾಜನು

ತನ್ನ ಸ್ವಂತ ಸಂಬಂಧಿಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿಯೂ ನಿಷ್ಪಕ್ಷಪಾತವಾಗಿ ವರ್ತಿಸುತ್ತಿದ್ದು ಅತೀ ಮಹತ್ವದ ಗಂಭೀರ ಪ್ರಕರಣದಲ್ಲಿ ಸಂತ್ರಸ್ತ ಪಕ್ಷಕಾರರು ರಾಜನಿಗೆ ಮೇಲ್ಮನವಿ ಮಾಡಬಹುದಾಗಿತ್ತು. ಅವನು ಅವರನ್ನೂ ಮತ್ತು ಪ್ರತಿವಾದಿಗಳನ್ನೂ ವಿಚಾರಿಸುತ್ತಿದ್ದನು. ಬಹಿರಂಗ ನ್ಯಾಯಾಲಯಗಳಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದನು. ವಿಜಯನಗರದ ಕಾಲದಲ್ಲಿ ರಾಜದ್ರೋಹ ಅವಧಿ ಪರಿಮಿತಿ ಮತ್ತು ಸೇವಾ ಇನಾಮುಗಳ ಉಪಭೋಗ ಮೊದಲಾದಂತಹ ವಿಷಯಗಳಿಗೆ ಸಬಂಧಿಸಿದ ವಿಶಿಷ್ಟ ವಿಧಿಗಳಿದ್ದವು. ಪ್ರಥಮತಃ ಒಂದು ಸಂಘ ಮತ್ತು ಇಡೀ ಸಮಾಜ ವಿರುದ್ಧದ ದ್ರೋಹಕ್ಕಿಂತ ಹೆಚ್ಚಾಗಿ ರಾಜ್ಯ ಅಥವಾ ರಾಜದ್ರೋಹವನ್ನು ಹೀನಾಪರಾಧವೆಂದು ಪರಿಗಣಿಸಲಾಗುತ್ತಿತ್ತು. ಅದನ್ನು ಬಹಳಷ್ಟು ವಿರೋಧಿಸಲಾಗುತ್ತಿತ್ತು. ನ್ಯಾಯವು ತಮ್ಮ ಆಡಳಿತದ ಸಕ್ರಿಯ ತತ್ವವಾಗಿರಬೇಕೆಂದು ರಾಜರು ಸದಾ ತವಕಿಸುತ್ತಿದ್ದರು. ಧರ್ಮ ಗುರುಗಳೂ ಸಾಮಾಜಿಕ ಮತ್ತು ಧಾರ್ಮಿಕ ಸ್ವರೂಪದ ಕೆಲವೊಂದು ಪ್ರಕರಣಗಳನ್ನು ಇತ್ಯರ್ಥ ಮಾಡುತ್ತಿದ್ದರು. ಬಹುಕಾಲದಿಂದ ಮುಂದುವರಿದುಕೊಂಡು ಬಂದ ಸ್ಥಾನಿಕ ಸಭೆಗಳೂ ಕೂಡ ಸಾಮಾಜಿಕ ಆಡಳಿತೀಯ ಮತ್ತು ನ್ಯಾಯಿಕ ಸ್ಥಳೀಯ ವಿಷಯಗಳ ತೀರ್ಮಾನವನ್ನು ಮಾಡುತ್ತಿದ್ದವು. ರಾಜ ನ್ಯಾಯಾಲಯಗಳು ಅಥವಾ ಗ್ರಾಮಸಭೆಗಳ ಮುಂದೆ ಬರುವ ಎಲ್ಲಾ ಪ್ರಕರಣಗಳನ್ನು ನ್ಯಾಯಾಧೀಶರು ಕೂಲಂಕಶವಾಗಿ ಪರಿಶೀಲಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಮತ್ತು ದಂಡನೆ ಕಠಿಣವೂ ಕಠೋರವೂ ಆಗಿತ್ತು. ದ್ವಾರ್ತೆ ಬರ್ಬೋಸನ ಪ್ರಕಾರ ಕೇವಲ ರಾಜರಷ್ಟೇ ಅಲ್ಲದೆ ಜನತೆಯೂ ಕೂಡ ಅಪಾರ ನ್ಯಾಯ ಸಾಮ್ಯತೆಯನ್ನೂ ನ್ಯಾಯವನ್ನೂ ಪಾಲಿಸಿಕೊಂಡು ಬರುತ್ತಿದ್ದರೆಂದು ತಿಳಿದು ಬರುತ್ತದೆ.

೨.೨. ಮುಸ್ಲಿಂ ಸುಲ್ತಾನರ ಆಳ್ವಿಕೆಯಲ್ಲಿ ನ್ಯಾಯಾಡಳಿತ

ಬಹಮನ್‌ಷಾಹಿ ಕಾಲದಲ್ಲಿ ರಾಜನು ಕೇವಲ ರಾಜ್ಯಾಧಿಪತಿಯಷ್ಟೇ ಅಲ್ಲದೆ ನ್ಯಾಯಾಧೀಶನೂ ಸೇನಾ ನಾಯಕನೂ ಮತ್ತು ಸಾರ್ವಜನಿಕ ಧರ್ಮಾಧಿಕಾರಿಯೂ ಆಗಿದ್ದನು. ಡಾ. ಪಿ.ಎಂ. ಜೋಷಿ ಅವರು ಸಿವಿಲ್ ವಿಭಾಗದಲ್ಲಿ "ನಾಜಿರ್" ಮತ್ತು "ಕೊತ್ವಾಲ್" ಎಂಬ ಹಿರಿಯ ಮಂತ್ರಿಗಳಿದ್ದುದನ್ನು ಪ್ರಸ್ತಾಪಿಸುತ್ತಾರೆ. ಇವರಲ್ಲಿ ಮೊದಲನೆಯವರು ಮುಖ್ಯ ಲೆಕ್ಕಾಧಿಕಾರಿಯೂ ಮತ್ತು ಅನಂತರದವನು ಪೋಲೀಸ ಬಲದ ಮುಖ್ಯಾಧಿಕಾರಿಯೂ ಮತ್ತು ವಿಶೇಷ ಮ್ಯಾಜಿಸ್ಟ್ರೇಟ್‌ನೂ ಆಗಿದ್ದರು. ಮುಖ್ಯ ನ್ಯಾಯಾಧೀಶನನ್ನು 'ಸದರ್ ಎ. ಜಹಾಂ' ಎಂದು ಕರೆಯುತ್ತಿದ್ದರು. ವಿಜಾಪುರದ ಆದಿಲ್ ಷಾರ ಕಾಲದಲ್ಲಿ ರಾಜನು ಆಡಳಿತದ ಪರಮಾಧಿಕಾರಿಯಾಗಿದ್ದನು. ಅವನು ನ್ಯಾಯದ ಪ್ರಮುಖ ಮೂಲವೆನಿಸಿಕೊಂಡಿದ್ದನು. ನ್ಯಾಯ ವಿಭಾಗಕ್ಕೆ ಒಬ್ಬ ಮಂತ್ರಿ ಅಥವಾ 'ಸದರ್-ಎ-ಜಹಾಂ' ಇರುತ್ತಿದ್ದನು. ನ್ಯಾಯಾಡಳಿತದಲ್ಲಿ ಖಾಜಿಗಳು ಮತ್ತು ಉಲೆಮಾಗಳು ಅವನಿಗೆ ಸಹಾಯಕರಾಗಿದ್ದರು. ಅದರಲ್ಲಿ ಮಹತ್ವದ ಅಧಿಕಾರಿಯೊಬ್ಬನಿದ್ದು ಅವನನ್ನು 'ಕೊತ್ವಾಲ್' ಎಂದು ಕರೆಯುತ್ತಿದ್ದರು. ಅವನು ರಾಜಧಾನಿಯ ಪ್ರಭಾರ ಹೊಂದಿದ್ದನು. 'ವಕೀಲ್-ಎ-ದಾರ್' ಅಥವಾ ಕಾರಭಾರಿ ಎಂಬ ಮತ್ತೊಬ್ಬ ಅರಮನೆ ಅಧಿಕಾರಿಯಿದ್ದನು. ಸಿವಿಲ್ ನ್ಯಾಯ ವಿಷಯದಲ್ಲಿ ಹಿಂದೂ ನ್ಯಾಯವನ್ನು ಅನುಸರಿಸಲಾಗುತ್ತಿತ್ತು ಮತ್ತು ಹಿಂದೂ ನ್ಯಾಯವೇತ್ತರ ಸಲಹೆ ಪಡೆಯಲಾಗುತ್ತಿತ್ತು[೮].

ಆದರೆ ಒಂದು ಕಡೆಗೆ ಒಬ್ಬ ಮುಸ್ಲಿಂನು ಮತ್ತೊಂದು ಕಡೆಗೆ ಒಬ್ಬ ಹಿಂದೂ ಇವರ ನಡುವೆ ಅಥವಾ ಇಬ್ಬರು ಮುಸ್ಲಿಮರ ನಡುವೆ ಉಂಟಾದ ವಿವಾದದಲ್ಲಿ ಇಸ್ಲಾಮಿ ನ್ಯಾಯ ಮಂಡಳಿಗಳು

ತಮ್ಮದೇ ಪ್ರತ್ಯೇಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಿದ್ದವು. ಕ್ರಿಮಿನಲ್ ನ್ಯಾಯಾಲಯದಲ್ಲಿ ಇಸ್ಲಾಮಿ ಪದ್ಧತಿಯೇ ಪ್ರಚಲಿತವಿತ್ತು.

೧೭೩೧ಕ್ಕೂ ಮೊದಲು ಪ್ರಚಲಿತವಿದ್ದ ನ್ಯಾಯಾಡಳಿತದ ವಿವರಣೆ ಹೀಗಿತ್ತು. ಮೊಗಲ್ ಪ್ರಾಂತಗಳು ಸಿವಿಲ್ ಆಡಳಿತಕ್ಕಾಗಿ ಇಂಪೀರಿಯಲ್ ಕ್ಯಾಪಿಟಲ್, ಸುಭಾಗಳೂ (ಪ್ರಾವಿನ್ಸ್‌ಗಳು), ಸರ್ಕಾರ್ (ಜಿಲ್ಲೆಗಳು) ಪರಗಣಾಸ್ ಮತ್ತು ಗ್ರಾಮಗಳು ಎಂಬುದಾಗಿ ವಿಂಗಡಿಸಿದ್ದರು. ಮೊಗಲ್ ದೊರೆಯು ಶಾಸಕಾಂಗ ನ್ಯಾಯಾಂಗ, ಕಾರ್ಯಾಂಗ ಹಾಗೂ ಮಿಲಿಟರಿ ಅಧಿಕಾರಿಗಳ ಪ್ರಮುಖ ಅಧಿಕಾರಿಯಾಗಿದ್ದನು. ಈತನನ್ನು ನ್ಯಾಯಾಂಗ ಇಲಾಖೆಯ (ಮಹಿಕಾಮ–ಒ–ಅದಾಲತ್) ಮುಖ್ಯಸ್ಥನಾಗಿ ನೇಮಿಸಲಾಗುತ್ತಿತ್ತು. ಪ್ರತಿ ಗ್ರಾಮ ಪರಗಣಗಳಲ್ಲಿ, ಸಿವಿಲ್, ಕ್ರಿಮಿನಲ್ ಮತ್ತು ಕಂದಾಯಕ್ಕೆ ಸಂಬಂಧಪಟ್ಟ ಮೊಕದ್ದಮೆಗಳನ್ನು ತೀರ್ಮಾನಿಸಲು ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿತ್ತು. ಗುಲಬರ್ಗಾವು ಸೇರಿದಂತೆ ಪ್ರತಿ ಜಿಲ್ಲೆಯಲ್ಲಿ ಕ್ವಾಝಿ–ಎ–ಸರ್ಕಾರ್ ಅಥವಾ ಶರಿಯತಪನಾ ಮುಖ್ಯಸ್ಥರಾಗಿದ್ದು ಮುಖ್ಯ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯ ಫೌಜದಾರಿ ಅದಾಲತ್ ಕೊತಾವಲಿ ಮತ್ತು ಅಮಲ್‌ಗುಝುರಿ ಕಛೇರಿ ಎಂಬ ನಾಲ್ಕು ನ್ಯಾಯಾಲಯಗಳಿದ್ದವು. ಕ್ವಾಝಿ–ಎ–ಸರ್ಕಾರ್‌ನ ಅಧೀನದಲ್ಲಿ ಆರು ಅಧಿಕಾರಿಗಳು ಇದ್ದರು. ಅವರು ದರೋಗ–ಎ–ಅದಾಲತ್, ಮಿರ್‌ಆದಿಲ್, ಮುಫ್ತಿ, ಪಂಡಿತ ಅಥವಾ ಶಾಸ್ತ್ರಿ ಮೊಹಸಿಬ್ ಮತ್ತು ವಕೀಲ್–ಎ–ಶಿಕಾಯಿ. ಜಿಲ್ಲೆಯಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳ ಮುಖ್ಯಸ್ಥರು ಕ್ವಾಝಿ–ಎ–ಸರ್ಕಾರ್ ಆಗಿದ್ದು ಇವರು ಮತೀಯ ಮೊಕದ್ದಮೆಗಳನ್ನು ನಿರ್ವಹಿಸುತ್ತಿದ್ದರು. ಫೌಜುದಾರಿ–ಎ–ಬಲ್ದಿ ಇವರು ಜಿಲ್ಲೆಯ ರಕ್ಷಣೆಯನ್ನು ಮಾಡುತ್ತಿದ್ದರು. ಕೊತವಾಲಿ ನ್ಯಾಯಾಲಯವು ಇತ್ತೀಚಿನ ಪೋಲೀಸ್ ಕಾಯ್ದೆಯಲ್ಲಿರುವಂತೆ, ಮೊಕದ್ದಮೆಗಳನ್ನು ನಿರ್ವಹಿಸುತ್ತಿದ್ದರು. ಅಮಲ್‌ಗುಝುರಿ ಕಛೇರಿಯು ಕಂದಾಯಕ್ಕೆ ಸಂಬಂಧಪಟ್ಟ ಮೊಕದ್ದಮೆಗಳನ್ನು ಅದಾಲತ್–ಎ–ಪರಗಣ (ಪರಗಣ ನ್ಯಾಯಾಲಯ) ಇವು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಮೂಲ ದಾವೆಗಳನ್ನು ತೀರ್ಮಾನಿಸುತ್ತಿದ್ದವು.

ಹೈದರ್ ಮತ್ತು ಟಿಪ್ಪು ಇವರು ರಾಜ್ಯಭಾರ ಕಾಲದಲ್ಲಿ ಕಂದಾಯಾಧಿಕಾರಿಗಳಿಗೆ ನ್ಯಾಯಿಕ ಪ್ರಕಾರ್ಯಗಳನ್ನೂ ವಹಿಸಿ ಕೊಡಲಾಗುತ್ತಿತ್ತು. ತಹಸೀಲಿನ ಅಮೀನರು ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಕುರಿತು ತನಿಖೆ ನಡೆಸಿ ತೀರ್ಮಾನಕ್ಕಾಗಿ ಮೇಲಧಿಕಾರಿಗಳಿಗೆ ವರದಿ ಮಾಡುತ್ತಿದ್ದರು. ಮಹಮ್ಮದೀಯ ನ್ಯಾಯಕ್ಕನುಸಾರವಾಗಿ ರಾಜಧಾನಿಯಲ್ಲಿ ನ್ಯಾಯಾಡಳಿತ ನಡೆಸಲು ಒಂದು 'ಸದರ್' ಮತ್ತು ಮುಖ್ಯ ನ್ಯಾಯಾಲಯವನ್ನು ಸ್ಥಾಪಿಸಲಾಗಿತ್ತು. ಮುಖ್ಯ ಪಟ್ಟಣಗಲ್ಲಿ ಕಾಜಿಗಳನ್ನು ನೇಮಿಸಲಾಗಿತ್ತು. ಅವರು ಉತ್ತರಾಧಿಕಾರ ವಾರಸು ಮತ್ತು ಇತರ ವಿಷಯಗಳಲ್ಲಿ ಮಹಮ್ಮದೀಯ ನ್ಯಾಯದ ಪ್ರಕಾರ ತೀರ್ಮಾನ ಮಾಡುವ ಅಧಿಕಾರ ಹೊಂದಿದ್ದರು ಮತ್ತು ಅವರ ಅಧಿಕಾರವು ಮುಸ್ಲಿಮರಿಗೆ ಮಾತ್ರ ಸೀಮಿತವಾಗಿತ್ತು. ಪ್ರಾಚೀನ ವ್ಯವಸ್ಥೆಯ ಮೇರೆಗೆ ಮನ್ನಿತವಾದ ಮತ್ತು ಹಾಗೆಯೇ ಉಳಿದುಕೊಂಡು ಬಂದ ಜನತಾ ನ್ಯಾಯಾಲಯಗಳಲ್ಲಿ ಮುಖ್ಯ ಮತ್ತು ಮಹತ್ವದ ನ್ಯಾಯದಾನವು ಮುಂದುವರಿದುಕೊಂಡು ಬಂತು.[೯]

೨.೩ ಮೈಸೂರು ಅರಸರ ಕಾಲದಲ್ಲಿ ನ್ಯಾಯಾಂಗ

ಬ್ರಿಟಿಷರು ೧೮೩೧ರಲ್ಲಿ ಮೈಸೂರು ರಾಜ್ಯದ ಆಡಳಿತವನ್ನು ವಹಿಸಿಕೊಂಡ ಬಳಿಕ ಒಂದು ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಮತ್ತು ನ್ಯಾಯಾಲಯಗಳಿಗೆ ಮಾರ್ಗದರ್ಶಕ ನಿಯಮಗಳನ್ನು

ರಚಿಸುವ ಬಗ್ಗೆ ೧೮೩೪ರ ಅಕ್ಟೋಬರ್ ೨೭ರಂದು ಆದೇಶವನ್ನು ಹೊರಡಿಸಲಾಯಿತು. ಈ ಆದೇಶದ ಮೇರೆಗೆ ಕೆಳಕಂಡ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. (೧) ಅಮಿಲರು, (೨) ಪಟ್ಟಣ ಮುನ್ಸೀಫರು, (೩) ಸದರ್ ಮುನ್ಸೀಫ್, (೪) ಮುಖ್ಯ ಸದರ್ ಮುನ್ಸೀಫ್ ಮತ್ತು (೫) ಯೂರೋಪಿಯನ್ ಸೂಪರಿಂಟೆಂಡೆಂಟ್‌ರ ನ್ಯಾಯಾಲಯಗಳು ಕೆಲವು ಪ್ರಕರಣಗಳಲ್ಲಿ ಪಂಚಾಯಿತಿಯ ಸಹಾಯ ಪಡೆಯುವುದು ಕಡ್ಡಾಯವಾಗಿತ್ತು. ಅಮೀನರ ಮತ್ತು ಪಟ್ಟಣ ಮುನ್ಸೀಫರ ನ್ಯಾಯಾಲಯಗಳು ಮೂಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿದ್ದವು. ಅಮೀನರು (೧) ಕ್ಷಿಪ್ರ ರೀತಿಯಲ್ಲಿ ತೀರ್ಮಾನವಾಗುವ ೨೦ ರೂಪಾಯಿ ಮೌಲ್ಯವು ಮೀರದ ಪ್ರಕರಣಗಳನ್ನು (೨) ಕ್ರಮಬದ್ಧವಾಗಿ ವ್ಯವಹರಣೆಗಳನ್ನು ದಾಖಲುಗೊಳಿಸಿದ ತರುವಾಯ ೧೦೦ ರೂಪಾಯಿಗೆ ಮೀರದ ದಾವೆಗಳನ್ನು ಮತ್ತು (೩) ಆದರೆ ಪಂಚಾಯಿತಿಯ ಸಹಾಯ ದೊರೆತಾಗ ೫೦೦ ರೂಪಾಯಿಗೆ ಮೀರದ ಎಲ್ಲಾ ಬೇಡಿಕೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದರು. ಎರಡನೆಯ ಮತ್ತು ಮೂರನೆಯ ಬಗೆಯ ಪ್ರಕರಣಗಳಲ್ಲಿ ಅಮೀನ ತೀರ್ಮಾನದ ಮೇಲೆ ಸದರ್ ಮುನ್ಸೀಫ್ ನ್ಯಾಯಾಲಯಕ್ಕೆ ಮಾತ್ರ ಮೇಲ್ಮನವಿ ನಡೆಯುತ್ತಿತ್ತು. ಮೊದಲನೆಯ ಬಗೆಯ ಪ್ರಕರಣಗಳಲ್ಲಿ ಭ್ರಷ್ಟಾಚಾರ ಪೂರ್ಣ ಪಕ್ಷಪಾತ ನಡೆದಿದೆ ಎಂಬ ಆಪಾದನೆ ಬಂದಾಗ ಮಾತ್ರ ಅಪೀಲು ಮಾಡಬಹುದಾಗಿತ್ತು. ಮೈಸೂರು ಪಟ್ಟಣದ ಮುನ್ಸೀಫ್‌ನು ಅಮೀನ ಸರಿಸಮಾನ ಅಧಿಕಾರವನ್ನು ಹೊಂದಿದ್ದನು. ಬೆಂಗಳೂರಿನ ಪಟ್ಟಣ ಮುನ್ಸೀಫ್‌ನು ಅಮೀನನಿದ್ದಂತಹ ಅಧಿಕಾರಿಯೊಂದಿಗೆ ೫೦೦ ರೂಪಾಯಿಗೆ ಮೀರದ ಸ್ಥಿರ ಸ್ವತ್ತಿನ ಮತ್ತು ೧೦೦೦ ರೂಪಾಯಿಗೆ ಮೀರದ ವೈಯಕ್ತಿಕ ಸ್ವತ್ತಿನ ಎಲ್ಲಾ ದಾವೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದನು. ಅವನ ತೀರ್ಮಾನದ ಮೇಲೆ ನೇರವಾಗಿ ಆ ವಿಭಾಗದ ಸೂಪರಿಂಟೆಂಡೆಂಟನಿಗೆ ಮೇಲ್ಮನವಿ ಆಗುತ್ತಿತ್ತು. ಎಲ್ಲ ಪ್ರಕರಣಗಳಲ್ಲಿ ನ್ಯಾಯಾಲಯಗಳು ತಮ್ಮ ತೀರ್ಮಾನಗಳನ್ನು ಲಿಖಿತ ರೂಪದಲ್ಲಿ ನೀಡಬೇಕಾಗುತ್ತಿತ್ತು.[೧೦]

ಮುಖ್ಯ ಸದರ್ ಮುನ್ಸೀಫ್‌ನ ಮತ್ತು ಯುರೋಪಿಯನ್ ಸೂಪರಿಂಟೆಂಡೆಂಟನ ಈ ಎರಡು ನ್ಯಾಯಾಲಯಗಳು ಮೂಲ ಮತ್ತು ಅಪೀಲು ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದರು. ಮುಖ್ಯ ಸದರ್ ಮುನ್ಸೀಫ್‌ನ ಆರ್ಥಿಕ ಅಧಿಕಾರ ವ್ಯಾಪ್ತಿಯು ಸ್ಥಿರಸ್ವತ್ತಿನ ಸಂಬಂಧದಲ್ಲಿ ೧೦೦ ರೂಪಾಯಿಗೆ ಮೇಲ್ಪಟ್ಟಾದರೆ ೧೦೦೦ ರೂಪಾಯಿಗೆ ಕಡಿಮೆ ಇರುವ ಮತ್ತು ವೈಯಕ್ತಿಕ ಸ್ವತ್ತಿನ ಸಂಬಂಧದಲ್ಲಿ ೧೦೦೦ ರೂಪಾಯಿಗೆ ಮೇಲ್ಪಟ್ಟಾದರೆ ೫೦೦೦ ರೂಪಾಯಿಗೆ ಮೀರಿದ ಅಧಿಕಾರ ವ್ಯಾಪ್ತಿ ಆಗಿತ್ತು. ಮುಖ್ಯ ಮುನ್ಸೀಫ್‌ನ ತೀರ್ಮಾನದ ಮೇಲೆ ಆ ವಿಭಾಗದ ಸೂಪರಿಂಟೆಂಡೆಂಟನಿಗೆ ಅಥವಾ ಹುಜೂರು ಅದಾಲತಿಗೆ ಅಪೀಲು ಆಗುತಿತ್ತು. ವಿಭಾಗದ ಸೂಪರಿಂಟೆಂಡೆಂಟ್‌ನು ೧೦೦೦ರೂಪಾಯಿಗೆ ಮೇಲ್ಪಟ್ಟ ಸ್ಥಿರ ಸ್ವತ್ತಿನ ಅಥವಾ ೫೦೦೦ ರೂಪಾಯಿಗೆ ಮೇಲ್ಪಟ್ಟ ವೈಯಕ್ತಿಕ ಸ್ವತ್ತಿನ ಮೂಲ ದಾವೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದನು. ಅವನು ಕಮೀಷನರರ ಸೂಚನೆಗೆ ಒಳಪಟ್ಟು ಆಯಾ ವಿಭಾಗದ ಆಧೀನ ನ್ಯಾಯಿಕ ಅಧಿಕಾರಿಗಳ ಮೇಲೆ ನಿಯಂತ್ರಣವನ್ನು ಚಲಾಯಿಸುತ್ತಿದ್ದನು. ಕಮೀಷನರ್‌ನ ನ್ಯಾಯಾಲಯವಲ್ಲದೆ ಮೂವರು ನ್ಯಾಯಾಧೀಶರಿಂದ ಕೂಡಿದ ಹುಜೂರ್ ಅದಾಲತ್ ಎಂಬ ಮೇಲ್ಮನವಿ ನ್ಯಾಯಾಲಯವೂ ಇತ್ತು. ಯಾವುದೇ ಒಂದು ವಿಶಿಷ್ಟ ಪ್ರಕರಣವನ್ನು ವಿಶೇಷವಾಗಿ ಅದಕ್ಕೆ ಒಪ್ಪಿಸಿದಾಗ, ಅದು ಮೂಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿತು. ಸೂಪರಿಂಟೆಂಡೆಂಟರ

ಮತ್ತು ಹುಜೂರ್ ಅದಾಲತ್‌ಗೆ ತೀರ್ಮಾನಗಳ ಮೇಲೆ ಕಮೀಷನರಿಗೆ ಅಪೀಲುಗಳು ಆಗುತ್ತಿದ್ದವು. ಕಮೀಷನರ್‌ನ ನ್ಯಾಯಾಲಯದಲ್ಲಿ ಮೂಲದಾವೆಗಳನ್ನು ಸ್ವೀಕರಿಸಲಾಗುತ್ತಿರಲಿಲ್ಲ. ಸಿವಿಲ್ ಪ್ರಕರಣಗಳನ್ನು ತೀರ್ಮಾನಿಸಲು ಶಕ್ತವಾದ ನ್ಯಾಯಾಲಯಗಳೇ ಕ್ರಿಮಿನಲ್ ಪ್ರಕರಣಗಳನ್ನು ತೀರ್ಮಾನಿಸಲು ಶಕ್ತವಾಗಿದವು. ಜೂರಿಗಳ ಸಹಾಯದಿಂದ ವಿಚಾರಣೆ ಮಾಡುವ ಪದ್ಧತಿಯನ್ನು ೧೯೧೭ರಲ್ಲಿ ಜಾರಿಗೆ ತರಲಾಯಿತು. ವೈಯಕ್ತಿಕ ದೋಷ(ಹಾನಿ)ದ ಪ್ರಸಂಗಗಳಲ್ಲಿ ಅಥವಾ ಕ್ಷುದ್ರ ಅಪರಾಧಗಳಿಗಾಗಿ ಆಪಾದಿತನನ್ನು ೧೪ ದಿನಗಳಿಗೆ ಹೆಚ್ಚಾಗದಂತೆ ಬಂಧಿಸಿಡಲು ಅಮೀನದಾರನು ಶಕ್ತನಾಗಿದ್ದನು. ಯಾವೊಬ್ಬ ವ್ಯಕ್ತಿಯನ್ನು ತಪಾಸಣೆಯ ಉದ್ದೇಶಕ್ಕಾಗಿ ಏಳು ದಿನಗಳಗಿಂತ ಹೆಚ್ಚು ಕಾಲ ಬಂಧಿಸಿಡುವುದು ಅಗತ್ಯವಾಗಿದ್ದರೆ ಅವನು ಸೂಪರಿಂಟೆಂಡೆಂಟನಿಗೆ ತಿಳಿಸುವುದು ಅಗತ್ಯವಾಗಿತ್ತು. ಷೇಕ್‌ದಾರರು ಮತ್ತು ಹೋಬಳಿದಾರರು ಕೂಡ ಕೆಲವೊಂದು ಪರಿಮಿತ ಅಧಿಕಾರವನ್ನು ಚಲಾಯಿಸುತ್ತಿದ್ದರು. ಕೊಲೆ, ಸುಲಿಗೆ, ಹೆದ್ದಾರಿ ದರೋಡೆಗಳಿಂದ ಹೀನಾಪರಾಧಗಳ ಕರ್ತವ್ಯವೆಂದು ಸಂಶಯವಿರುವ ವ್ಯಕ್ತಿಗಳನ್ನು ೨೪ಗಂಟೆಗಳಿಗೆ ಮೀರದಂತೆ ಅವರು ಬಂಧಿಸಿಡಬಹುದಾಗಿತ್ತು. ಅದಕ್ಕಿಂತ ಹೆಚ್ಚು ಅವಧಿಯವರೆಗೆ ಬಂಧಿಸಿಡುವುದು ಅಗತ್ಯವಾಗಿದ್ದರೆ ಅವರು ಅಮೀನ್‌ದಾರನ ಆದೇಶಗಳನ್ನು ಪಡೆಯಬೇಕಾಗುತ್ತಿತ್ತು.

೧೮೬೨ರಿಂದ ೧೮೮೨ರವರೆಗಿನ ಅವಧಿಯಲ್ಲಿ ನ್ಯಾಯಾಂಗಕ್ಕೆ ಮನ್ನಣೆ ನೀಡುವ ಆರ್ಥಿಕ ಕ್ರಮಗಳನ್ನು ಒಂದರ ಮೇಲೊಂದರಂತೆ ಕೈಗೊಳ್ಳಲಾಯಿತು. ಮೊದಲನೆಯದಾಗಿ ಹುಜೂರ್ ಅದಾಲತ್ ಮತ್ತು ಮುನ್ಸೀಫ್‌ರ ನ್ಯಾಯಾಲಯಗಳನ್ನು ವಿಸರ್ಜಿಸಲಾಯಿತು. ನ್ಯಾಯಾಂಗ ಅಧಿಕಾರ ಶ್ರೇಣಿಯ ಜ್ಯುಡಿಷಿಯಲ್ ಕಮೀಷನರ್ ವಿಭಾಗ ಸೂಪರಿಂಟೆಂಡಂಟರು, ಡೆಪ್ಯುಟಿ ಸೂಪರಿಂಟೆಂಡೆಂಟರು ತಾಲೂಕುಗಳ ಅಮೀನ್ದಾರರು ಇವರನ್ನು ಒಳಗೊಂಡಿತ್ತು, ನ್ಯಾಯಾಲಯದ ಪ್ರಕ್ರಿಯೆಯನ್ನು ಕ್ರಮಗೊಳಿಸುವ ಸಂಹಿತೆಗಳನ್ನು ಜಾರಿಗೆ ತರಲಾಯಿತು. ಡೆಪ್ಯುಟಿ ಸೂಪರಿಂಟೆಂಡೆಂಟರಿಗೆ ಅಪರಿಮಿತ ಸಿವಿಲ್ ಅಧಿಕಾರವನ್ನು ನೀಡಲಾಗಿತ್ತು. ಕೇವಲ ನ್ಯಾಯಾಂಗ ಕಾರ್ಯಕ್ಕಾಗಿಯೇ ಡೆಪ್ಯುಟಿ ಸೂಪರಿಂಟೆಂಡಂಟರ ಬದಲಾಗಿ **ವಿಧಿಯುತ** ಸಹಾಯಕರನ್ನು ನಿಯುಕ್ತಿಗೊಳಿಸಲಾಗಿತ್ತು. ೧೮೭೪-೭೫ರಲ್ಲಿ ಅಮೀನ್ ದಾರರು ಮತ್ತು ಡೆಪ್ಯುಟಿ ಕಮೀಷನರ್ ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ತೆಗೆಯಲಾಯಿತು. ಅಮೀನ್‌ರರ ಮತ್ತು ಡೆಪ್ಯುಟಿ ಕಮೀಷನರ್‌ರ ಸ್ಥಾನದಲ್ಲಿ ಮುನ್ಸೀಫ್‌ರ ಮತ್ತು ಜಿಲ್ಲಾ ನ್ಯಾಯಾಧೀಶರ ಹುದ್ದೆಗಳನ್ನು ಸೃಷ್ಟಿಸಲಾಯಿತು.[೧೧]

ರಾಜ್ಯದಲ್ಲಿ ೧೮೭೨ರಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯನ್ನು (೧೮೭೨ ಅಧಿನಿಯಮವನ್ನು) ಜಾರಿಗೆ ತರಲಾಯಿತು. ಆ ಬಳಿಕ ೧೮೮೯ರಲ್ಲಿ ಮುನ್ಸೀಫರಿಗೆ ತಾಲೂಕು ಮ್ಯಾಜಿಸ್ಟ್ರೇಟರುಗಳ ಅಧಿಕಾರಗಳನ್ನು ನೀಡಲಾಗಿತ್ತು. ೧೮೮೩ ಮತ್ತು ೧೯೦೩ರ ಮಧ್ಯದಲ್ಲಿ ನ್ಯಾಯಾಡಳಿತವನ್ನು ಮನ್ನಿಸಲು ಮತ್ತು ಸಕ್ರಮಗಳಿಸಲು ಹಲವಾರು ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಯಿತು. ೧೮೮೩ರ ಮೈಸೂರು ಸಿವಿಲ್ ನ್ಯಾಯಾಲಯಗಳ ಅಧಿನಿಯಮವನ್ನು ೧೮೮೩ರ ಜೂನ್ ೧೬ರಿಂದ ಜಾರಿಗೆ ತರಲಾಯಿತು. ಈ ನಿಯಮದ ಮೇರೆಗೆ ಮೂರು ವರ್ಗದ ಸಿವಿಲ್ ನ್ಯಾಯಾಲಯಗಳನ್ನು ಎಂದರೆ ಜಿಲ್ಲಾ ನ್ಯಾಯಾಲಯ, ಅಧೀನ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮುನ್ಸೀಫನ ನ್ಯಾಯಾಲಯ ಇವುಗಳನ್ನು ಸ್ಥಾಪಿಸಲಾಯಿತು. ಆ ಮೇಲೆ ೧೯೧೧ರಲ್ಲಿ ಒಂದು ತಿದ್ದುಪಡಿಯ ಮೂಲಕ ಲಘು ವ್ಯಾಖ್ಯಾನಗಳ ನ್ಯಾಯಾಲಯವನ್ನು ರಚಿಸಲಾಯಿತು.[೧೨]

ಉತ್ತರಾಧಿಕಾರ: ವಾರಸು ವಿವಾಹ ಅಥವಾ ಜಾತಿಗಳು ಅಥವಾ ಯಾವುದೇ ಧಾರ್ಮಿಕ ಆಚರಣೆ ಅಥವಾ ಸಂಪ್ರದಾಯ ಇವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಪಕ್ಷಕಾರರು ಹಿಂದೂಗಳಾಗಿರುವಲ್ಲಿ ಹಿಂದೂ ನ್ಯಾಯವನ್ನು ಮತ್ತು ಪಕ್ಷಕಾರರು ಮುಸ್ಲೀಮರಾಗಿರುವಲ್ಲಿ ಮುಸ್ಲಿಂ ನ್ಯಾಯವನ್ನು ಅನ್ವಯಿಸಲಾಗುತ್ತಿತ್ತು. ಯಾವ ನಿರ್ದಿಷ್ಟ ನ್ಯಾಯೋಪಬಂಧವೂ ಇಲ್ಲದಿರುವಲ್ಲಿ ನ್ಯಾಯಾಲಯವು ನ್ಯಾಯ ಸರ್ವಸಮತೆ ಸದ್ವಿವೇಕಾನುಸಾರ ವರ್ತಿಸಬೇಕಾಗುತ್ತಿತ್ತು.

೩.೪. ಚೀಫ್ ಕೋರ್ಟ್

ಮುಖ್ಯ ನ್ಯಾಯಾಲಯ ರಚನೆ ಮತ್ತು ಸಂಸ್ಥೆಗೆ ನವರೂಪ ಕೊಡಲು ಮೈಸೂರು ಮುಖ್ಯ ನ್ಯಾಯಾಲಯ ವಿನಿಯಮವನ್ನು (ಒಂದನೆಯದು ೧೮೮೪) ವಿಧಿಸಲಾಗಿತ್ತು. ಮೈಸೂರು ಮುಖ್ಯ ನ್ಯಾಯಾಲಯವು ಒಬ್ಬ ಮುಖ್ಯ ನ್ಯಾಯಾಧೀಶ ಮತ್ತು ಮೂವರು ಅಥವಾ ಅದಕ್ಕಿಂತ ಹೆಚ್ಚು ನ್ಯಾಯಾಧೀಶರಿಂದ ಕೂಡಿತ್ತು ಮತ್ತು ಅವರನ್ನು ಮಹಾರಾಜರು ನೇಮಿಸುತ್ತಿದ್ದರು. ಅದು ಕ್ರಿಮಿನಲ್ ಮತ್ತು ಸಿವಿಲ್ ಅಪೀಲುಗಳ ಅತ್ಯುನ್ನತ ನ್ಯಾಯಾಲಯವಾಗಿತ್ತು ಮತ್ತು ಸಿವಿಲ್ ಮತ್ತು ಕ್ರಿಮಿನಲ್ ಎಲ್ಲ ನ್ಯಾಯಾಲಯಗಳು ಆ ಪ್ರದೇಶದಲ್ಲಿ ಅದರ ಅಧೀಕ್ಷಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿದ್ದವು. ಈ ವಿನಿಯಮವು ಮುಖ್ಯ ನ್ಯಾಯಾಲಯಕ್ಕೆ ಸಿವಿಲ್ ಮತ್ತು ಕ್ರಿಮಿನಲ್ ಮೂಲ ಅಧಿಕಾರ ವ್ಯಾಪ್ತಿಯನ್ನು ನೀಡಲು ಸರ್ಕಾರಕ್ಕೆ ಅಧಿಕಾರ ನೀಡಿತ್ತು ಮತ್ತು ಯಾವುದೇ ವಿಶೇಷ ಪ್ರಕರಣದಲ್ಲಿ ಅಂಥ ಅಧಿಕಾರ ವ್ಯಾಪ್ತಿಯನ್ನು ನೀಡಿದಾಗ ಮುಖ್ಯ ನ್ಯಾಯಾಲಯವು ಅಂಥ ಪ್ರಕರಣದ ವಿಚಾರಣೆಗೆ ತನ್ನ ಒಬ್ಬ ನ್ಯಾಯಾಧೀಶನನ್ನು ಪ್ರತಿ ನಿಯೋಜಿಸುತ್ತಿತ್ತು. ಹಾಗೇ ಪ್ರತಿನಿಯೋಜಿತವಾದ ಮುಖ್ಯ ನ್ಯಾಯಾಲಯದ ನ್ಯಾಯಾಧೀಶನು ಮೂಲ ಸಿವಿಲ್ ಅಥವಾ ಕ್ರಿಮಿನಲ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ನೀಡಿದ ತೀರ್ಪಿನ ಮೇಲೆ ಮುಖ್ಯ ನ್ಯಾಯಾಲಯಕ್ಕೆ ಅಪೀಲು ಹಾಕಬಹುದಾಗಿತ್ತು ಮತ್ತು ಅಂಥ ಅಪೀಲನ್ನು ಮುಖ್ಯ ನ್ಯಾಯಾಲಯದ ಕನಿಷ್ಟ ಇಬ್ಬರು ನ್ಯಾಯಾಧೀಶರಿಂದ ಕೂಡಿದ ಪೀಠವು ವಿಚಾರಿಸಿ ವಿಲೇವಾರಿ ಮಾಡಬೇಕಾಗುತ್ತಿತ್ತು. ಮರಣ ಶಿಕ್ಷೆಯ ಸ್ಥಿರೀಕರಣಕ್ಕಾಗಿ ಮತ್ತು ಅದಕ್ಕೆ ಒಪ್ಪಿಸಿದ ಪ್ರಕರಣಗಳು ಸೇರಿ ಮುಖ್ಯ ನ್ಯಾಯಾಲಯಕ್ಕೆ ಬರುವ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಮೇಲ್ಮನವಿಗಳನ್ನು ಕನಿಷ್ಟ ಇಬ್ಬರು ನ್ಯಾಯಾಧೀಶರ ಪೀಠವು ವಿಚಾರಿಸಬೇಕಾಗುತ್ತಿತ್ತು. ಅಲ್ಲದೆ ಮಹತ್ವದ ಪ್ರಶ್ನೆಗಳನ್ನು ಮೂವರಿಗಿಂತ ಕಡಿಮೆ ಇಲ್ಲದ ಪೂರ್ಣ ಪೀಠದ ಅಭಿಪ್ರಾಯಕ್ಕಾಗಿ ಒಪ್ಪಿಸಲು ಕೂಡ ಅವಕಾಶ ಕಲ್ಪಿಸಲಾಗಿತ್ತು. ಪುನರೀಕ್ಷಣೆಯ ಅರ್ಜಿ (ರಿವಿಜನ್ ಪಿಟಿಷನ್) ಗಳನ್ನು ಏಕ ನ್ಯಾಯಾಧೀಶನೇ ವಿಚಾರಿಸುತ್ತಿದ್ದನು. ಮುಖ್ಯ ನ್ಯಾಯಾಲಯವು ಪ್ರಕರಣಗಳನ್ನು ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ ವರ್ಗಾಯಿಸಲು ಶಕ್ತವಾಗಿತ್ತು. ಯಾವುದೇ ಪ್ರಕರಣವನ್ನು ವಾಪಸು ತರಿಸಿಕೊಂಡು ತಾವೇ ಸ್ವತಃ ಚುನಾವಣೆ ಮಾಡಿ ವಿಚಾರಿಸಬಹುದಾಗಿತ್ತು[೧೩]

೧೮೮೪ರ ಒಂದನೆಯ ವಿನಿಯಮದ ತಿದ್ದುಪಡಿ ಮೂಲಕ ಮುಖ್ಯ ನ್ಯಾಯಾಲಯಕ್ಕೆ ಉಚ್ಚ ನ್ಯಾಯಾಲಯ(ಹೈ ಕೋರ್ಟು)ವೆಂಬ ಹೊಸ ಹೆಸರನ್ನು ನೀಡಲಾಯಿತು. (ಏಪ್ರಿಲ್ ೧೯೩೦) ಹಿಂದಿನ ಮೈಸೂರು ಅರಸರ ರಾಜ್ಯದ ಈ ಉಚ್ಚ ನ್ಯಾಯಾಲಯವು ಸಂವಿಧಾನದ ಪ್ರಾರಂಭದವರೆಗೆ ಹಾಗೆಯೇ ಮುಂದುವರಿದು ಅದನ್ನು ಸಂವಿಧಾನದ ೨೩೭ನೆಯ ಅನುಚ್ಛೇದದ ಮೂಲಕ ೧೯೫೦ರ

ಜನವರಿ ೨೬ರಿಂದ "ಬಿ"ರಾಜ್ಯವಾದ ಮೈಸೂರು ಉಚ್ಚ ನ್ಯಾಯಾಲಯವಾಗಿ ಮುಂದುವರಿಸಲಾಯಿತು. ಈ ನ್ಯಾಯಾಲಯವು ೧೯೫೬ರ ರಾಜ್ಯಗಳ ಪುನರ್ ರಚನೆಯ ಅಧಿನಿಯಮದ ೫೨೫೨ನೆಯ ಪ್ರಕರಣದ ಮೇರೆಗೆ ೧.೧೧.೧೯೫೬ರಿಂದ ಹೊಸ ಕರ್ನಾಟಕ ರಾಜ್ಯದ ಹೊಸ ಉಚ್ಚ ನ್ಯಾಯಾಲಯವು ಸ್ಥಾಪಿತವಾಗುವವರೆಗೆ ಹಾಗೆಯೇ ಮುಂದುವರಿಯಿತು. ಇಂದಿಗೂ ಕೂಡ ಸಂವಿಧಾನಕ್ಕೆ ಅನುಗುಣವಾಗುವಂತೆ ತಿದ್ದುಪಡಿಯಾದ ೧೮೮೪ರ ವಿನಿಯಮವು ಕರ್ನಾಟಕ ಉಚ್ಚ ನ್ಯಾಯಾಲಯದ ರಚನೆ ಮತ್ತು ಸಂಸ್ಥೆಗೆ ಸಂಬಂಧಿಸಿದ ಕಾನೂನಾಗಿ ಮುಂದುವರೆಸಿದೆ. ಮೈಸೂರು ನ್ಯಾಯಾಲಯ ಶುಲ್ಕಗಳ ೧೯೦೦ರ ವಿನಿಯಮವನ್ನು ೧೯೦೦ರ ಜೂಲೈ ೧ ರಂದು ಅಧಿನಿಯಮಿತಗೊಳಿಸಲಾಯಿತು. ಅಧಿನಿಯಮವು ಅನೇಕ ಬಗೆಯ ವಾದಪತ್ರಗಳ ಮೇಲೆ ಸಂದಾಯವಾದ ನ್ಯಾಯಾಲಯ ಶುಲ್ಕವನ್ನು ನಿಯಮಿಸಿತ್ತು ಮತ್ತು ನ್ಯಾಯಾಲಯ ಶುಲ್ಕಗಳ ಗಣನೆಗೂ ಉಪಬಂಧ ಕಲ್ಪಿಸಿತ್ತು.

೩.೫. ನ್ಯಾಯಾಂಗ ಪ್ರತ್ಯೇಕೀಕರಣ

ಮೈಸೂರು ರಾಜ್ಯ ೧೯೧೯ರ ಮುಂಚೆಯೇ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಅವಶ್ಯಕತೆ ಕಂಡುಬಂದಿತ್ತು. ಮೊದಲನೆಯದಾಗಿ ಈ ಬಗೆಯ ಪ್ರತ್ಯೇಕತೆಯನ್ನು ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಆಮೇಲೆ ಇತರ ಜಿಲ್ಲೆಗಳಲ್ಲಿ ಜಾರಿಗೆ ತರಲಾಯಿತು. ಕಂದಾಯ ಅಧಿಕಾರಿಗಳಿಂದ ನ್ಯಾಯಿಕ ಪ್ರಕಾರಗಳನ್ನು ಪ್ರತ್ಯೇಕಿಸಲಾಯಿತು. ಪ್ರತೀ ಎರಡು ಅಥವಾ ಮೂರು ತಾಲೂಕುಗಳಿಗೆ ಒಬ್ಬರಂತೆ ಮುನ್ಸೀಫ್ ದರ್ಜೆಯ (೨ನೆಯ ದರ್ಜೆ)ಸ್ವತಂತ್ರ ಮ್ಯಾಜಿಸ್ಟ್ರೇಟರುಗಳನ್ನು ನಿಯಮಿಸಲಾಗಿತ್ತು (ಮೊದಲನೆಯ ವರ್ಗದ). ಅಧೀನ ನ್ಯಾಯಾಧೀಶನ ಸ್ಥಾನಮಾನಕ್ಕೆ ಸಮನಾದ ಒಬ್ಬ ಮ್ಯಾಜಿಸ್ಟ್ರೇಟನನ್ನು ಪ್ರತಿಯೊಂದು ಜಿಲ್ಲಾ ಮುಖ್ಯ ಸ್ಥಳದಲ್ಲಿ ನಿಯಮಿಸಲಾಯಿತು. ಆತನ ಅಧಿಕಾರ ವ್ಯಾಪ್ತಿಯನ್ನು ಸ್ಪಷ್ಟೀಕರಿಸಲಾಯಿತು. ಈ ಮ್ಯಾಜಿಸ್ಟ್ರೇಟರುಗಳು ನ್ಯಾಯಿಕ ಸೇವೆಯ ಭಾಗವಾಗಿದ್ದರು. ಅಸಿಸ್ಟೆಂಟ್ ಕಮೀಷನರರು ಆ ಬಳಿಕ ಪದನಿಮಿತ್ತ ಮ್ಯಾಜಿಸ್ಟ್ರೇಟರಾಗಿ ಮಾತ್ರ ಮುಂದುವರಿದರು ಮತ್ತು ಶಾಂತಿ ಸುವ್ಯವಸ್ಥೆಯ ನ್ಯಾಯ ಪರಿಪಾಲನೆಗೆ ಸಂಬಂಧಿಸಿದ ಪೋಲೀಸ್ ಅಧಿಕಾರಿಗಳನ್ನು ಚಲಾಯಿಸುತ್ತಿದ್ದರೇ ಹೊರತು ನ್ಯಾಯಿಕ ಅಧಿಕಾರಗಳನ್ನಲ್ಲ. ಆದರೆ ಡೆಪ್ಯುಟಿ ಕಮೀಷನರ್‌ನು ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಹೊಂದಿರುವುದು ಮುಂದುವರೆದುಕೊಂಡು ಬಂದರೂ ಮ್ಯಾಜಿಸ್ಟ್ರೇಟರು ಜಿಲ್ಲಾ ಮ್ಯಾಜಿಸ್ಟ್ರೇಟರ ನಿಯಂತ್ರಣದಲ್ಲಿ ಮುಂದುವರೆದರು ಎಂದರೆ ಕಾರ್ಯಾಂಗದಿಂದ ನ್ಯಾಯಾಂಗದ ಪ್ರತ್ಯೇಕತೆಯು ಕೆಲಮಟ್ಟಿಗೆ ಆಯಿತು. ಅದು ಸರಿಯಾದ ದಿಶೆಯಲ್ಲಿಟ್ಟ ಒಂದು ಹೆಜ್ಜೆಯಾಗಿತ್ತು. ಹೀಗೆ ಮೈಸೂರು ರಾಜ್ಯದ ಆಳರಸರು ಸಂವಿಧಾನದ ಪ್ರಾರಂಭಕ್ಕಿಂತ ಮುಂಚಿತವಾಗಿಯೇ ಒಂದು ಸ್ವತಂತ್ರ ಮತ್ತು ನಿಷ್ಪಕ್ಷಪಾತವಾದ ನ್ಯಾಯಾಂಗ ವ್ಯವಸ್ಥೆಯನ್ನು ಸ್ಥಾಪಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ ಮತ್ತು ಆ ನ್ಯಾಯಾಂಗ ವ್ಯವಸ್ಥೆಯೇ ಮುಂದೆ ಸಂವಿಧಾನಬದ್ಧವಾದ ನ್ಯಾಯಾಂಗ ವ್ಯವಸ್ಥೆಯಾಯಿತು. ಸಂವಿಧಾನದ ಪ್ರಾರಂಭದ ತರುವಾಯ ಮತ್ತು ರಾಜ್ಯಗಳ ಪುನಾರಚನೆಗಿಂತ ಮುಂಚೆ ೧೯೫೬ರ ಮೇ ೨೯ರ ಸರ್ಕಾರದ ಅಧಿಸೂಚನೆಯ ಮೂಲಕ ಕಾರ್ಯಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವ ಯೋಜನೆಯನ್ನು ಪೂರ್ತಿಯಾಗಿ ಜಾರಿಗೆ ತರಲಾಯಿತು. ಹೀಗೆ ಸಂವಿಧಾನದ ೫೦ನೆಯ ಅನುಚ್ಛೇದದಲ್ಲಿ ಸೇರ್ಪಡೆಯಾದ ನಿರ್ದೇಶಕತತ್ವಗಳನ್ನು ಕಾರ್ಯಗತಗೊಳಿಸಲಾಯಿತು. ಮ್ಯಾಜಿಸ್ಟ್ರೇಟರನ್ನು ನ್ಯಾಯಿಕ ಸೇವೆಯ ಸದಸ್ಯರಂದು ಘೋಷಿಸುವ ಅಧಿಸೂಚನೆಯೊಂದಿಗೆ ೨೩೭ನೆಯ ಅನುಚ್ಚೇದವನ್ನು ಓದಿದಾಗ

ಮ್ಯಾಜಿಸ್ಟ್ರೇಟರು ಉಚ್ಚ ನ್ಯಾಯಾಲಯಗಳ ಪ್ರಾಥಮಿಕ ಮತ್ತು ಏಕಮಾತ್ರ ನಿಯಂತ್ರಣಕ್ಕೆ ಒಳಪಡುತ್ತಾರೆ. ಹೊಸ ರಾಜ್ಯದ ರಚನೆಯ ಪೂರ್ವದಲ್ಲಿ ಇದೇ ಸ್ಥಿತಿ ಇತ್ತು.[೧೪] ಹಿಂದಿನ ಮೈಸೂರು ಅರಸರ ಆಡಳಿತದ ಹೊರಗಿನ ಕರ್ನಾಟಕ ಪ್ರದೇಶಗಳಲ್ಲಿ ನ್ಯಾಯಾಡಳಿತದ ವಿಕಾಸವನ್ನು ಕೂಡ ಪರಿಶೀಲಿಸಬೇಕಾಗುವುದು.

೨.೬. ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ

ಮದ್ರಾಸ್ ಪ್ರದೇಶದಲ್ಲಿನ ಆಧುನಿಕ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವು ಕಾರ್ನ್‌ವಾಲೀಸನು ೧೭೯೩ರಲ್ಲಿ ಬಂಗಾಳದಲ್ಲಿ ಜಾರಿಗೆ ತಂದ ಪದ್ಧತಿಯನ್ನು ಹೋಲುವ ೧೮೦೨ರ ೧೧ನೆಯ ವಿನಿಯಮದ ಮೂಲಕ ಜಾರಿಗೆ ಕಾರ್ನ್‌ವಾಲೀಸ ಪದ್ಧತಿಯನ್ನು ಅನುಸರಿಸಲಾಗಿತ್ತು. ಈ ವ್ಯವಸ್ಥೆಯಲ್ಲಿ ಸ್ಥಾಪಿತವಾದ ಸಿವಿಲ್ ನ್ಯಾಯಾಲಯಗಳೆಂದರೆ (೧) ಎಂಬತ್ತು ರೂಪಾಯಿಗಳವರೆಗಿನ ಪ್ರಕರಣಗಳನ್ನು ವಿಚಾರಿಸುವ ಗ್ರಾಮ ಮಟ್ಟದ ಸ್ಥಳೀಯ ಕಮೀಷನರರ ನ್ಯಾಯಾಲಯಗಳು ಅವರ ತೀರ್ಮಾನಗಳ ಮೇಲೆ ಜಿಲ್ಲೆಯ ದಿವಾನಿ ಅದಲತ್ತಿಗೆ ಮೇಲ್ಮನವಿಗೆ ಅವಕಾಶವಿತ್ತು. (೨) ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ದಿವಾನಿ ಅದಾಲತನ್ನು ಸ್ಥಾಪಿಸಲಾಗಿತ್ತು. ೧,೦೦೦/- ರೂಪಾಯಿಗಳ ವರೆಗಿನ ವಿಷಯಗಳಲ್ಲಿ ಆ ಅದಾಲತ್ತಿನ ತೀರ್ಮಾನವೇ ಅಂತಿಮವಾದುದಾಗಿತ್ತು. (೩) ಪ್ರಾಂತೀಯ ಮೇಲ್ಮನವಿ ನ್ಯಾಯಾಲಯದ ತೀರ್ಮಾನವು ೫೦೦೦ ರೂ. ವರೆಗಿನ ವಿಷಯಗಳಲ್ಲಿ ಅಂತಿಮವಾದುದಾಗಿತ್ತು ಮತ್ತು (೪) ಪ್ರಾದೇಶಿಕ ವಿಷಯಕ್ಕೆ ಅತ್ಯುನ್ನತೆ ಅಪೀಲು ನ್ಯಾಯಾಲಯವೆನಿಸಿದ ಸದರ್ ದಿವಾನಿ ಅದಾಲತ್ತೂ ಇತ್ತು. ಆದರೆ ಅದು ೪೫.೦೦ ರೂ.ಗಳಿಗೆ ಮೀರಿದ ಮೌಲ್ಯದ ವಿಷಯಗಳಲ್ಲಿ ಕಲ್ಕತ್ತದಲ್ಲಿರುವ ಗವರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಮೇಲ್ಮನವಿ ಮಾಡಬೇಕಿತ್ತು.[೧೫]

ಆಮೇಲೆ ಈಸ್ಟ್ ಇಂಡಿಯಾ ಕಂಪೆನಿಯ ಡೈರೆಕ್ಟರುಗಳು ನೇಮಿಸಿದ ಮನ್ರೋ ಆಯೋಗದ ಶಿಫಾರಸುಗಳ ಆಧಾರದ ಮೇಲೆ ನ್ಯಾಯಾಂಗ ವ್ಯವಸ್ಥೆಯನ್ನು ಸುಧಾರಿಸಲು ಮುಂದಿನ ಹೆಜ್ಜೆಯನ್ನು ಇಡಲಾಯಿತು. ೧೮೨೭ರಲ್ಲಿ ವ್ಯವಸ್ಥೆಯು ಹೀಗಿತ್ತು. (೧) ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ದಿವಾನಿ ಅದಾಲತ್ತಿನ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಸಹಾಯಕ ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಲು ಅವಕಾಶ ಮಾಡಲಾಗಿತ್ತು. ಈ ನ್ಯಾಯಾಲಯಗಳ ತೀರ್ಮಾನದ ಮೇಲೆ ೧೦೦೦ ರೂ.ಗಳವರೆಗೆ ಜಿಲ್ಲಾ ದಿವಾಣಿ ಅದಾಲತ್ತಿಗೆ ಅಪೀಲು ಆಗುತ್ತಿದ್ದವು ಮತ್ತು ೧೦೦೦ ರೂ.ಗಳಗೆ ಮೀರಿದ ಪ್ರಕರಣಗಳಲ್ಲಿ ಪ್ರಾವಿನ್ಸಿಯಲ್ ಅಪೀಲು ನ್ಯಾಯಾಲಯಕ್ಕೆ ಅಪೀಲು ಆಗುತ್ತಿದ್ದವು. (೨) ೧೮೨೭ರ ೮ನೆಯ ಕಾನೂನು ೫೦೦ ರೂ.ಗಳವರೆಗಿನ ಪ್ರಕರಣಗಳನ್ನು ವಿಚಾರಿಸುವ ಅಧಿಕಾರ ವ್ಯಾಪ್ತಿಯೊಂದಿಗೆ (ಆಮೇಲೆ ೧೩೮೬ರ XXIVರ ಅಧಿನಿಯಮದ ಮೂಲಕ ಮುಖ್ಯ ಸದರ್, ಅಮೀನರು ಎಂದು ಕರೆಯಲ್ಪಟ್ಟು) ದೇಶೀ ನ್ಯಾಯಾಧೀಶರ ನ್ಯಾಯಾಲಯಗಳ ಪುನಾರಚನೆಗೂ ಉಪಬಂಧವನ್ನು ಕಲ್ಪಿಸಿತ್ತು. (೩) ೧೮೩೩ ವಿನಿಯಮ ರಿಜಿಸ್ಟ್ರಾರರ ಅಧಿಕಾರ ವ್ಯಾಪ್ತಿಯನ್ನು ೩೦೦೦ ರೂ.ಗಳವರೆಗೆ ಸದರ್ ಅಮೀನರ ಅಧಿಕಾರ ವ್ಯಾಪ್ತಿಯನ್ನು ೨೫೦೦ ರೂ. ವರೆಗೆ ಸದರ್ ಮತ್ತು ಮುನ್ಸೀಫರ ಅಧಿಕಾರ ವ್ಯಾಪ್ತಿಯನ್ನು ೧೦೦೦ ರೂ.ಗಳವರೆಗೆ ಹೆಚ್ಚಿಸಿತ್ತು. (೪) ೧೮೩೫ನೆಯ ಅಧಿನಿಯಮವು ಮುನ್ಸೀಫರಿಗೆ ನ್ಯಾಯಾಲಯಗಳ ಶುಲ್ಕಗಳ ಮೂಲಕ ಸಂಭಾವನೆ ಸಂದಾಯ ಮಾಡುವ ಬದಲು ತಿಂಗಳು, ತಿಂಗಳು ಸಂಬಳ ಗೊತ್ತು ಮಾಡಿ ಸಂದಾಯ ಪದ್ಧತಿಯನ್ನು ಪರಿಷ್ಕರಿಸಿತು. (೫) ೧೮೪೩ರ

VIIನೆಯ ಅಧಿನಿಯಮವು ಪ್ರಾವಿನ್ಸಿಯಲ್ ಅಪೀಲು ನ್ಯಾಯಾಲಯಗಳನ್ನು ವಿಸರ್ಜಿಸಿತು ಮತ್ತು ಅಪರಿಮಿತ ಆರ್ಥಿಕ ಅಧಿಕಾರ ವ್ಯಾಪ್ತಿಯನ್ನು ಜಿಲ್ಲಾ ದಿವಾನಿ ಅದಾಲತ್ತಿಗೆ ವಹಿಸಿಕೊಡಲಾಯಿತು.[೧೬]

ಈ ವ್ಯವಸ್ಥೆಯ ಪುನಾರಚನೆಯ ವಿಷಯದಲ್ಲಿ ನಂತರದ ಮಹತ್ವದ ಕ್ರಮವನ್ನು ೧೮೭೩ ರ ಮದ್ರಾಸ್ ಸಿವಿಲ್ ನ್ಯಾಯಾಲಯಗಳ ಅಧಿನಿಯಮದ ಮೂಲಕ ೧೮೭೩ರಲ್ಲಿ ತೆಗೆದುಕೊಳ್ಳಲಾಯಿತು. ಈ ಅಧಿನಿಯಮವು ಮದ್ರಾಸ್ ರಾಜ್ಯದಲ್ಲಿನ ಸಿವಿಲ್ ನ್ಯಾಯಾಲಯಗಳ ರಚನೆ, ಸಂಘಟನೆ, ಅಧಿಕಾರವ್ಯಾಪ್ತಿ ಮತ್ತು ಶಕ್ತಿಗಳನ್ನು ಕುರಿತು ಉಪಬಂಧಿಸುತ್ತವೆ. ಈ ಅಧಿನಿಯಮದ ಮೇರೆಗೆ ಜಿಲ್ಲಾ ನ್ಯಾಯಾಲಯಗಳನ್ನು ಮತ್ತು ಮುಖ್ಯ ಸದರ್ ಅಮೀನರನ್ನು ಕ್ರಮವಾಗಿ ಜಿಲ್ಲಾ ನ್ಯಾಯಾಲಯಗಳೆಂದು ಮತ್ತು ಅಧೀನ ನ್ಯಾಯಾಧೀಶರೆಂದು ಪುನರ್‌ನಾಮಕರಣ ಮಾಡಲಾಯಿತು. ಈ ಅಧಿನಿಯಮದ ಮೇರೆಗೆ ನ್ಯಾಯಾಲಯಗಳ ಶ್ರೇಣಿ ಎಂದರೆ (೧) ಎಲ್ಲಿ ಸಿವಿಲ್ ದಾವೆಗಳನ್ನು ವಿಚಾರಿಸುವ ಅಧಿಕಾರ ವ್ಯಾಪ್ತಿಯೊಂದಿಗೆ ಪ್ರತಿಯೊಂದು ಜಿಲ್ಲೆಗೆ ಒಂದು ಜಿಲ್ಲಾ ನ್ಯಾಯಾಲಯ. (೨) ಎಲ್ಲಾ ಸಿವಿಲ್ ದಾವೆಗಳನ್ನು ವಿಚಾರಿಸುವ ಅಧಿಕಾರ ವ್ಯಾಪ್ತಿಯೊಂದಿಗೆ ಪ್ರತಿಯೊಂದು ಜಿಲ್ಲೆಗೆ ಒಂದು ಜಿಲ್ಲಾ ನ್ಯಾಯಾಲಯ. (೩) ೫೦೦೦ ರೂ. ಮೌಲ್ಯದವರೆಗಿನ ಪ್ರಕರಣಗಳನ್ನು ವಿಚಾರಿಸುವ ಮುನ್ಸಿಫರು ಜಿಲ್ಲಾ ನ್ಯಾಯಾಲಯಗಳ ಮೂಲ ತೀರ್ಮಾನಗಳ ಮೇಲೆ ಉಚ್ಚ ನ್ಯಾಯಾಲಯಕ್ಕೆ ಎಂದರೆ ಮದ್ರಾಸ್ ಉಚ್ಚ ನ್ಯಾಯಾಲಯಕ್ಕೆ ಮೊದಲನೆಯ ಮೇಲ್ಮನವಿ ಸಲ್ಲಿಸಬೇಕು. ಮುನ್ಸಿಫರ ಹಾಗೂ ಇತರ ಅಧೀನ ನ್ಯಾಯಾಲಯಗಳ ತೀರ್ಪಿನ ಮೇಲೆ ೧೦,೦೦೦ ರೂ.ಗಳ ವರೆಗಿನ ಮೌಲ್ಯದ ದಾವೆಗಳಲ್ಲಿ ಈ ಜಿಲ್ಲಾ ನ್ಯಾಯಾಲಯಕ್ಕೂ ಇತರ ದಾವೆಗಳಲ್ಲಿ ಉಚ್ಚ ನ್ಯಾಯಾಲಯಕ್ಕೂ ಮೇಲ್ಮನವಿ ಸಲ್ಲಿಸಬೇಕು. ಹಿಂದೂ ಮತ್ತು ಮುಸ್ಲಿಂ ಖಾಸಗಿ(ವೈಯಕ್ತಿಕ) ಕಾನೂನುಗಳ ಕಾರ್ಯಾಚರಣೆ ಈ ನ್ಯಾಯಾಲಯಕ್ಕೆ ಸೇರಿದ್ದು, ಇತರ ಪ್ರಕರಣಗಳಲ್ಲಿ ನ್ಯಾಯ ಸಮಾನತೆ ಮತ್ತು ಆತ್ಮಸಾಕ್ಷಿ ಎಂಬ ಮೂರು ತತ್ವಗಳಂತೆ ತೀರ್ಪನ್ನು ನೀಡಬೇಕಾಗಿತ್ತು.

೨.೭ ಮುಂಬೈ ಕರ್ನಾಟಕ ಪ್ರದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ

ಈ ಪ್ರದೇಶದಲ್ಲಿಯ ನಿಯಮಿತ ನ್ಯಾಯದ ವ್ಯವಸ್ಥೆಯ ಬೆಳವಣಿಗೆಯು ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿದ್ದಂತೆಯೇ ಇತ್ತು. ಈ ಪದ್ಧತಿಯ ರೂಪರೇಷೆ ಹೊಂದಿದ ನ್ಯಾಯಾಂಗವನ್ನು ಜಾನ್ ಡಂಕನ್ ಎಂಬಾತನು ೧೭೯೯ರಲ್ಲಿ ಸ್ಥಾಪಿಸಿದನು ಮತ್ತು ಅದನ್ನು ಅವಶ್ಯವಾದಾಗಲೆಲ್ಲ ಪುನಾರಚಿಸಲಾಯಿತು. ೧೮೨೭ರ ಸುಮಾರು ನೆಲೆಗೊಂಡ ವ್ಯವಸ್ಥೆಯು ಈ ಮುಂದಿನಂತಿತ್ತು. (೧) ಪ್ರತಿ ಜಿಲ್ಲೆಗೆ ಒಬ್ಬರಂತೆ ನೇಮಿಸಲಾದ ದೇಶೀಯ ಕಮೀಷನರು ೫೦೦೦ ರೂ. ಮೇಲ್ಪಟ್ಟ ಮೌಲ್ಯದ ಭಾರತೀಯರ ಪ್ರಕರಣಗಳನ್ನು ಮಾತ್ರ ತೀರ್ಮಾನಿಸಬೇಕಾಗುತ್ತಿತ್ತು. ನ್ಯಾಯಾಧೀಶರ ಸಂಖ್ಯೆಯಲ್ಲಿ ಮತ್ತು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬದಲಾವಣೆಗಳಿಗೆ ಸ್ಥಾನಿಕ ಸರಕಾರವು ಸಕ್ಷಮವಾಗಿತ್ತು. (೨) ಗರಿಷ್ಠ ಸಹಾಯಕ ನ್ಯಾಯಾಧೀಶರ ಸಾಮಾನ್ಯ ಆರ್ಥಿಕ ಅಧಿಕಾರ ವ್ಯಾಪ್ತಿಯು ೫೦೦ ರೂ.ವರೆಗೆ ಇತ್ತು. ವಿಶೇಷ ಅಧಿಕಾರದೊಂದಿಗೆ ಅದು ರೂ.೧೦೦೦೦ ವರೆಗೆ ಹೆಚ್ಚಾಗಬಹುದಿತ್ತು. ಕಿರಿಯ ಸಹಾಯಕ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯು ೫೦೦೦ ರೂ.ವರೆಗೆ ಇತ್ತು. (೩) ಅಪರಿಮಿತ ಆರ್ಥಿಕ ಮೌಲ್ಯದ ಎಲ್ಲ ಸಿವಿಲ್ ಪ್ರಕರಣಗಳು ಜಿಲ್ಲಾ ದಿವಾನಿ ಅದಾಲತಿಗೆ ಹೋಗುತ್ತಿದ್ದವು.[೧೭]

ಅದಕ್ಕೆ ದೇಶೀಯ ಕಮಿಷನರ್ ಮತ್ತು ಕಿರಿಯ ಸಹಾಯಕ ನ್ಯಾಯಾಧೀಶರ ತೀರ್ಮಾನಗಳ ಮೇಲೆ ಮೇಲ್ಮನವಿಗಳ ವಿಚಾರಣಾಧಿಕಾರವು ಇತ್ತು (೪) ಮೂರು ಅಥವಾ ಅದಕ್ಕೂ ಹೆಚ್ಚು ನ್ಯಾಯಾಧೀಶರಿಂದ ಕೂಡಿದ ಸದರ್ ದಿವಾನಿ ಅದಾಲತ್ತು ಮೇಲ್ಮನವಿಯ ಪುನರಾವಲೋಕನ ಮತ್ತು ಪುನರೀಕ್ಷಣೆಯ ಅತ್ಯುನ್ನತ ನ್ಯಾಯಾಲಯವಾಗಿತ್ತು ಮತ್ತು ಕೆಳ ನ್ಯಾಯಾಲಯಗಳ ಮೇಲೆ ಮೇಲ್ವಿಚಾರಣೆಯ ಅಧಿಕಾರಗಳನ್ನು ಚಲಾಯಿಸುತ್ತಿತ್ತು. ಅದು ಯಾವುದೇ ಅಧೀನ ಸಿವಿಲ್ ನ್ಯಾಯಾಲಯದಿಂದ ಯಾವುದೇ ದಾಖಲೆಗಳನ್ನು ತರಿಸಿಕೊಳ್ಳಬಹುದಾಗಿತ್ತು ಮತ್ತು ತಾನು ಸೂಕ್ತವೆಂದು ಭಾವಿಸುವ ಆದೇಶಗಳನ್ನು ಮಾಡಬಹುದಾಗಿತ್ತು. ೧೮೨೮ರಲ್ಲಿ ಅದನ್ನು ಮುಂಬೈಗೆ ವರ್ಗಾಂತರಿಸಲಾಯಿತು. ಜಿಲ್ಲಾ ದಿವಾನಿ ಅದಾಲತಿನ ತೀರ್ಮಾನದ ವಿರುದ್ಧ ಮೇಲ್ಮನವಿಗಳ ವಿಚಾರಣೆ ಮಾಡಲು ಗುಜರಾತಿನ ಸೂರತ್‌ನಲ್ಲಿ ಒಂದು ಮೇಲ್ಮನವಿಯ ನ್ಯಾಯಾಲಯವನ್ನು ರಚಿಸಲಾಯಿತು. ಕೆಲವೊಂದು ನಿರ್ಬಂಧಗಳಿಗೆ ಒಳಪಟ್ಟು ಸದರಿ ದಿವಾನಿ ಅದಾಲತಿಗೆ ಮುಂದಿನ ಅಪೀಲಿಗೆ ಅವಕಾಶವಿತ್ತು. ಯುರೋಪಿಯನ್ ನ್ಯಾಯಾಧೀಶರು ಪಂಚಾಯತಿಗಳ ಅಥವಾ ಗೌರವಾನ್ವಿತ ದೇಶೀಯರಿಂದ ಕೂಡಿದ ಜೂರಿ(ನ್ಯಾಯದರ್ಶಿ ಮಂಡಳಿ)ಯ ಸಹಾಯವನ್ನು ತೆಗೆದುಕೊಳ್ಳಲು ಅಧಿಕಾರವನ್ನು ಹೊಂದಿದ್ದರು. ಅಂತಿಮ ನಿರ್ಣಯವು ನ್ಯಾಯಾಧೀಶರದಾಗಿತ್ತು. ವಕೀಲರ ನೋಂದಣಿಗೂ ಉಪಬಂಧ ಕಲ್ಪಿಸಲಾಗಿತ್ತು. ನಿಯಮ XVIIರ ಮೂಲಕ ಭೂಹಿಡುವಳಿ ಸ್ವಾಧೀನ ಗುತ್ತಿಗೆಯ ಮೇರೆಗಳು ಬಾವಿಗಳ ಉಪಯೋಗ ಇತ್ಯಾದಿ ವಿಷಯಗಳನ್ನು ಕುರಿತು ವಿವಾದಗಳ ಸಂಬಂಧದಲ್ಲಿ ಕಲೆಕ್ಟರರಿಗೆ ಅನನ್ಯ ಅಧಿಕಾರ ವ್ಯಾಪ್ತಿಯನ್ನು ನೀಡಲಾಗಿತ್ತು. ಅವರ ತೀರ್ಮಾನವು ಜಿಲ್ಲಾ ದಿವಾನಿ ಅದಾಲತಿಗೆ ಅಪೀಲಿಗೆ ಒಳಪಟ್ಟಿರುತ್ತಿತ್ತು.

ಈ ವ್ಯವಸ್ಥೆಯನ್ನು ಸುಧಾರಿಸಲು ೧೮೬೯ರಲ್ಲಿ ಸಿವಿಲ್ ನ್ಯಾಯಾಲಯಗಳ ಅಧಿನಿಯಮವನ್ನು ರೂಪಿಸಲಾಯಿತು ಮತ್ತು ಅದನ್ನು ಮುಂಬೈ ನಗರವೊಂದನ್ನುಳಿದು ಇಡೀ ರಾಜ್ಯಕ್ಕೆ ಅನ್ವಯಿಸಲಾಯಿತು. ಆಗ ಸ್ಥಾಪಿಸಿದ ನ್ಯಾಯಾಲಯಗಳ ಶ್ರೇಣಿ ಎಂದರೆ (೧) ಪ್ರತಿಯೊಂದು ಜಿಲ್ಲೆಗೆ ಮೂಲ ಅಧಿಕಾರ ವ್ಯಾಪ್ತಿಯ ಮುಖ್ಯ ಸಿವಿಲ್ ನ್ಯಾಯಾಲಯವಾಗಿ ಜಿಲ್ಲಾ ನ್ಯಾಯಾಧೀಶ. (೨) ಜಿಲ್ಲಾ ನ್ಯಾಯಾಧೀಶರೊಂದಿಗೆ ಸಹ ಅಧಿಕಾರಿಗಳೊಂದಿಗೆ ಮತ್ತು ಅಧಿಕಾರ ವ್ಯಾಪ್ತಿಯೊಂದಿಗೆ ನಿಯುಕ್ತನಾಗುವ ಜಿಲ್ಲಾ ನ್ಯಾಯಾಲಯದ ಒಬ್ಬ ಜಂಟಿ ನ್ಯಾಯಾಧೀಶ. (೩) ಸಾಮಾನ್ಯವಾಗಿ ಮುಖ್ಯ ಕಾರ್ಯ ಸ್ಥಳದಲ್ಲಿದ್ದು ಜಿಲ್ಲಾ ನ್ಯಾಯಾಧೀಶನು ತನಗೆ ವಹಿಸಿಕೊಡಬಹುದಾದ ೧೫೦೦೦ ರೂ.ವರೆಗೆ ಕಡಿಮೆ ಮೌಲ್ಯದ ಮೂಲ ದಾವೆಗಳನ್ನು ವಿಚಾರಿಸುವ ಸಹಾಯಕ ಜಿಲ್ಲಾ ನ್ಯಾಯಾಧೀಶ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಮೀರದ ಆರ್ಥಿಕ ಪರಿಹಾರ ವ್ಯಾಪ್ತಿಯೊಂದಿಗೆ (ಹಿರಿಯ ಮತ್ತು ಕಿರಿಯ ವಿಭಾಗದ) ಸಿವಿಲ್ ನ್ಯಾಯಾಧೀಶರು ಈ ಕೊನೆಯ ಎರಡು ನ್ಯಾಯಾಲಯಗಳಿಂದ ೫೦೦೦ ರೂ.ಗೆ ಕಡಿಮೆ ಮೌಲ್ಯದ ಪ್ರಕರಣಗಳಲ್ಲಿ ಜಿಲ್ಲಾ ನ್ಯಾಯಾಧೀಶನಿಗೆ ಮತ್ತು ಅದಕ್ಕೂ ಮೇಲೆ ಮೇಲ್ಮನವಿಗಳಾಗುತ್ತಿದ್ದವು. ಹೀಗೆ ಜಾರಿಗೆ ಬಂದ ವ್ಯವಸ್ಥೆಯು ೧.೧೧.೫೬ರವರೆಗೆ ಮುಂದುವರೆದುಕೊಂಡು ಬಂದಿತು.

೨.೮. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನ್ಯಾಯಾಂಗ ವ್ಯವಸ್ಥೆ

ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಆಡಳಿತ ವಿಭಾಗಗಳನ್ನು ನಿಜಾಮರು ೧೮೬೬ ರಲ್ಲಿ ಪುನಾರಚಿಸಿದರು. ಅಲ್ಲಿಯವರೆಗೆ ಸಿವಿಲ್‌ವಾದ ವಿವಾದಗಳನ್ನು ತೀರ್ಮಾನಿಸುವ ಅಧಿಕಾರಗಳನ್ನು

ಕಂದಾಯ ಅಧಿಕಾರಿಗಳಿಗೆ ವಹಿಸಿಕೊಡಲಾಗಿತ್ತು. ಈ ಅಧಿಕಾರಗಳನ್ನು ಅವರಿಂದ ತೆಗೆದು ಹೊಸದಾಗಿ ಸ್ಥಾಪಿಸಿದ ಸಿವಿಲ್ ನ್ಯಾಯಾಲಯಗಳಿಗೆ ವಹಿಸಲಾಯಿತು. ಆದರೆ ತಹಸೀಲ್ ಮಟ್ಟದಲ್ಲಿ ತಹಸೀಲ್‌ದಾರರು ಸಿವಿಲ್ ಪ್ರಕರಣಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದರು. ಕ್ರಿಮಿನಲ್ ವಿಷಯಗಳಲ್ಲಿ ತಾಲೂಕುದಾರರು ಮತ್ತು ಪೊಲೀಸ್ ಪಟೇಲರು ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸುತ್ತಿದ್ದರು. ಕಲ್ಬುರ್ಗಿ ವಿಭಾಗದ ಸುಬೇದಾರರು ಆ ವಿಭಾಗದಲ್ಲಿ ಅತ್ಯುನ್ನತ ಕ್ರಿಮಿನಲ್ ನ್ಯಾಯಾಧೀಶರಾಗಿ ಅಧಿಕಾರ ಚಲಾಯಿಸುತ್ತಿದ್ದರು. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವ ಯೋಜನೆಯನ್ನು ಸಿದ್ಧಗೊಳಿಸಿ ೧೯೨೨ರಲ್ಲಿ ಜಾರಿಗೆ ತರಲಾಯಿತು. ಪ್ರತಿಯೊಂದು ತಹಸೀಲಿಗೆ (ತಾಲೂಕಿಗೆ) ಒಬ್ಬ ಮುನ್ಸೀಫ್ ಮ್ಯಾಜಿಸ್ಟ್ರೇಟನನ್ನು ನಿಯಮಿಸಲಾಯಿತು. ಕ್ರಿಮಿನಲ್ ವಿಭಾಗದಲ್ಲಿ ಅವರಿಗೆ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ನೀಡಲಾಗಿತ್ತು. ಕಂದಾಯ ಅಧಿಕಾರಿಗಳಿಂದ ನ್ಯಾಯಿಕ ಮ್ಯಾಜಿಸ್ಟೇಟರ ಅಧಿಕಾರಗಳನ್ನು ಕಿತ್ತುಕೊಳ್ಳಲಾಗಿತ್ತು. ೧೯೩೨ರಲ್ಲಿ ಜೂರಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಜಿಲ್ಲೆಯ ಮತ್ತು ಉಪವಿಭಾಗದ ಪ್ರಭಾರ ಹೊಂದಿರುವ ಪ್ರಥಮ ತಾಲೂಕುದಾರ ಮತ್ತು ದ್ವಿತೀಯ ತಾಲೂಕುದಾರರಿಗೆ ಕ್ರಮವಾಗಿ ಕಾನೂನು ಸುವ್ಯವಸ್ಥೆಯನ್ನು ಪಾಲನೆ ಮಾಡುವ ಉದ್ದೇಶಕ್ಕಾಗಿ ಕಾರ್ಯಾಂಗ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ನೀಡಲಾಗಿತ್ತು. ಮೇಲ್ಕಂಡ ನ್ಯಾಯಾಲಯಗಳಲ್ಲದೆ ಸರ್ಫೇಖಾನ್-ಮುಬಾರಕ್ ಮತ್ತು ಜಾಗೀರುಗಳು ತಮ್ಮದೇ ಆದ ನ್ಯಾಯಾಲಯಗಳನ್ನು ಹೊಂದಿದ್ದವು ಈ ನ್ಯಾಯಾಲಯಗಳು ನ್ಯಾಯದಾನ ಮಾಡುತ್ತಿದ್ದವು ಮತ್ತು ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದವು. ೧೯೫೧ರವರೆಗೆ ಕಲ್ಬುರ್ಗಿಯ ಇಡೀ ಪ್ರದೇಶದಲ್ಲಿ ಒಂದೇ ಒಂದು ಜಿಲ್ಲಾ ನ್ಯಾಯಾಲಯವಿತ್ತು. ಜಿಲ್ಲಾ ನ್ಯಾಯಾಧೀಶನು ಅದರ ಮುಖ್ಯಾಧಿಕಾರಿಯಾಗಿದ್ದನು. ೧೯೪೮ಕ್ಕಿಂತ ಮುಂಚೆ ವ್ಯವಹಾರಗಳಲ್ಲಿ ನಿಜಾಮ್ ಸರ್ಕಾರದ ರಾಜಭಾಷೆಯಾದ ಉರ್ದು ಭಾಷೆಯನ್ನು ಉಪಯೋಗಿಸಲಾಗುತ್ತಿತ್ತು. ೧೯೪೮ರಲ್ಲಿ ಇಂಗ್ಲಿಷ್ ನ್ಯಾಯಾಲಯ ಭಾಷೆಯಾಯಿತು.[೯] ಈ ರೀತಿಯಾಗಿ ಕರ್ನಾಟಕ ನ್ಯಾಯಾಂಗ ವ್ಯವಸ್ಥೆಯು ಬದಲಾವಣೆಯನ್ನು ಹೊಂದುತ್ತಾ ಬಂತು ಎಂದು ವಿವರಿಸಹುದಾಗಿದೆ.

ಕೊನೆ ಟಿಪ್ಪಣಿ

೨) ಉತ್ತರ ಕರ್ನಾಟಕ ಹೈಕೋರ್ಟ್ ಪೀಠ ವಿಶೇಷಾಂಕ ೦೪.೦೭.೨೦೦೮.

೩) ಸೂರ್ಯನಾಥ ಕಾಮತ್ ಯು. ಕರ್ನಾಟಕ ಖಜಾನಾ ಗೆಜೆಟಿಯರ್, ಲೋಟಸ್ ಪ್ರಿಂಟರ್ಸ್, ಬೆಂಗಳೂರು, ೧೯೮೫, ಪು. ೪೭೦.

೪) ಅದೇ ಪುಟ. ೪೭೦.

೫) ಅದೇ ಪುಟ.

೬) ಸೂರ್ಯನಾಥ ಕಾಮತ್ ಯು. ಕರ್ನಾಟಕ ಖಜಾನಾ ಗೆಜೆಟಿಯರ್ ಧಾರವಾಡ ಜಿ, ಕರ್ನಾಟಕ ಖಜಾನಾ ಸರ್ಕಾರ, ಬೆಂಗಳೂರು.

೭) ಅದೇ ಪುಟ.

೮) ಶ್ರೀನಿವಾಸ ನಿರನೂರಕಲ್, ವಿಜ್ಞಾನೇಶ್ವರ ಮಿತಾಕ್ಷರ ಪ್ರಸಾರಾಂಗ ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ, ೨೦೦೫.

೯) ಸೂರ್ಯನಾಥ ಕಾಮತ್ ಯು. ಕರ್ನಾಟಕ ಖಜಾನಾ ಗೆಜೆಟಿಯರ್, ಲೋಟಸ್ ಪ್ರಿಂಟರ್ಸ್, ಬೆಂಗಳೂರು, ೧೯೮೫, ಪು. ೪೭೩.

೧೦) ಅದೇ ಪುಟ.

೧೧) ಸೂರ್ಯನಾಥ ಕಾಮತ್ ಯು. ಕರ್ನಾಟಕ ಖಜಾನಾ ಗೆಜೆಟಿಯರ್, ಲೋಟಸ್ ಪ್ರಿಂಟರ್ಸ್, ಬೆಂಗಳೂರು, ೧೯೮೫, ಪು. ೪೭೩.

೧೨) ಅದೇ ಪುಟ.

೧೩) ಅದೇ ಪುಟ.

೧೪) ಅದೇ ಪುಟ.

೧೫) ಬಿರೇಂದ್ರನಾಥ, ಜುಡಿಷಿಯಲ್ ಅಡ್ಮಿನಿಸ್ಟ್ರೇಷನ್ ಇನ್ ಏನ್ಶೆಂಟ್ ಇಂಡಿಯಾ, ೧೯೭೯.

೧೬) ಸೂರ್ಯನಾಥ ಕಾಮತ್ ಯು. ಕರ್ನಾಟಕ ಖಜಾನಾ ಗೆಜೆಟಿಯರ್, ಲೋಟಸ್ ಪ್ರಿಂಟರ್ಸ್, ಬೆಂಗಳೂರು, ೧೯೮೫, ಪು. ೪೭೭.

೧೭) ಅದೇ ಪುಟ.

೧೮) ಅದೇಪುಟ.

೧೯) ಪಾಟೀಲ ಎಂ.ಬಿ. ಕರ್ನಾಟಕ ಖಜಾನಾ ಗೆಜೆಟಿಯರ್, ಗುಲ್ಬರ್ಗ ಜಿಲ್ಲೆ (ಕಲಬುರ್ಗಿಜಿಲ್ಲೆ), ಕರ್ನಾಟಕ ಖಜಾನಾ ಸರ್ಕಾರ, ಬೆಂಗಳೂರು, ೧೯೯೭.

* * *

ಅಧ್ಯಾಯ-೩

ಉತ್ತರ ಕರ್ನಾಟಕದ ಹೈಕೋರ್ಟ್ (ಸಂಚಾರಿ) ಪೀಠ: ರಾಜಕೀಯ ಪಕ್ಷ ಮತ್ತು ವಿವಿಧ ಸಂಘಟನೆಗಳ ಮೂಲಕ ನಡೆದ ಚಳವಳಿಗಳು

ಅಧ್ಯಾಯ–೩

ಉತ್ತರ ಕರ್ನಾಟಕದ ಹೈಕೋರ್ಟ್ (ಸಂಚಾರಿ) ಪೀಠ : ರಾಜಕೀಯ ಪಕ್ಷ ಮತ್ತು ವಿವಿಧ ಸಂಘಟನೆಗಳ ಮೂಲಕ ನಡೆದ ಚಳವಳಿಗಳು

೩.೧. ಮೊದಲ ಹಂತ

೧೯೭೭ರಲ್ಲಿ ಬಿ.ಡಿ. ಜತ್ತಿ ಅವರು ಧಾರವಾಡ ಮಹಾನಗರ ಪಾಲಿಕೆಯ ಉದ್ಘಾಟನೆ ವೇಳೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಕುರಿತು ಸರ್ಕಾರದ ಗಮನ ಸೆಳೆದರು. ಆದರೆ ಫಲಿತಾಂಶ ಶೂನ್ಯವಾಗಿತ್ತು. ೧೯೭೯ರಲ್ಲಿ ರಾಜ್ಯ ಹೈಕೋರ್ಟ್‌ನ ಅಂದಿನ ಮುಖ್ಯ ನ್ಯಾಯಮೂರ್ತಿಗಳಾದ ಡಿ.ಎಂ. ಚಂದ್ರಶೇಖರ್ ಅವರು ಹುಬ್ಬಳ್ಳಿ–ಧಾರವಾಡಕ್ಕೆ ಬೇಟಿ ನೀಡಿ, ಸ್ಥಳ ಪರಿಶೀಲಿಸಿ ಅಲ್ಲಿ ಪೀಠ ಸ್ಥಾಪಿಸಬಹುದೆಂದು ಶಿಫಾರಸ್ಸು ಮಾಡಿ, ಈ ಕುರಿತು ಸರ್ಕಾರ ಇತರ ಅವಶ್ಯಕ ಏರ್ಪಾಟು ಮಾಡಿದಲ್ಲಿ ಮಹಾನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬಹುದು ಎಂದರು. ಆಗಿನ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾವ್ ಅವರು ಮುಖ್ಯ ನ್ಯಾಯಮೂರ್ತಿಗಳ ವರದಿಗೆ ಸಮ್ಮತಿಸಿ ಅಂದಿನ ಕೇಂದ್ರ ಸರ್ಕಾರ ಕಾನೂನು ಮಂತ್ರಿ ಶಿವಶಂಕರ ಅವರಿಗೆ ತಮ್ಮ ಒಪ್ಪಿಗೆ ಪತ್ರ ದಿನಾಂಕ ೧೦.೮.೧೯೮೧ರಲ್ಲಿ ಕಳುಹಿಸಿದ್ದರು. ಮುಂದೆ ಅದರ ಮೇಲೆ ಕಾರ್ಯ ನಡೆಯುತ್ತಿದ್ದಾಗಲೇ ಸರ್ಕಾರವು ಬದಲಿಗೊಂಡು ಅಂದಿನ ಮುಖ್ಯ ನ್ಯಾಯಾಧೀಶರು ಸಹ ನಿವೃತ್ತಿಗೊಂಡರು.

೩.೧.೧. ನ್ಯಾಯಮೂರ್ತಿ ಡಿ.ಎಂ. ಚಂದ್ರಶೇಖರ್

ರಾಜ್ಯ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ಎಂ. ಚಂದ್ರಶೇಖರ್ ಅವರ ಅಭಿಪ್ರಾಯದಂತೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವಂತೆ ಸರ್ಕಾರಕ್ಕೆ ೧೯೮೦ರಲ್ಲಿ ಶಿಫಾರಸ್ಸು ಮಾಡಿದ್ದರು. ಆದರೆ ಆ ವಿಚಾರದಲ್ಲಿ ಅಂದಿನ ಸರ್ಕಾರ ಆಸಕ್ತಿ ತೋರಸಲಿಲ್ಲ. ಆಗ ಸರ್ಕಾರ ಆಸಕ್ತಿ ವಹಿಸಿದ್ದರೆ ವಿವಾದ ಇಷ್ಟು ಕಗ್ಗಂಟಾಗುತ್ತಿರಲಿಲ್ಲ ಎಂದರು. ಅವರು ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಈಗ ಬಾಕಿ ಉಳಿದಿರುವ ಮೊಕದ್ದಮೆಗಳು, ಮುಂದೆ ದಾಖಲಾಗುವ ಪ್ರಕರಣಗಳನ್ನು ಗಮನಿಸಿದರೆ ನಾಲ್ವರು ನ್ಯಾಯಮೂರ್ತಿಗಳಿಗೆ ಸಾಕಷ್ಟು ಕೆಲಸ ಒದಗಿಸಬಹುದು. ಬರಿ ಮೊಕದ್ದಮೆಗಳ

ಸಂಖ್ಯೆಯೊಂದೇ ಮಾನದಂಡವಲ್ಲ ಎಂದರು. ಉತ್ತರ ಕರ್ನಾಟಕದ ಭಾಗಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಅಲ್ಲೇ ತೀರ್ಮಾನ ಆಗುವುದರಿಂದ ಸಮಸ್ಯೆಗಳು ಯಾವುದೇ ರೀತಿಯಿಂದಲೂ ಉದ್ಭವಿಸದು. ಈಗಾಗಲೇ ಉತ್ತರದ ಅನೇಕ ರಾಜ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಹೈಕೋರ್ಟ್ ಪೀಠಗಳು ಇವೆ. ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ಮುಖ್ಯ ಪೀಠ ಅಲಹಾಬಾದ್‌ನಲ್ಲಿದ್ದರೆ ಮತ್ತೊಂದು ಪೀಠ ಲಖನೌನಲ್ಲಿದೆ. ರಾಜಾಸ್ಥಾನದಲ್ಲಿ ಮುಖ್ಯ ಪೀಠ ಜೋದ್‌ಪೂರ್‌ದಲ್ಲಿದ್ದರೆ ಇನ್ನೊಂದು ಜೈಪುರದಲ್ಲಿದೆ. ಮಹಾರಾಷ್ಟ್ರದಲ್ಲಿ ಪ್ರಧಾನ ಪೀಠ ಮುಂಬೈನಲ್ಲಿದ್ದರೆ ನಾಗಪುರ ಮತ್ತು ಔರಂಗಬಾದ್‌ಗಳಲ್ಲಿ ಪ್ರತ್ಯೇಕ ಪೀಠಗಳಿವೆ. ಮಧ್ಯಪ್ರದೇಶದಲ್ಲಿ ಮುಖ್ಯ ಪೀಠ ಜಬ್ಬಲ್‌ಪುರದಲ್ಲಿದ್ದರೆ ಗ್ವಾಲಿಯರ್ ಮತ್ತು ಇಂದೋರ್‌ಗಳಲ್ಲಿ ಪ್ರತ್ಯೇಕ ಪೀಠಗಳಿವೆ. ಇನ್ನು ವಿಸ್ತೀರ್ಣದಲ್ಲಿ ಕರ್ನಾಟಕಕ್ಕಿಂತ ಕಡಿಮೆ ಇರುವ ತಮಿಳುನಾಡು ರಾಜ್ಯದಲ್ಲಿ ಮಧುರೈನಲ್ಲಿ ಹೆಚ್ಚುವರಿಯಾಗಿ ಮತ್ತೊಂದು ಪೀಠ ಸ್ಥಾಪನೆಯಾಗಿದೆ. ಹೀಗಿರುವಾಗ ತಮಿಳುನಾಡಿಗಿಂತ ವಿಸ್ತೀರ್ಣದಲ್ಲಿ ದೊಡ್ಡದಿರುವ ಕರ್ನಾಟಕದಲ್ಲಿ ಮತ್ತೊಂದು ಪೀಠ ಸ್ಥಾಪನೆಗೆ ಹಿಂದೇಟು ಏಕೆ. ಅವರ ಅಭಿಪ್ರಾಯದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಹುಬ್ಬಳ್ಳಿ–ಧಾರವಾಡ ಅವಳಿ ನಗರವೇ ಸೂಕ್ತ ಸ್ಥಳ. ಕಲಬುರ್ಗಿ ಜಿಲ್ಲೆ ರಾಜ್ಯದ ಒಂದು ಮೂಲೆಯಲ್ಲಿರುವುದರಿಂದ ದೂರ ಆಗುತ್ತದೆ. ಮುಂಬೈ ಕರ್ನಾಟಕದ ಜಿಲ್ಲೆಗಳು ಹಾಗೂ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕೊಪ್ಪಳ ಜಿಲ್ಲೆ ಹಾಗೂ ದಾವಣಗೆರೆ ಜಿಲ್ಲೆಗಳನ್ನೊಳಗೊಂಡಂತೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಅಡ್ಡಿ ಇಲ್ಲ. ಈ ಜಿಲ್ಲೆಗಳು ಹುಬ್ಬಳ್ಳಿ–ಧಾರವಾಡಕ್ಕೆ ಬೆಂಗಳೂರಿಗಿಂತಲೂ ಹತ್ತಿರ ಆಗಲಿದೆ. ಇನ್ನೂ ಸಧ್ಯದ ಸ್ಥಿತಿಯಲ್ಲಿ ಹುಬ್ಬಳ್ಳಿ–ಧಾರವಾಡದಿಂದ ಕಲಬುರ್ಗಿ, ಬೀದರ್, ರಾಯಚೂರುಗಳಿಗೆ ನೇರ ರೈಲು ಸಂಪರ್ಕ ಇಲ್ಲ. ಆದರೆ ಬಸ್ ಸೌಲಭ್ಯವಿದೆ. ಬಳ್ಳಾರಿಯನ್ನು ಈ ವ್ಯಾಪ್ತಿಗೆ ಸೇರಿಸಬಹುದು ಎಂದರು[೨].

೩.೧.೨ ನ್ಯಾಯಮೂರ್ತಿ ಜಸ್ವಂತ್‌ಸಿಂಗ್ ಸಮಿತಿ

ಭಾರತ ಸರ್ಕಾರವು ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಹೆಚ್ಚುವರಿ ಹೈಕೋರ್ಟ್ ನ್ಯಾಯಪೀಠವನ್ನು ಸ್ಥಾಪಿಸುವ ಕುರಿತು ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಶ್ರೀ ಜಸ್ವಂತ್‌ಸಿಂಗ್ ಅವರನ್ನು ನೇಮಿಸಲಾಗಿತ್ತು. ಆ ಆಯೋಗವು ಇಂಥ ಬೇಡಿಕೆಗಳ ಕುರಿತು ಕೆಲವು ನಿರ್ದಿಷ್ಟ ಮಾರ್ಗದರ್ಶಿಗಳನ್ನು ರೂಪಿಸಿತ್ತು. ರಾಷ್ಟ್ರದ ಬೇರೆ ಬೇರೆ ಜಾಗಗಳಿಗೆ ಸಂಚರಿಸಿ ಧಾರವಾಡಕ್ಕೆ ಬಂದಾಗ ಅಲ್ಲಿಯ ಅನೇಕ ಸಂಘ ಸಂಸ್ಥೆಗಳು ಹಾಗೂ ವಕೀಲರ ಸಂಘದವರು ಹಾಜರಾಗಿ ಹುಬ್ಬಳ್ಳಿ–ಧಾರವಾಡ ಮಧ್ಯೆ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಮನವರಿಕೆ ಮಾಡಿಕೊಟ್ಟರು. ಶ್ರೀ ಜಸ್ವಂತ್‌ಸಿಂಗ್ ಆಯೋಗವು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ ೩೦.೪.೧೯೮೫ರಲ್ಲಿಯೇ ನೀಡಿದೆ[೩].

ಸಾಕಷ್ಟು ಪರಿಶ್ರಮಪಟ್ಟು ಹಾಗೂ ಹೇರಳವಾಗಿ ಸರ್ಕಾರದ ಹಣ ಖರ್ಚು ಮಾಡಿ ಜಸ್ವಂತ್‌ಸಿಂಗ್ ಆಯೋಗವು ತನ್ನ ವರದಿ ನೀಡಿದಾಗಲೂ ಪ್ರಸ್ತಾವನೆ ಕಾರ್ಯಗತವಾಗಲಿಲ್ಲ. ಕರ್ನಾಟಕದ ಶಾಸನಸಭೆಯಲ್ಲಿ ಈ ಕುರಿತು ಸಾಕಷ್ಟು ಚರ್ಚೆಯಾಗಿ ಒಮ್ಮತದ ನಿರ್ಣಯವಾಗಿದ್ದರೂ ಈ ಪ್ರಸ್ತಾವನೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ೧೯೯೧ ರಲ್ಲಿ ಪೀಠ ಸ್ಥಾಪನೆಯ ಕುರಿತಾಗಿ ಚಳವಳಿಯನ್ನು ಆರಂಭಿಸಲಾಯಿತು. ಧಾರವಾಡ ವಕೀಲರ ಸಂಘವು ಹೈಕೋರ್ಟ್ ಪೀಠ ಸ್ಥಾಪನಾ ಹೋರಾಟ ಕೇಂದ್ರ ಕ್ರಿಯಾ ಸಮಿತಿ ಚಳವಳಿ ಆರಂಭಿಸಿದರು. ಇದಕ್ಕೆ ಜನಸಾಮಾನ್ಯರ ಬೆಂಬಲ ಪಡೆಯಲಾಯಿತು.

ಇದರಲ್ಲಿ ವಕೀಲರು, ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳು ಭಾಗವಹಿಸಿದರು. ಇಲ್ಲಿ ಉಪವಾಸ ಸತ್ಯಾಗ್ರಹವು ೧೩೬ ದಿನಗಳವರೆಗೆ ನಡೆಯಿತು.

ಅಂದಿನ ರಾಜ್ಯ ಸಭೆಯ ಸದಸ್ಯ ಜೆ.ಪಿ.ಜವಳಿ ಅವರು ಹುಬ್ಬಳ್ಳಿ-ಧಾರವಾಡದ ಮಧ್ಯೆ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು ರಾಜ್ಯಸಭೆಯಲ್ಲಿ ೧೯೯೩ರಲ್ಲಿ ಪ್ರಶ್ನೆ ಕೇಳಿದಾಗ ಅಂದಿನ ಕೇಂದ್ರ ಕಾನೂನು ಸಚಿವ ಎಚ್.ಆರ್. ಭಾರದ್ವಾಜ ಇವರು ನೀಡಿದ ಉತ್ತರ ಬಹು ಪರಿಣಾಮಕಾರಿಯಾಗಿದ್ದು, ಈ ಕುರಿತು ಯಾವುದೇ ಅಡಚಣೆ ಇಲ್ಲವೆಂದು ಹಾಗೂ ಹುಬ್ಬಳ್ಳಿ ಧಾರವಾಡದ ಮಧ್ಯೆ ಹೈಕೋರ್ಟ್ ಪೀಠ ಸ್ಥಾಪನೆ ಸೂಕ್ತ ಹಾಗೂ ವಿವಾದರಹಿತ ಎಂದು ಹೇಳಿದ್ದರು[೪]. ಇಷ್ಟಾದರೂ ಪದೇ ಪದೇ ಸಮಸ್ಯೆಯು ಜೀವಂತವಾಗಿ ಉಳಿದಿತ್ತು. ಇದರಿಂದ ಜನರ ಭಾವನೆಗಳನ್ನು ಕೆರಳಿಸಿದಂತಾಗಿತ್ತು. ಮುಖ್ಯಮಂತ್ರಿಗಳು ಶಾಸನಸಭೆ ಹಾಗೂ ನ್ಯಾಯಮೂರ್ತಿ ಜಸ್ವಂತ್‌ಸಿಂಗ್ ಆಯೋಗ ಹಾಗೂ ಕೇಂದ್ರ ಕಾನೂನು ಮಂತ್ರಿಗಳು ಪ್ರಸ್ತಾವನೆ ಪರವಾಗಿ ಧ್ವನಿ ನೀಡಿದಾಗಲೂ ಮಹಾನಗರದಲ್ಲಿ ಪೀಠ ಸ್ಥಾಪನೆಯು ನೆನೆಗುದಿಗೆ ಬಿದ್ದಿತ್ತು.

ಬಂಗಾರಪ್ಪನವರು ರಾಜ್ಯ ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯ ವಿಧಾನಮಂಡಲದ ಎರಡೂ ಸದನಗಳು ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂದು ಸರ್ವಾನುಮತದಿಂದ ಗೊತ್ತುವಳಿಯನ್ನು ಅಂಗೀಕರಿಸಿದರು. ನಂತರ ಮುಖ್ಯಮಂತ್ರಿಗಳು ಗೊತ್ತುವಳಿಯ ಪ್ರತಿಯನ್ನು ಮುಖ್ಯ ನ್ಯಾಯಮೂರ್ತಿಗಳಿಗೆ ಸಲ್ಲಿಸಿ ಈ ಮೊದಲಿನ ನಿಲುವು ಮರು ಪರಿಶೀಲಿಸಬೇಕೆಂದು ಮನವಿ ಮಾಡಿಕೊಂಡರು. ಗೊತ್ತುವಳಿಯ ಪ್ರತಿ ಜೊತೆ ಮುಖ್ಯಮಂತ್ರಿಗಳು ೨೪.೪.೧೯೯೨ ರಂದು ಕೇಂದ್ರ ಕಾನೂನು ಮತ್ತು ನ್ಯಾಯಾಂಗ ಸಚಿವರಿಗೆ ಪತ್ರವನ್ನು ಬರೆದರು. ಪತ್ರಕ್ಕೆ ಉತ್ತರಿಸಿದ ಮುಖ್ಯ ನ್ಯಾಯಮೂರ್ತಿಗಳು ಶಾಶ್ವತ ಪೀಠ ಸ್ಥಾಪನೆಯಾಗಬೇಕಾದ ಸ್ಥಳದ ಬಗ್ಗೆ ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಳ್ಳುವವರೆಗೆ ಶಾಶ್ವತಪೀಠ ಸ್ಥಾಪನೆಯ ಸಾದ್ಯತೆ ಬಗ್ಗೆ ಒಪ್ಪಿಕೊಳ್ಳುವುದು ತಮಗೆ ಮತ್ತು ಪೂರ್ಣ ನ್ಯಾಯಾಲಯಕ್ಕೆ ಸಾಧ್ಯವಾಗದು ಎಂದು ತಿಳಿಸಿದ್ದರು[೫]. ಇದಾದ ನಂತರ ೨೮.೫.೧೯೯೨ ರಂದು ಸಭೆ ಸೇರಿದ ಸಚಿವ ಸಂಪುಟವನ್ನು ಉದ್ದೇಶಿಸಿದ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸಬೇಕೆಂದು ಮುಖ್ಯನ್ಯಾಯಮೂರ್ತಿಗಳು ಮತ್ತು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಮುಂದೆ ಹೈಕೋರ್ಟ್ ಪೀಠ ಸ್ಥಾಪನೆಗೆ ಹುಬ್ಬಳ್ಳಿ-ಧಾರವಾಡ ಸೂಕ್ತವೆಂದು ವಿವರವಾದ ಮಾಹಿತಿಯನ್ನು ಮುಖ್ಯಮಂತ್ರಿಗಳು ೧೮.೯.೯೬ರಂದು ಹೈಕೋರ್ಟ್‌ಗೆ ಸಲ್ಲಿಸಿದರು.

ಮಾಜಿ ಪ್ರಧಾನಿ ಹಾಗೂ ಅಂದಿನ ವಿರೋಧಿ ಧುರೀಣರಾದ ಅಟಲ್ ಬಿಹಾರಿ ವಾಜಪೇಯಿ ಇವರು ೧೯೯೬ರಲ್ಲಿಯೇ ಆಗಿನ ಕೇಂದ್ರ ಕಾನೂನು ಸಚಿವ ರಮಾಕಾಂತ ಇವರಿಗೆ ಪತ್ರ ಬರೆದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಶಿಫಾರಸ್ಸು ವಿವರಿಸಿ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಕರೆ ನೀಡಿದ್ದರು. ವಿರೋಧ ಪಕ್ಷದಲ್ಲಿ ಇದ್ದ ಅಟಲ್ ಬಿಹಾರಿ ವಾಜಿಪೇಯಿ ಇವರು ಅಧಿಕಾರದಲ್ಲಿದ್ದಾಗ ಇವರು ಮನಸ್ಸು ಮಾಡಿದ್ದರು. ಈ ಪ್ರಸ್ತಾವನೆ ಅಂಗೀಕಾರವಾಗಲು ಬಹಳ ಸಮಯ ಬೇಕಾಗುತ್ತಿರಲಿಲ್ಲ. ಕೇವಲ ರಾಜಕೀಯ ಇಚ್ಚಾಶಕ್ತಿಯ ಕೊರತೆ ಎದ್ದು ಕಾಣುತ್ತಿತ್ತು.

೩.೧.೩ ಬಿ.ಡಿ. ಹಿರೇಮಠ ಪ್ರವೇಶ

೧೯೯೬ರಲ್ಲಿ ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ.ಹಿರೇಮಠ ಅವರ ನೇತೃತ್ವದಲ್ಲಿ ಚಳವಳಿಯು ಇನ್ನು ತೀವ್ರಗೊಂಡಿತು. ವಕೀಲರು ಕೋರ್ಟ್ ಕಲಾಪಗಳಿಂದ ಸುಮಾರು ೧೦೦ ದಿನಗಳವರೆಗೆ ದೂರ ಉಳಿದು ಪ್ರತಿಭಟಿಸಿದರು ಮತ್ತು ಜೆ.ಹೆಚ್.ಪಟೇಲ್‌ರ ಸರ್ಕಾರವು ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ-ಧಾರವಾಡದಲ್ಲಿ ಸ್ಥಾಪನೆ ಮಾಡುವಂತೆ ಎರಡು ಬಾರಿ ಕರ್ನಾಟಕದ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆದರು. ೧೯೯೯ರಲ್ಲಿ ಬಿ.ಡಿ. ಹಿರೇಮಠ ಮತ್ತು ಕೆಲವು ಜನ ವಕೀಲರು ಉಪವಾಸ ಸತ್ಯಾಗ್ರಹವನ್ನು ಮಾಡಿದರು. ಈ ಉಪವಾಸವು ೧೯ ದಿನಗಳಿಗೆ ಸರ್ಕಾರದ ಭರವಸೆಯನ್ನು ನೀಡಿದ ನಂತರ ಮುಕ್ತಾಯವಾಯಿತು. ಅಶೋಕ ಭಾನ್ ವರದಿಯ ವಿರುದ್ಧ ವಕೀಲರು ಉಗ್ರ ಸ್ವರೂಪದ ಹೋರಾಟ ನಡೆಸಿದರು. ಪರಿಣಾಮ ಹಿರೇಮಠ ಸೇರಿದಂತೆ ೬೩ ಮಂದಿಯನ್ನು ಪೊಲೀಸರು ಬಂಧಿಸಿ ಧಾರವಾಡದ ಜೈಲಿನಲ್ಲಿ ಇಡದೇ ಬಳ್ಳಾರಿಯ ಜೈಲಿನಲ್ಲಿ ಇಟ್ಟರು. ೯ ದಿನಗಳ ನಂತರ ಅವರನ್ನು ಬಿಡುಗಡೆಗೊಳಿಸಲಾಯಿತು. ಬಿ.ಡಿ. ಹಿರೇಮಠ ಅವರ ಈ ಚಳವಳಿಗೆ ಕೆಲವು ಸಂಘ-ಸಂಸ್ಥೆಗಳು ಸಾಹಿತಿಗಳು, ರೈತರು, ಸಾರ್ವಜನಿಕರು ಮತ್ತು ರಾಜಕೀಯ ಪಕ್ಷಗಳು ಬೆಂಬಲವಾಗಿದ್ದರು ಮತ್ತು ತಮ್ಮದೇ ಆದ ವಿಧಾನದಲ್ಲಿ ಚಳವಳಿಗೆ ಬೆಂಬಲ ನೀಡಿದರು.

ಪೀಠ ಸ್ಥಾಪನೆಗೆ ಜಸ್ವಂತ್ ಸಿಂಗ್ ಆಯೋಗ ನಿಗದಿಪಡಿಸಿದ ಷರತ್ತುಗಳು ಪೂರ್ಣ ಈಡೇರಿವೆ ಎಂದು ಮುಖ್ಯ ನ್ಯಾಯಮೂರ್ತಿಗಳು ಆಗ ಸ್ಪಷ್ಟಪಡಿಸಿದ್ದರು. ರಾಜ್ಯ ಸರ್ಕಾರದ ಮಾಹಿತಿಯನ್ನು ಆಧರಿಸಿ ಬೇಡಿಕೆ ಪರಿಶೀಲಿಸಲು ನ್ಯಾಯಮೂರ್ತಿ ಅಶೋಕ್ ಭಾನ್ ನೇತೃತ್ವದಲ್ಲಿ ಐವರು ನ್ಯಾಯಮೂರ್ತಿಗಳು ಸಮಿತಿಯನ್ನು ಅವರು ರಚಿಸಿದರು. ಆದರೆ ಪ್ರಧಾನ ಪೀಠದಿಂದ ಹೊರಗೆ ಬೇರೊಂದು ಪೀಠ ಸ್ಥಾಪಿಸುವ ಅಗತ್ಯ ಇಲ್ಲ ಮತ್ತು ಇದು ಕಾರ್ಯಸಾಧುವಲ್ಲವೆಂದು ಸಮಿತಿ ಶಿಫಾರಸ್ಸು ಮಾಡಿತು. ರಾಜ್ಯಸರ್ಕಾರಕ್ಕೆ ಈ ಶಿಫಾರಸ್ಸನ್ನು ೯.೬.೨೦೦೦ರಂದು ಸಲ್ಲಿಸಲಾಯಿತು.

೩.೧.೪ ನ್ಯಾಯಮೂರ್ತಿ ಅಶೋಕಭಾನ್ ಸಮಿತಿ

ನ್ಯಾಯಮೂರ್ತಿ ಅಶೋಕಭಾನ್ ನೇತೃತ್ವದ ಐವರು ನ್ಯಾಯಮೂರ್ತಿಗಳು ತಮ್ಮ ವರದಿಯನ್ನು ಸಲ್ಲಿಸಿ ಅದರಲ್ಲಿ ಪ್ರಧಾನ ಪೀಠದಿಂದ ಹೊರಗೆ ಬೇರೊಂದು ಪೀಠ ಸ್ಥಾಪಿಸುವ ಅಗತ್ಯವಿಲ್ಲ ಎಂದು ನೀಡಿದ ವರದಿಗೆ ಕಾರಣಗಳು ಈ ಕೆಳಗಿನಂತಿವೆ.

೧. ಹುಬ್ಬಳ್ಳಿ-ಧಾರವಾಡಕ್ಕೆ ಈ ಪ್ರಾಂತ್ಯದ ಇತರ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದ ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲ.

೨. ಇಲ್ಲಿನ ಕಕ್ಷಿದಾರರಿಗೆ ಹುಬ್ಬಳ್ಳಿಗೆ ತೆರಳುವುದಕ್ಕಿಂತ ಬೆಂಗಳೂರಿಗೆ ಬರಲು ಸೂಕ್ತ ರೈಲು ವ್ಯವಸ್ಥೆ ಇದೆ.

೩. ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಸ್ಥಾಪಿಸಲು ಸೂಕ್ತ ಕಟ್ಟಡಗಳಿಲ್ಲ ಮತ್ತು ಮೂಲಭೂತ ಸೌಕರ್ಯವಿಲ್ಲ.

ಭಾನ್ ಸಮಿತಿ ಸೂಚಿಸಿದ ಸಂಗತಿಗಳು ಇಡೀ ರಾಜ್ಯಾದ್ಯಂತ ಚರ್ಚೆ ಆಯಿತು. ಮೂಲಭೂತ ಸೌಕರ್ಯವಿಲ್ಲದೆ ಪೀಠ ಸ್ಥಾಪಿಸುವುದು ಹೇಗೆ ಎಂಬ ಪ್ರಶ್ನೆ ಮೊದಲು ಕಾಡಿದ್ದು ಚಳವಳಿಕಾರರಿಗೆ. ಅಲ್ಲಿಂದ ಚಳವಳಿ ಸ್ವರೂಪ ದಿನೆ ದಿನೇ ಹೊಸ ತಿರುವು ಪಡೆದುಕೊಂಡಿತು. ಪೀಠ ಸ್ಥಾಪನೆಗೆ

ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡಬೇಕು ಎಂದು ಚಳವಳಿಕಾರರು ಸರ್ಕಾರವನ್ನು ಒತ್ತಾಯಿಸತೊಡಗಿದರು. ಈ ಒತ್ತಾಯಕ್ಕೆ ಸರ್ಕಾರವು ಮಣಿಯಲಿಲ್ಲ. ಕಟ್ಟಡ ನಿರ್ಮಾಣದ ವಿಚಾರದಲ್ಲಿ ಹಣಕಾಸು ಒದಗಿಸುವ ವಿಚಾರದಲ್ಲಿ ಸರ್ಕಾರ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲೂ ಆಗಲಿಲ್ಲ. ಹೀಗಾಗಿ ಚಳವಳಿಕಾರರು ಮತ್ತು ಸರ್ಕಾರದ ಮಧ್ಯೆ ತಿಕ್ಕಾಟ ಹೆಚ್ಚಾಯಿತು. ಚಳವಳಿ ಉಲ್ಬಣವಾದಗಲೆಲ್ಲಾ ಹಿರೇಮಠ ಅವರ ಉಪವಾಸ ಸತ್ಯಾಗ್ರಹವೂ ಧಾರವಾಡದಲ್ಲಿ ತೀವ್ರಗೊಂಡಿತು.

ಸಮಿತಿಯ ಶಿಫಾರಸು ರಾಜ್ಯದ ಜನತೆ ಮತ್ತು ಸರ್ಕಾರಕ್ಕೆ ತೀವ್ರ ನಿರಾಶೆ ಉಂಟುಮಾಡಿತು. ಇದರಿಂದ ಅಕ್ರೋಶಗೊಂಡ ಹುಬ್ಬಳ್ಳಿ, ಧಾರವಾಡದ ವಕೀಲರು ಸುದೀರ್ಘ ಹೋರಾಟ ನಡೆಸಿದರು. ಆಮರಣ ನಿರಶನವನ್ನು ಕೈಗೊಂಡರು. ಇದೆಲ್ಲದರ ಪರಿಣಾಮವಾಗಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನೇತೃತ್ವದಲ್ಲಿ ಸರ್ವಪಕ್ಷ ನಿಯೋಗ ೨೩.೦೬.೨೦೦೦ರಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಭೇಟಿ ಮಾಡಿ ಮತ್ತೊಮ್ಮೆ ಮನವಿ ಪತ್ರ ಸಲ್ಲಿಸಿತು.

ಮನವಿ ಪತ್ರದ ಮುಖ್ಯ ಅಂಶಗಳು ಈ ರೀತಿ ಇದೆ. ಆರೋಗ್ಯಕರ ವಾತಾವರಣ ಕೇಂದ್ರ ಸ್ಥಳವಾಗಿರುವುದು. ಉತ್ತಮ ಸಂಪರ್ಕ ವ್ಯವಸ್ಥೆಯೊಂದಿಗೆ ಶೈಕ್ಷಣಿಕ ಮತ್ತು ವಾಣಿಜ್ಯ ಚಟುವಟಿಕೆಗಳ ಕೇಂದ್ರವಾಗಿರುವ ಹುಬ್ಬಳ್ಳಿ-ಧಾರವಾಡ ಹೈಕೋರ್ಟ್ ಪೀಠ ಸ್ಥಾಪನೆಗೆ ಎಲ್ಲ ರೀತಿಯಿಂದಲೂ ಉತ್ತಮ ಸ್ಥಳವಾಗಿದೆ. ಉದ್ದೇಶಿತ ಪೀಠ ಸ್ಥಾಪನೆಗೆ ಶಾಶ್ವತ ಜಾಗ ನೀಡಲು ರಾಜ್ಯ ಸರ್ಕಾರ ಸಿದ್ಧವಿದೆ. ಉತ್ತರ ಕರ್ನಾಟಕದಲ್ಲಿ ಶಾಶ್ವತ ಪೀಠ ಸ್ಥಾಪಿಸುವುದರಿಂದ ಆ ಪ್ರದೇಶದ ಜನರ ಮನೆ ಬಾಗಿಲಿಗೆ ನ್ಯಾಯ ವ್ಯವಸ್ಥೆಯನ್ನು ಒಯ್ಯುವಂತಾಗುವುದು. ಶಾಶ್ವತ ಪೀಠ ಸ್ಥಾಪನೆಯಾಗುವವರೆಗೆ ಬೆಳಗಾವಿ ಕಂದಾಯ ವಿಭಾಗದ ಏಳು ಜಿಲ್ಲೆಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗಾಗಿ ರಾಜ್ಯ ಪುನರ್ ವಿಂಗಡಣಾ ಕಾಯ್ದೆಯ ಸೆಕ್ಷನ್ ೫೧(೩) ಅನ್ವಯ ಹುಬ್ಬಳ್ಳಿ-ಧಾರವಾಡದಲ್ಲಿ ಐವರು ನ್ಯಾಯಮೂರ್ತಿಗಳ ಪೀಠ ಸ್ಥಾಪಿಸುವಂತೆ ರಾಜ್ಯಪಾಲರು ಮತ್ತು ಮುಖ್ಯ ನ್ಯಾಯಮೂರ್ತಿಗಳನ್ನು ಕೋರಲು ರಾಜ್ಯ ಸಚಿವಸಂಪುಟ ನಿರ್ಧರಿಸಿತು[೬].

೨೦೦೨ರಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಾಧೀಶರಾದ ಎನ್.ಕೆ.ಜೈನ್ ಅವರು 'ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆರಂಭಿಸಲು ನನ್ನ ಅಭ್ಯಂತರ ಇಲ್ಲ' ಆದರೆ ಪೀಠ ಸ್ಥಾಪನೆಗೆ ಅಗತ್ಯವಿರುವ ಸೌಕರ್ಯಗಳನ್ನು ಒದಗಿಸಿದರೆ ಪೀಠ ಆರಂಭಿಸುವ ಬಗ್ಗೆ ಪರಿಶೀಲನೆ ಮಾಡುತ್ತೇನೆ? ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದಕ್ಕೆ ರಾಜ್ಯ ಸರ್ಕಾರ, ಜನ ಪ್ರತಿನಿಧಿಗಳು ಸ್ಪಂದಿಸಿದರು. ಇದು ಒಂದು ಒಳ್ಳೆಯ ಚಟುವಟಿಕೆಯಾಗಿತ್ತು.

ತಮಿಳುನಾಡು ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದ ಜೈನ್ ಅವರೇ ಮಧುರೈನಲ್ಲಿ ಹೈಕೋರ್ಟ್ ಪೀಠ ಆರಂಭಿಸಲು ಕಾರಣರಾಗಿದ್ದರು. ಈ ಹಿನ್ನೆಲೆಯಲ್ಲಿ ಅವರ ಅಭಿಪ್ರಾಯಗಳನ್ನು ಅವಳಿನಗರದ ಜನ ಮತ್ತು ವಕೀಲರ ಸಂಘಗಳು ಗಂಭೀರವಾಗಿ ಪರಿಗಣಿಸಿದರು. ನ್ಯಾಯಮೂರ್ತಿಗಳ ಮಾತನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಸೌಲಭ್ಯಗಳನ್ನು ಒದಗಿಸುವ ತುರ್ತುಕ್ರಮ ಕೈಗೊಳ್ಳುತ್ತದೆ ಎಂದು ಜನ ನಿರೀಕ್ಷಿಸಿದ್ದರು. ಆದರೆ ಸರ್ಕಾರದಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಅವಳಿ ನಗರದಲ್ಲಿ ಪೀಠ ಸ್ಥಾಪನೆಯಾಗಬೇಕು ಎನ್ನುವ ಬೇಡಿಕೆ ಹಳೆಯದು. ಇದಕ್ಕಾಗಿ ಹಲವು ಬಾರಿ ಹಲವು ಬಗೆಯ ಚಳವಳಿಗಳು ನಡೆದಿವೆ. ಚಳವಳಿ ನಡೆಯುವ ಮೊದಲು

ಮತ್ತು ನಡೆಯುತ್ತಿದಾರುವಾಗ ಪೀಠ ಆರಂಭಿಸಲು ಅಗತ್ಯವಾದ ಸೌಕರ್ಯಗಳಾದ ಕಟ್ಟಡ, ವಸತಿ ಗೃಹಗಳು ಹುಡುಕುವ ಪ್ರಯತ್ನಗಳನ್ನು ರಾಜ್ಯ ಸರ್ಕಾರ ಒಂದೆರಡು ಬಾರಿ ಮಾಡಿತ್ತು.

ಪೀಠ ಆರಂಭಕ್ಕೆ ಸರ್ಕಾರ ಬದ್ಧವಾಗಿದೆ. ಅದಕ್ಕೆ ಬೇಕಾದ ಎಲ್ಲಾ ಸೌಕರ್ಯ ಒದಗಿಸಿಕೊಡುತ್ತೇವೆ ಎಂದು ಅಂದಿನ ಸರ್ಕಾರಗಳು ಹಲವು ಬಾರಿ ಹೇಳಿವೆ. ಮುಖ್ಯ ನ್ಯಾಯಮೂರ್ತಿ ಅವರು ತಾವಾಗಿಯೇ ಪೀಠ ಆರಂಭಿಸಲು ಅನುಮತಿ ನೀಡುವ ಮಾತುಗಳನ್ನು ಆಡಿದ ನಂತರವೂ ಸರ್ಕಾರ ಸುಮ್ಮತಿಸದಿರುವುದೇಕೆ ಎಂಬುದು ಅರ್ಥವಾಗದ ಸಂಗತಿಯಾಗಿತ್ತು. ಸೌಲಭ್ಯ ಒದಗಿಸಿ ಪೀಠ ಆರಂಭಕ್ಕೆ ಚಾಲನೆ ನೀಡಿ ಎಂದು ಅವಳಿನಗರಗಳ ವಕೀಲರ ಸಂಘಗಳು ಮತ್ತು ವಿರೋಧ ಪಕ್ಷದ ನಾಯಕರು ಸರ್ಕಾರವನ್ನು ಒತ್ತಾಯಿಸಿದರು. ಆದರೂ ಸರ್ಕಾರ ಏನನ್ನು ಮಾಡಲಿಲ್ಲ.

ಹುಬ್ಬಳ್ಳಿಗೆ ಬಂದಿದ್ದ ಕಾನೂನು ಸಚಿವರು ಸ್ಥಳೀಯ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಬೆಂಗಳೂರು ವಕೀಲರ ಪರಿಷತ್ತಿನ ಕೆ.ಎನ್.ಸುಬ್ಬಾರೆಡ್ಡಿ ಅವರು ಸುಪ್ರೀಂಕೋರ್ಟ್ ಸಲ್ಲಿಸಿರುವ ಅರ್ಜಿ ಪೀಠ ಸ್ಥಾಪನೆಗೆ ಅಡ್ಡಿಯಾಗಿದೆ ಎಂದು ಹೇಳಿದ್ದರು[೬]. ಸುಬ್ಬಾರೆಡ್ಡಿಯವರು ಬಿಜೆಪಿಯ ಶಾಸಕರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಆರಂಭವಾಗಬೇಕು ಎನ್ನುವುದು ಅವರ ವಿಚಾರವಾಗಿದ್ದರೆ ಕಾನೂನು ಸಚಿವರ ಮತ್ತು ನ್ಯಾಯಮೂರ್ತಿಯವರ ಹೇಳಿಕೆಗಳಿಗೆ ಅನುಗುಣವಾಗಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಲಾಯಿತು.

ಪೀಠ ಆರಂಭಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಹಲವು ಬಾರಿ ಆರೋಪಿಸಿರುವ ಬಿಜೆಪಿ ನಾಯಕರು ತಮ್ಮ ಪಕ್ಷದ ಸುಬ್ಬಾರೆಡ್ಡಿ ಅವರಿಗೆ ಮನವಿ ಮಾಡಿಕೊಂಡು ಅರ್ಜಿ ಹಿಂದಕ್ಕೆ ಪಡೆಯಲು ಸೂಚಿಸಬೇಕೆಂದು ಹಲವಾರು ಸಂಘಸಂಸ್ಥೆಗಳು ಒತ್ತಾಯಿಸಿದವು.

ಹೈಕೋರ್ಟ್ ಪೀಠಕ್ಕಾಗಿ ಪ್ರತಿವರ್ಷವೂ ಚಳವಳಿ ನಡೆಯುತ್ತಿತ್ತು. ಅದು ಒಂದು ಹಂತದಲ್ಲಿ ತೀವ್ರ ಗೊಳ್ಳುತ್ತಿತ್ತು. ಯಾವುದೋ ಒಂದು ಈಡೇರಿಸಲಾರದ ಭರವಸೆಗೆ ಅಸ್ತು ಎಂದು ಹೇಳಿ ಚಳವಳಿ ಸ್ತಬ್ಧಗೊಳ್ಳುತ್ತಿತ್ತು. ಇದು ಪ್ರತಿ ಸಾರಿ ಸಾಮಾನ್ಯವಾಗಿತ್ತು. ವರ್ಷದಿಂದ ವರ್ಷಕ್ಕೆ ನಿರಂತರವಾಗಿ ನಡೆಯುತ್ತಿರುವ ಈ ಚಳವಳಿಯನ್ನು ಬಡ ಕಕ್ಷಿದಾರನು ಮೂಕನಂತೆ ನೋಡುತ್ತಿದ್ದನು.

ಹುಬ್ಬಳ್ಳಿ–ಧಾರವಾಡದಲ್ಲಿ ಚಳವಳಿ ತೀವ್ರಗೊಳ್ಳುತ್ತಿದ್ದಂತೆ ಇಲ್ಲಿಂದ ದೂರದಲ್ಲಿರುವ ಕಲಬುರ್ಗಿ, ಬಿಜಾಪುರ ಮುಂತಾದೆಡೆ ಸಹ ತಮ್ಮಲ್ಲಿಗೇ ಹೈಕೋರ್ಟ್ ಪೀಠ ಬೇಕು ಎಂದು ಚಳವಳಿ ನಡೆಸುವುದು ಸಹ ಮಾಮೂಲಿನ ವಿಷಯವಾಗಿತ್ತು. ಬೇರೆ ಬೇರೆ ಸ್ಥಳಗಳಿಂದ ಒತ್ತಡ ಬಂದಾಗ ಯಾವುದೋ ಒಂದು ಭರವಸೆ ನೀಡಿ ಚಳವಳಿ ಮೇಲೆ ತಣ್ಣೀರು ಎರಚುವುದು ಕೂಡ ಸಾಮಾನ್ಯವಾಗಿತ್ತು. ನಂತರ ಕರ್ನಾಟಕ ಕಾನೂನು ವಿದ್ಯಾರ್ಥಿಗಳ ಒಕ್ಕೂಟ ೧೧.೦೩.೨೦೦೨ರಂದು ಧಾರವಾಡದಲ್ಲಿ ಕೆ.ಡಿ.ಪಿ.ಸಭೆ ಸಂದರ್ಭದಲ್ಲಿ ಮುತ್ತಿಗೆ ಹಾಕಿ ಹೈಕೋರ್ಟ್ ಪೀಠಕ್ಕಾಗಿ ಹಕ್ಕೊತ್ತಾಯ ಮಂಡಿಸಿತು. ಧಾರವಾಡ ವಕೀಲರು ಸಂಘದ ಅಧ್ಯಕ್ಷರ ಪಾಲ್ಗೊಂಡಿದ್ದ ಮೆರವಣಿಗೆ ಧಾರವಾಡ ಕಡಪಾ ಮೈದಾನದಿಂದ ಹೊರಟು ಕೆ.ಡಿ.ಪಿ.ಸಭೆ ಸ್ಥಳಕ್ಕೆ ಧಾವಿಸಿತು. ನಂತರ ದಿನಾಂಕ ೧೫.೦೩.೨೦೦೨ ರಂದು ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೆ.ಶ್ರೀಧರರಾವ್ ಧಾರವಾಡಕ್ಕೆ ಆಗಮಿಸಿದ್ದರು. ವಕೀಲರ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಹೈಕೋರ್ಟ್ ಪೀಠ ಕುರಿತಂತೆ ಸಹಮತ ವ್ಯಕ್ತಪಡಿಸಿದರು.

೧೭.೦೩.೨೦೦೩ರಂದು ಚಳವಳಿ ಇನ್ನು ಒಂದು ಹೆಜ್ಜೆಯನ್ನು ಮುಂದಿಟ್ಟಿತು. ದೆಹಲಿಗೆ ಹೊರಟಿದ್ದ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲನ್ನು ಧಾರವಾಡದಲ್ಲಿ ತಡೆದು ಪ್ರತಿಭಟಿಸಲಾಯಿತು. ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಸಚಿವ ಎಚ್.ಕೆ.ಪಾಟೀಲ್, ಎ.ಎಂ.ಹಿಂಡಸಗೇರಿ ಅವರಿಗೆ ಘೆರಾವೂ ಹಾಕಿ ಹೈಕೋರ್ಟ್ ಪೀಠಕ್ಕಾಗಿ ಮುಖ್ಯಮಂತ್ರಿಗಳನ್ನು ಒತ್ತಾಯಿಸುವಂತೆ ಇವರ ಮೇಲೆ ಒತ್ತಡ ಹೇರಿದರು. ೧೮.೦೩.೨೦೦೨ ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗ ರಾಜ್ಯದ ಮುಖ್ಯ ನ್ಯಾಯಮೂರ್ತಿ ನರೇಂದ್ರಕುಮಾರ ಜೈನ್ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲೇ ಧಾರವಾಡದಲ್ಲಿ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಲಕ್ಕೆ ಒಂದೆರಡು ಕಡೆ ಕಲ್ಲು ತೂರಾಟ ಮಾಡಲಾಗಿತ್ತು.

ಉತ್ತರ ಕನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯನ್ನು ತಳ್ಳಿಹಾಕಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಕ್ರಮದಿಂದ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ಸ್ಥಾಪಿಸಬೇಕು ಎಂಬ ಕೂಗಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ ಎಂದು ವಿಧಾನ ಪರಿಷತ್ತಿನ ಸದಸ್ಯ ಬಸವರಾಜ ಬೊಮ್ಮಾಯಿ ಹೇಳಿದ್ದರು[೮]. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಆಗುವುದಿಲ್ಲ ಎಂದು ಮುಖ್ಯ ನ್ಯಾಯಮೂರ್ತಿಗಳು ಸರ್ಕಾರಕ್ಕೆ ಪತ್ರ ಬರೆದುದಕ್ಕೆ ಪ್ರತಿಕ್ರಿಯಿಸಿದ ಅವರು ಇದರಿಂದ ಹೋರಾಟ ನಿಲ್ಲುವುದಿಲ್ಲ ಎಂದು ಘೋಷಿಸಿದರು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಅಗತ್ಯವಿದ್ದರೆ ಇದೇ ಸಾಲಿನಲ್ಲಿ ಹೆಚ್ಚುವರಿ ಹಣ ಬಿಡುಗಡೆ ಮಾಡಲು ಸರ್ಕಾರ ಸಿದ್ಧವಿದೆ ಎಂದು ಸಭಾನಾಯಕ ಎಚ್.ಕೆ.ಪಾಟೀಲ್ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು. ಬಸವರಾಜ ಬೊಮ್ಮಾಯಿ ಅವರು 'ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಕನಸು ನನಸಾಗುವ ಬೆಳವಣಿಗೆ ಕಂಡು ಬಂದಿದೆ. ಹಾಗಾಗಿ ಈ ವರ್ಷದ ಆಯವ್ಯಯದಲ್ಲಿ ಪೀಠಕ್ಕೆ ೧೦ ಕೋಟಿ ರೂಪಾಯಿ ಕಾದರಿಸಲಾಗಿದೆ' ಎಂದರು[೯]. ಪೀಠ ಸ್ಥಾಪಿಸುವಂತೆ ಸಚಿವ ಸಂಪುಟದಲ್ಲಿ ಕೈಗೊಂಡ ನಿರ್ಣಯವನ್ನು ಮುಖ್ಯ ನ್ಯಾಯಾಧೀಶರಿಗೆ ಕಳುಹಿಸಿಕೊಡಲಾಗಿದೆ. ಈ ಸಂಬಂಧ ಪ್ರಧಾನಿ ಮಟ್ಟದಲ್ಲೂ ಒತ್ತಡ ತಂದರು. ೧೮.೦೩.೨೦೦೨ರಂದು ಮುಖ್ಯಮಂತ್ರಿ, ಪ್ರತಿಪಕ್ಷ ಮುಖಂಡರು ಹಾಗೂ ಆ ಭಾಗದ ಮುಖಂಡರನ್ನೊಳಗೊಂಡ ನಿಯೋಗ ಮುಖ್ಯ ನ್ಯಾಯಾಧೀಶರನ್ನು ಒತ್ತಾಯಿಸಿದ್ದು, ಈ ವಿಷಯದ ಬಗ್ಗೆ ನಿರ್ಲಕ್ಷ್ಯ ಮಾಡದೇ ನಿಗಾ ವಹಿಸಬೇಕು ಎಂದು ಒತ್ತಾಯಿಸಿದ ಬೊಮ್ಮಾಯಿ ಈ ಹಿಂದೆ ಐದು ಮಂದಿ ನ್ಯಾಯಾಧೀಶರ ಸಮಿತಿ ಪೀಠ ಸ್ಥಾಪನೆ ಕುರಿತು ನೀಡಿರುವ ನಕಾರಾತ್ಮಕ ವರದಿಯನ್ನು ಪುನರ್ ಪರಿಶೀಲಿಸುವಂತೆ ಮುಖ್ಯ ನ್ಯಾಯಾಧೀಶರನ್ನು ಆಗ್ರಹಿಸಬೇಕು ಎಂದು ಮನವಿ ಮಾಡಿದರು[೧೦].

೩.೧.೫ ಜೆ.ಸಿ.ಭರೂಕ ನೇತೃತ್ವದ ಸಮಿತಿ

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಬೇಡಿಕೆ ಪರಿಶೀಲಿಸಲು ಹೈಕೋರ್ಟ್‌ನ ನ್ಯಾಯಮೂರ್ತಿ ಜೆ.ಸಿ.ಭರೂಕ ಅವರ ನೇತೃತ್ವದಲ್ಲಿ ಹಿರಿಯ ನ್ಯಾಯ ಮೂರ್ತಿಗಳನ್ನು ಒಳಗೊಂಡ ಸಮಿತಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ರಚಿಸಿದ್ದರು. ನಂತರ ಮುಖ್ಯಮಂತ್ರಿ ಎಸ್.ಎಂ ಕೃಷ್ಣ ನೇತೃತ್ವದಲ್ಲಿ ವಿರೋಧ ಪಕ್ಷಗಳ ಮುಖಂಡರ ನೇತೃತ್ವದ ನಿಯೋಗ ಮುಖ್ಯ ನ್ಯಾಯಮೂರ್ತಿಗಳನ್ನು ಭೇಟಿ ಮಾಡಿ ಹೈಕೋರ್ಟ್ ಪೀಠ ಸ್ಥಾಪಿಸುವ ವಿಚಾರ ಪುನರ್ ಪರಿಶೀಲಿಸಬೇಕು ಎಂದು ಮನವಿ ಸಲ್ಲಿಸಿದ್ದರು. ಪ್ರತಿಯಾಗಿ ನ್ಯಾಯಮೂರ್ತಿಗಳು ಪರಿಶೀಲನಾ ಸಮಿತಿ ರಚಿಸುವ ಭರವಸೆ ನೀಡಿದ್ದರು.

ಸಮಿತಿಯಲ್ಲಿ ಜೆ.ಸಿ.ಭರೂಕ ನೇತೃತ್ವದ ಏಳುಮಂದಿ ನ್ಯಾಯಮೂರ್ತಿಗಳಾದ ಎಚ್.ಬಿ.ರವೀಂದ್ರನ್, ವೈ.ವಿಶ್ವನಾಥಶೆಟ್ಟಿ, ಎ.ಎಂ.ಫಾರೂಕ್, ಹೆಚ್.ರಂಗವಿಠಲಚಾರ್, ಎನ್ ಆರ್.ಬನ್ನೂರಮಠ ಇದ್ದರು. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಹಿನ್ನೆಲೆಯಲ್ಲಿ ಆ ಭಾಗದ ಜನರಿಂದ ಮನವಿಗಳನ್ನು ಸ್ವೀಕರಿಸಲು ನ್ಯಾಯಮೂರ್ತಿ ಜೆ.ಸಿ.ಭರೂಕ ನೇತೃತ್ವ ಏಳು ಮಂದಿ ನ್ಯಾಯಮೂರ್ತಿಗಳನ್ನೊಳಗೊಂಡ ಸಮಿತಿ ತೀರ್ಮಾನಿಸಿತು. ಸಮಿತಿ ಉತ್ತರ ಕರ್ನಾಟಕದ ಜನರು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಿ ಪೀಠ ಸ್ಥಾಪನೆ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ನಿರ್ಧರಿಸಿತು. ಸಮಿತಿ ರಚನೆಯಾದ ನಂತರ ಭರೂಕ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿತ್ತು. ಹೈಕೋರ್ಟ್ ರಿಜಿಸ್ಟಾರ್ ಜನರಲ್ ಅವರೂ ಈ ವಿಷಯದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತೆ ಸಮಿತಿ ಅಧ್ಯಕ್ಷರು ಆದೇಶಿಸಿದ್ದರು. ಪೀಠ ಸ್ಥಾಪಿಸಲು ಮುಂಗಡ ಪತ್ರದಲ್ಲಿ ೧೦ ಕೋಟಿ ರೂ.ಗಳನ್ನು ಕಾದಿರಿಸಲಾಗಿತ್ತು. ಸರ್ಕಾರದ ಮೇಲೆ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರನ್ನು ಖುದ್ದು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಮಾತುಕತೆ ನಡೆದ ನಂತರ ಏಳು ಮಂದಿ ನ್ಯಾಯಮೂರ್ತಿಗಳ ಸಮಿತಿಯನ್ನು ರಚಿಸಲಾಗಿತ್ತು. ಹಿಂದೆ ನ್ಯಾಯಮೂರ್ತಿ ಅಶೋಕ್ ಭಾನ್ ಅವರ ನೇತೃತ್ವದಲ್ಲಿ ರಚನೆಯಾಗಿದ್ದ ಐವರು ನ್ಯಾಯಮೂರ್ತಿಗಳ ಸಮಿತಿ ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಿ ಪೀಠ ಸ್ಥಾಪಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿ ರಾಜ್ಯ ಸರ್ಕಾರಕ್ಕೆ ವರದಿ ನೀಡಿತ್ತು[೧೧]. ಈ ಸಮಿತಿಯು ಉತ್ತರ ಕರ್ನಾಟಕದ ವಕೀಲರ ಸಂಘದ ಪದಾಧಿಕಾರಿಗಳಲ್ಲದೆ ಹಲವಾರು ಸಂಘಟನೆಗಳ ಮುಖ್ಯಸ್ಥರಿಂದ ಅಭಿಪ್ರಾಯಗಳನ್ನು ಪಡೆದಿತ್ತು.

ಹುಬ್ಬಳ್ಳಿಯಲ್ಲಿ ನ್ಯಾಯಪೀಠ ಸ್ಥಾಪನೆಗೆ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ತಿರಸ್ಕರಿಸಿದ್ದರು ಅದೇ ರೀತಿ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಸ್ಥಾಪನೆಯಾಗಬೇಕಿದ್ದ ಅಲಹಾಬಾದ್ ಹೈಕೋರ್ಟ್ ಪೀಠ ಸ್ಥಾಪನೆಯೂ ಅಸಾಧ್ಯ ಎಂದಿದ್ದರು. ಈ ಎರಡೂ ರಾಜ್ಯ ಸರ್ಕಾರಗಳ ಪ್ರಸ್ತಾವನೆಯನ್ನು ಎರಡೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ತಿರಸ್ಕರಿಸಿದ್ದರು[೧೨]. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಶೀಘ್ರ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕೆಂದು ವಿಧಾನ ಮಂಡಲದ ವಿಷಯ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

ಐತಿಹಾಸಿಕ ಹಾಗೂ ಭೌಗೋಳಿಕ ಕಾರಣಗಳಿಗಾಗಿ ಹಿಂದುಳಿದಿರುವ ಉತ್ತರ ಕರ್ನಾಟಕ ಪ್ರದೇಶದ ಅಭಿವೃದ್ಧಿಯ ಅಂಗವಾಗಿ ಹುಬ್ಬಳ್ಳಿಯಲ್ಲಿ ಹೈಕೋರ್ಟ್‌ನ ನ್ಯಾಯಪೀಠ ಹಾಗೂ ಕಲ್ಬುರ್ಗಿಯಲ್ಲಿ ಸಂಚಾರಿ ನ್ಯಾಯಪೀಠ ಸ್ಥಾಪನೆಯ ಜೊತೆಗೆ ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸುವ ಅಗತ್ಯವನ್ನು ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರದ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ಉನ್ನತಾಧಿಕಾರದ ಸಮಿತಿಯ ಪರವಾಗಿ ಡಾ.ಡಿ.ಎಂ.ನಂಜುಡಪ್ಪ ಅವರು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಅಂತಿಮ ಕರಡು ವರದಿಯನ್ನು ಸಲ್ಲಿಸಿತು. ಸಭೆಯಲ್ಲಿ ಉಪಸ್ಥಿತರಿದ್ದ ಸಚಿವರಾದ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ಕಾಗೋಡು ತಿಮ್ಮಪ್ಪ, ಹೆಚ್.ಸಿ.ಶ್ರೀಕಂಠಯ್ಯ, ವಿಶ್ವನಾಥ್, ಕೃಷ್ಣಪ್ಪ , ಡಿ.ಬಿ.ಇನಾಂದಾರ್, ಡಾ. ಮಾಲಕರೆಡ್ಡಿ, ಹೆಚ್.ಕೆ.ಪಾಟೀಲ್, ಟಿ.ಬಿ.ಜಯಚಂದ್ರ, ಆರ್.ಬಿ.ತಿಮ್ಮಾಪೂರ್, ಭೀಮನಕಟ್ಟಿ ಮತ್ತು ರಾಣಿ ಸತೀಶ್ ಅವರು ಸಮಿತಿಯ ಸಲಹೆಗಳ ಕುರಿತು ತಮ್ಮ ಅಭಿಪ್ರಾಯ ಸೂಚಿಸಿದರು[೧೩].

ಮುಖ್ಯಮಂತ್ರಿಗಳು ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಅಗತ್ಯ ಸಲಹೆಗಳನ್ನು ನೀಡಲು ನೇಮಕಗೊಂಡಿದ್ದ ಡಾ.ಡಿ.ಎಂ.ನಂಜುಂಡಪ್ಪ ನೇತೃತ್ವದ ಉನ್ನತಾಧಿಕಾರಿ ಸಮಿತಿಯು ಅಲ್ಪಾವಧಿಯಲ್ಲಿ ಮಹತ್ತರ ಕಾರ್ಯ ನೆರವೇರಿಸಿತ್ತು. ಈ ಸಮಿತಿಯು ವಿವರವಾದ ಅಂಕಿ, ಅಂಶಗಳ ಆಧಾರದ ಮೇಲೆ ಮಾಡಲಾಗಿರುವ ಶಿಫಾರಸುಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವುದು ಎಂದು ಹೇಳಿದ್ದರು[೧೪].

ನ್ಯಾಯಮೂರ್ತಿ ಜೆ.ಸಿ.ಭರೂಕ ನೇತೃತ್ವದಲ್ಲಿ ಸಮಿತಿ ಹೈದ್ರಾಬಾದ್ ಕರ್ನಾಟಕದ ಕೇಂದ್ರ ಸ್ಥಳ ಎಂದು ಪರಿಗಣಿಸಲ್ಪಟ್ಟ ಕಲ್ಬುರ್ಗಿಯಲ್ಲಿ ೭.೦೯.೨೦೦೨ರಂದು ಅಭಿಪ್ರಾಯ ಸಂಗ್ರಹಿಸುವ ಕೆಲಸವನ್ನು ಆರಂಭಿಸಿತು. ನ್ಯಾಮಮೂರ್ತಿಗಳಾದ ಆರ್.ರವೀಂದ್ರನ್, ಚಂದ್ರಶೇಖರಯ್ಯ, ಎ.ಎಂ.ಫಾರೂಕ್, ವಿಶ್ವನಾಥ ಶೆಟ್ಟಿ, ರಂಗವಿಠಲಾಚಾರ್, ಬನ್ನೂರಮಠ ಅವರನ್ನು ಒಳಗೊಂಡ ಸಮಿತಿ ಕಲ್ಬುರ್ಗಿಯ ವಿವಿಧ ಸಂಘ–ಸಂಸ್ಥೆಗಳಿಂದ ಅಹವಾಲು ಆಲಿಸಿತು[೧೫].

ಕಲ್ಬುರ್ಗಿ ಸಂಘ–ಸಂಸ್ಥೆಗಳು ಗುಲ್ಬರ್ಗದಲ್ಲಿ ಪೀಠ ಸ್ಥಾಪಸಬೇಕೆಂದು ಒತ್ತಾಯಿಸಿದರೆ ರಾಯಚೂರಿನ ಸಂಘ–ಸಂಸ್ಥೆಗಳು ರಾಯಚೂರಿನಲ್ಲಿ ಪೀಠ ಸ್ಥಾಪಿಸಬೇಕೆಂದು ಆಗ್ರಹಿಸಿದವು. ಸ್ಥಾಪಿಸಲು ಸಾಧ್ಯವಾಗದಿದ್ದರೆ ಗುಲ್ಬರ್ಗಾದಲ್ಲಿ ಪೀಠ ಸ್ಥಾಪಿಸುವುದಕ್ಕೆ ರಾಯಚೂರಿನ ಸಂಘಸಂಸ್ಥೆಗಳು ಬೆಂಬಲಿಸಿದವು.

ಹುಬ್ಬಳ್ಳಿ – ಧಾರವಾಡದಲ್ಲಿ ಪೀಠ ಸ್ಥಾಪಿಸುವುದಾದರೆ ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳನ್ನು ಈ ಪೀಠದ ವ್ಯಾಪ್ತಿಗೆ ಸೇರಿಸಬಾರದೆಂದು ಮನವಿ ಸಹ ಮಾಡಿಕೊಳ್ಳಲಾಯಿತು. ಈ ಭಾಗ ಮೊದಲು ಹೈದ್ರಾಬಾದ್ ರಾಜ್ಯದಲ್ಲಿತ್ತು. ಇಲ್ಲಿನ ಜನರು ಹೈಕೋರ್ಟ್‌ಗೆ ಹೋಗಬೇಕಾದರೆ ಕೇವಲ ೨೫೦ಕಿ.ಮೀ ಸಂಚರಿಸಬೇಕಾಗಿತ್ತು. ಆದರೆ ಈಗ ಬೀದರ ಜಿಲ್ಲೆ ಕೊನೆ ಗ್ರಾಮದವರು ಹೈಕೋರ್ಟ್‌ಗೆ ಹೋಗಬೇಕಾದರೆ ೮೦೦ ಕಿ.ಮೀ ಸಂಚರಿಸಬೇಕು ಎಂದು ಸಮಿತಿಯ ಗಮನಕ್ಕೆ ತರಲಾಯಿತು.

ಉತ್ತರ ಕರ್ನಾಟಕ ಹೈಕೋರ್ಟ್ ಪೀಠ ಬೇಡಿಕೆ ಪರಿಶೀಲನೆಗೆ ಪ್ರಾದೇಶಿಕ ಅಸಮತೋಲನ ನಿವಾರಣೆ ಸಮಿತಿ ಅಧ್ಯಕ್ಷ ಡಾ.ಡಿ.ಎಂ.ನಂಜುಂಡಪ್ಪ ವರದಿಯನ್ನು ನ್ಯಾಯಮೂರ್ತಿ ಜೆ.ಸಿ.ಭರೂಕ್ ಸಮಿತಿ ಪ್ರಮುಖವಾಗಿ ಪರಿಗಣಿಸಿತು. ನಂಜುಂಡಪ್ಪ ಅವರಿಂದ ವರದಿಯನ್ನು ಸ್ವೀಕರಿಸಿದ ಸಮಿತಿಯು ಪೀಠ ಸ್ಥಾಪನೆ ಅಗತ್ಯ ಬಗ್ಗೆ ವರದಿ ಶಿಫಾರಸುಗಳನ್ನು ಅಧ್ಯಯನ ಮಾಡಿ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ನೀಡಬೇಕೆಂದು ಶಿಫಾರಸು ಮಾಡಿದ್ದರು. ಹುಬ್ಬಳ್ಳಿ–ಧಾರವಾಡದಲ್ಲಿ ಹೈಕೋರ್ಟ್ ಪೀಠ ಹಾಗೂ ಅಗತ್ಯ ಎನಿಸಿದರೆ ಗುಲ್ಬರ್ಗಾ ಮತ್ತು ಬಳ್ಳಾರಿಗೆ ಎರಡು ಸರ್ಕ್ಯೂಟ್ ಬೆಂಚ್‌ಗಳನ್ನು ನೀಡಬೇಕು ಎಂದು ಅವರು ವರದಿಯಲ್ಲಿ ವಿವರಿಸಿದ್ದರು[೧೬].

ನ್ಯಾಯಮೂರ್ತಿ ಅಶೋಕ್ ಭಾನ್ ನೇತೃತ್ವದ ಸಮಿತಿ ಉತ್ತರ ಕರ್ನಾಟಕಕ್ಕೆ ಪೀಠ ಅಗತ್ಯ ಇಲ್ಲ ಎಂದು ವರದಿ ನೀಡಿದ ಬಳಿಕ ನಂಜುಂಡಪ್ಪ ವರದಿ ನೀಡಿದ್ದರು. ಇವರು ಹೈಕೋರ್ಟ್ ಪೀಠ ಸ್ಥಾಪನೆ ವಿಷಯವನ್ನು ಕೇವಲ ಅಂಕಿ ಅಂಶಗಳ ಆಧಾರದ ಮೇಲೆ ಪರಿಗಣಿಸಬಾರದು. ಪ್ರಾದೇಶಿಕ ಅಸಮತೋಲನ ನಿವಾರಣೆಯಾಗಬೇಕಾದರೆ ಪೀಠ ಸ್ಥಾಪನೆ ಅಗತ್ಯ ಇದೆ ಎಂದು ಇವರು ಪ್ರತಿಪಾದಿಸಿದ್ದರು. ಹಳೆ ಮೈಸೂರು ಹಾಗೂ ಉತ್ತರ ಕರ್ನಾಟಕದ ನಡುವೆ ಭಾವನಾತ್ಮಕ ಸಂಬಂಧ ಬೆಳೆಯಬೇಕಾದರೆ ಪೀಠ ಸ್ಥಾಪನೆ ಅಗತ್ಯ. ಸುಮಾರು ೨.೫ ಕೋಟಿ ಜನಸಂಖ್ಯೆ ಇರುವ ಈ ಪ್ರದೇಶಕ್ಕೆ ನ್ಯಾಯ ಸಲ್ಲಬೇಕು ಎಂದು ಅವರು ಸರ್ಕಾರಕ್ಕೆ ತಿಳಿಸಿದ್ದರು. ಹೈಕೋರ್ಟ್ ಪೀಠ ಸ್ಥಾಪನೆಯು ಉತ್ತರ

ಕರ್ನಾಟಕದ ಪರೋಕ್ಷ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಜನರಿಗೆ ಮಾರ್ಗದರ್ಶನ ದೊರೆಯುವುದರ ಜೊತೆಗೆ ಶಿಕ್ಷಣವು ಲಭಿಸುತ್ತದೆ ಎಂದು ಅವರು ವಿವರಿಸಿದ್ದರು[೧೭].

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಕುರಿತು ರಚಿಸಲಾದ ಸಮಿತಿಯು ಜನವರಿ ೧೫, ೨೦೦೩ರ ಒಳಗಾಗಿ ತನ್ನ ಪರಿಪೂರ್ಣ ವರದಿ ಸಲ್ಲಿಸದಿದ್ದರೆ ಉಗ್ರ ಹೊರಾಟ ನಡೆಸಲು ಧಾರವಾಡ ವಕೀಲರ ಸಂಘವು ನಿರ್ಧರಿಸಿತು. ನಗರದಲ್ಲಿ ಜರುಗಿದ ಸಂಘದ ತುರ್ತು ಸಭೆಯಲ್ಲಿ ಈ ಕುರಿತು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಯಿತು. ಮುಖ್ಯಮಂತ್ರಿ ಕೃಷ್ಣ ಅವರು ಅನಗತ್ಯ ವಿಳಂಬ ಮಾಡದೇ ಹೈಕೋರ್ಟ್ ಪೀಠ ಸ್ಥಾಪನೆ ಕುರಿತು ಶೀಘ್ರ ವರದಿ ಸಲ್ಲಿಸುವಂತೆ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಮೇಲೆ ಒತ್ತಡ ಹೇರಬೇಕು ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ವಕೀಲರ ಪರಿಷತ್ತಿನ ಉಪಾಧ್ಯಕ್ಷ ಬಿ.ಡಿ.ಹಿರೇಮಠ ಆಗ್ರಹಿಸಿದರು.

ಕಕ್ಷಿದಾರರ ಒಳಿತಿಗಾಗಿ ಶೀಘ್ರಗತಿಯಲ್ಲಿ ನ್ಯಾಯದಾನ ಅವಶ್ಯವಿದೆ. ಕಡಿಮೆ ವೆಚ್ಚದಲ್ಲಿ ನ್ಯಾಯದಾನ ಒದಗಿಸಲು ಕಾನೂನಿನ ಅನೇಕ ತಿದ್ದುಪಡಿ ಮಾಡಬೇಕು. ಪೀಠ ಸ್ಥಾಪನೆಯಾದಾಗ ಇದಕ್ಕೆ ಹೆಚ್ಚಿನ ಅರ್ಥ ಬರುತ್ತದೆ. ಅಧಿಕಾರ ವಿಕೇಂದ್ರೀಕರಣ ಹಾಗೂ ಬಡವನ ಮನೆಯ ಬಾಗಿಲಿಗೆ ನ್ಯಾಯದಾನ ಸಿಗಬೇಕೆಂಬ ತತ್ವ ಅಳವಡಿಸಬೇಕಾಗಿದೆ. ಪೀಠ ಸ್ಥಾಪನೆಯಿಂದ ಆ ಸಿದ್ಧಾಂತ ಎತ್ತಿ ಹಿಡಿದಂತಾಗುತ್ತದೆ ಎಂದು ಬಿ.ಡಿ ಹಿರೇಮಠ ಹೇಳಿದ್ದರು[೧೮]. ಸರ್ಕಾರವು ಪೀಠ ಸ್ಥಾಪನೆಗೆ ಬಜೆಟ್‌ನಲ್ಲಿ ಹತ್ತು ಕೋಟಿ ರೂಪಾಯಿ ನಿಗದಿಪಡಿಸಿದ್ದನ್ನು ಬಿಟ್ಟರೆ ಯಾವುದೇ ಕ್ರಮ ಜರುಗಿಸಿಲ್ಲ. ಸಾರ್ವಜನಿಕರಿಂದ ಮನವಿ ಸ್ವೀಕರಿಸಲು ಹೈಕೋರ್ಟ್ ಪೀಠ ಸ್ಥಾಪನಾ ಸಮಿತಿಯು ಜೂನ್ ೧೦ ಕೊನೆಯ ದಿನವನ್ನು ನಿಗದಿ ಪಡಿಸಿತ್ತು. ಆದರೆ ಈ ಸಮಿತಿಯು ಸೆಪ್ಟಂಬರ್‌ರಂದು ಗುಲ್ಬರ್ಗಾ ಬಿಟ್ಟರೆ ಇನ್ನಿತರ ಸ್ಥಳಗಳಿಗೆ ಭೇಟಿ ನೀಡಲಿಲ್ಲ. ಆದ್ದರಿಂದ ಪೀಠ ಸ್ಥಾಪನೆಗೆ ನಿರಂತರ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ನ್ಯಾಯವಾದಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ನ್ಯಾಯವಾದಿಗಳಾದ ವಿ.ಎಚ್. ಲಕ್ಷ್ಮೇಶ್ವರ, ಆರ್.ಜಿ ನಾಯ್ಡು, ಜೆ.ಆರ್.ತೊಗ್ಗಿ, ಎಸ್.ಐ.ಬಾವಿಕಟ್ಟಿ ಸುದರ್ಶನರಾಜ, ಎನ್.ಎಂ.ಕರ್ನೂಲಕರ, ರವಿ ಕುಲಕರ್ಣಿ, ಶ್ರೀಕಾಂತ ಪಾಟೀಲ, ಡಿ.ಬಿ.ಕಲ್ಲನಗೌಡ ಮೊದಲಾದವರು ಸಭೆಯಲ್ಲಿ ಪಾಲ್ಗೊಂಡಿದ್ದರು[೧೯]. ಇದಾದ ನಂತರ ನ್ಯಾಯಮೂರ್ತಿಗಳ ಸಮಿತಿಯು ಮಾರ್ಚ್ ೧೫ ರಂದು ಬಿಜಾಪುರ ಹಾಗೂ ಮಾರ್ಚ್ ೧೬ರಂದು ಬಳ್ಳಾರಿಗೆ ಭೇಟಿ ನೀಡಲು ನಿರ್ಧರಿಸಿತು.

೩.೨. ಎರಡನೇ ಹಂತ

೨೪.೦೧.೨೦೦೩ರಂದು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಪರಿಶೀಲನೆಗಾಗಿ ಧಾರವಾಡಕ್ಕೆ ಬಂದಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳ ಸಮಿತಿಗೆ ಅಂದಿನ ರಾಜ್ಯ ಜಲಸಂಪನ್ಮೂಲ ಸಚಿವ ಹೆಚ್.ಕೆ.ಪಾಟೀಲ್ ಅವರು ನ್ಯಾಯಮೂರ್ತಿ ಜೆ.ಸಿ.ಭರೂಕ ನೇತೃತ್ವದ ಸಮಿತಿಯನ್ನು ಕೋರಿದರು. ಹೈಕೋರ್ಟ್ ಪೀಠ ಸ್ಥಾಪನೆಯ ಬಗ್ಗೆ ಅಹವಾಲು ಸ್ವೀಕರಿಸಲು ಧಾರವಾಡಕ್ಕೆ ಆಗಮಿಸಿದ್ದ ಏಳು ಜನ ನ್ಯಾಯಮೂರ್ತಿಗಳಿಗೆ ಅವರು ಮನವಿ ಸಲ್ಲಿಸಿದರು. ಇವರು ನ್ಯಾಯಾಂಗದ ವಿಕೇಂದ್ರೀಕರಣ ಮಾಡುವುದರಿಂದ ಬಡಕಕ್ಷಿದಾರರಿಗೆ ತ್ವರಿತವಾಗಿ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ. ಇದರಿಂದ ನ್ಯಾಯಾಂಗದ ಗುಣಮಟ್ಟ ಕೂಡ ಹೆಚ್ಚಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಭೌಗೋಳಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅವಳಿ ನಗರವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದೆ.

ಹೈಕೋರ್ಟ್ ಪೀಠ ಸ್ಥಾಪನೆಯಿಂದ ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಕಕ್ಷಿದಾರರಿಗೆ ಅನುಕೂಲವಾಗಲಿದೆ. ಪೀಠ ಸ್ಥಾಪನೆಗಾಗಿ ೧೦ ಕೋಟಿ ರೂಪಾಯಿ ಮೀಸಲಿರಿಸಿದ್ದು ಸರ್ಕಾರವು ಹೆಚ್ಚುವರಿ ಸೌಲಭ್ಯ ಒದಗಿಸಲು ಸಿದ್ಧವಿದೆ ಎಂದು ಹೆಚ್.ಕೆ.ಪಾಟೀಲ್ ತಮ್ಮ ಮನವಿಯಲ್ಲಿ ಅವರು ತಿಳಿಸಿದರು.[೧೯]

ಹುಬ್ಬಳ್ಳಿ-ಧಾರವಾಡದಲ್ಲಿ ಪೀಠ ಸ್ಥಾಪಿಸುವುದರಿಂದ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ ಜನತೆಯ ಮನೆ ಬಾಗಿಲಿಗೆ ನ್ಯಾಯ ಒದಗಿಸಿದಂತಾಗುತ್ತದೆ ಎಂದು ಸಮಿತಿ ಎದರು ಅಹವಾಲು ಸಲ್ಲಿಸಿದ ಅಸಂಖ್ಯಾತ ನಾಗರಿಕರು, ಸಂಘ-ಸಂಸ್ಥೆಗಳು, ರಾಜಕೀಯ ಪಕ್ಷಗಳು, ಜನಪ್ರತಿನಿಧಿಗಳು ಜನಪರ ವೇದಿಕೆಗಳ ಪ್ರತಿನಿಧಿಗಳು ಜೆ.ಸಿ.ಭರೂಕ ನೇತೃತ್ವದ ನ್ಯಾಯಮೂರ್ತಿಗಳ ಸಮಿತಿಗೆ ಮನವಿ ಸಲ್ಲಿಸಿದ್ದರು. ಉತ್ತರ ಕರ್ನಾಟಕ ಜನತೆಗಾಗಿ ಹೈಕೋರ್ಟ್ ಪೀಠ ಹುಬ್ಬಳ್ಳಿ-ಧಾರವಾಡಕ್ಕೆ ಏಕೆ ಬೇಕು ಎಂಬ ಮುಖ್ಯ ಅಂಶವನ್ನು ಬಹುತೇಕ ಜನತೆ, ಜನಪ್ರತಿನಿಧಿಗಳು ಪ್ರತಿಪಾದಿಸಿ ಶ್ರೀಸಾಮಾನ್ಯನ ಪಾಲಿಗೆ ನ್ಯಾಯ ಮನೆ ಬಾಗಿಲಿಗೇ ಸಿಗುವಂತಾಗಲು ಹೈಕೋರ್ಟ್ ಪೀಠ ಇಂದಿನ ತುರ್ತು ಅಗತ್ಯವಾಗಿದೆ ಎಂದರು[೨೦]. ನಂತರ ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ರಾಜ್ಯ ಸರ್ಕಾರದಿಂದ ಪೂರ್ಣ ಪ್ರಸ್ತಾವ ಕೇಂದ್ರಕ್ಕೆ ಬಂದಿಲ್ಲ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಜೊತೆ ಸಮಾಲೋಚನೆಯ ನಂತರ ಇಂತಹ ಪೂರ್ಣ ಪ್ರಸ್ತಾವ ರೂಪುಗೊಳ್ಳುತ್ತದೆ. ಪೂರ್ಣ ಪ್ರಸ್ತಾವ ಇಲ್ಲದಿರುವಾಗ ಈ ಸಂಬಂಧದಲ್ಲಿ ಯಾವುದೇ ಕ್ರಮ ಕೈಗೊಳ್ಳುವುದು ಸಾಧ್ಯವಿಲ್ಲ ಎಂದು ಅಂದಿನ ಕೇಂದ್ರ ಕಾನೂನು ಸಚಿವ ಅರುಣ್ ಜೇಟ್ಲಿ ಲೋಕಸಭೆಯಲ್ಲಿ ವಿವರಿಸಿದರು[೨೧].

ನ್ಯಾಯಮೂರ್ತಿ ಜೆ.ಸಿ ಭರೂಕ ನೇತೃತ್ವದಲ್ಲಿ ೭ ಜನ ನ್ಯಾಯಮೂರ್ತಿಗಳ ಸಮಿತಿಯು ಬಿಜಾಪುರಕ್ಕೆ ಬಂದಾಗ ಹಿಂದಿನ ಕೇಂದ್ರ ಜವಳಿ ಖಾತೆ ರಾಜ್ಯ ಸಚಿವ ಬಸವನಗೌಡ ಪಾಟೀಲ ಯತ್ನಾಳ ಅವರು ಬಿಜಾಪುರಕ್ಕೆ ಹೈಕೋರ್ಟ್ ಪೀಠ ಮಂಜೂರು ಮಾಡಿದರೆ ಮೂಲಭೂತ ಸೌಲಭ್ಯ ಒದಗಿಸಲು ಪ್ರತಿ ವರ್ಷ ಸದಸ್ಯರ ನಿಧಿಯಿಂದ ೫೦ ಲಕ್ಷ ರೂಪಾಯಿ ನೆರವು ನೀಡುವುದಾಗಿ ಹೇಳಿದರು. ಅವರು ನ್ಯಾಯಮೂರ್ತಿಗಳು ಭೇಟಿ ಇತ್ತ ಬಿಜಾಪುರದ ಕಂದಗಲ್ ಹನುಮಂತ ರಾಯ ರಂಗಮಂದಿರದಲ್ಲಿ ಬಸವನಗೌಡ ಪಾಟೀಲ ಯತ್ನಾಳ ಅವರು ಮನವಿ ಸಲ್ಲಿಸಿದ್ದರು.

ಇವರು ಹಿಂದುಳಿದ ಬಿಜಾಪುರ ಜಿಲ್ಲೆಯಲ್ಲಿ ಹೈಕೋರ್ಟ್ ಪೀಠದ ಅವಶ್ಯಕತೆ ಹೆಚ್ಚಿದೆ. ಬಡ ಕಕ್ಷಿದಾರರು ಸಮಯ ಹಾಗೂ ಹಣದ ಅಪವ್ಯಯ ತಪ್ಪಿಸಿದಂತಾಗುತ್ತದೆ ಎಂದರು. ಬಿಜಾಪುರ ಗದಗ ರೈಲ್ವೇ ಮಾರ್ಗ ಪರಿವರ್ತನೆ ಕಾಮಾಗಾರಿ ಹಾಗೂ ವಿಮಾನ ನಿಲ್ದಾಣ ಕಾಮಗಾರಿ ಪೂರ್ಣಗೊಂಡರೆ ಬಿಜಾಪುರ ನಗರ ಜಗತ್ತಿನ ನಕಾಶೆಯಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ. ಆದ್ದರಿಂದ ನ್ಯಾಯಮೂರ್ತಿಗಳು ಈ ಬಗ್ಗೆ ತೀವ್ರ ಗಮನ ಹರಿಸಿ ಹೈಕೋರ್ಟ್ ಪೀಠ ಬಿಜಾಪುರದಲ್ಲಿಯೇ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು[೨೦]. ನಂತರ ಸಚಿವರು, ಶಾಸಕರು, ವಾಣಿಜ್ಯೋದ್ಯಮ ಸಂಸ್ಥೆ ಪದಾಧಿಕಾರಿಗಳು, ವಿವಿಧ ರಾಜಕೀಯ ಪಕ್ಷಗಳು, ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಸಂಘಟನೆಗಳ ಪದಾಧಿಕಾರಿಗಳು ಮನವಿ ಪತ್ರಗಳನ್ನು ಸಲ್ಲಿಸಿ ಬಿಜಾಪುರ ಜಿಲ್ಲೆ ಹೇಗೆ ಸೂಕ್ತ ಎಂಬುದನ್ನು ಅಂಕಿ ಅಂಶಗಳೊಂದಿಗೆ ವಿವರಿಸಿದರು. ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎನ್.ಪಾಟೀಲ ಸಾಸನೂರು ಅವರು 'ಜಿಲ್ಲೆಯಲ್ಲಿ ಏಷ್ಯಾದಲ್ಲಿಯೇ ದೊಡ್ಡದಾದ ಅಣೆಕಟ್ಟೆಯನ್ನು

ಕೃಷ್ಣಾನದಿಗೆ ನಿರ್ಮಿಸಲಾಗಿದೆ. ಸುತ್ತಮುತ್ತಲಿನ ನಾಲ್ಕು ಜಿಲ್ಲೆಗಳ ಭೂಮಿಗೆ ನೀರಾವರಿ ಕಲ್ಪಿಸಿದೆ. ಜಲವಿದ್ಯುತ್ ಯೋಜನೆ ಕೂಡ ಪ್ರಾರಂಭವಾಗಲಿದ್ದು ಶೈಕ್ಷಣಿಕವಾಗಿ ವೈದ್ಯಕೀಯ, ತಾಂತ್ರಿಕ ಆಯುರ್ವೇದ ಕಾಲೇಜುಗಳನ್ನು ಹೊಂದಿದೆ. ಜೊತೆಗೆ ಇತರ ಹಲವು ಕಾಲೇಜುಗಳಿವೆ. ಬಿಜಾಪುರಕ್ಕೆ ಉತ್ತಮ ಸಾರಿಗೆ ಸೌಕರ್ಯವಿದ್ದು ರಾಷ್ಟ್ರೀಯ ಹೆದ್ದಾರಿ ೧೩ ಮತ್ತು ರಾಷ್ಟ್ರೀಯ ಹೆದ್ದಾರಿ ೨೧೮ ಬಿಜಾಪುರದ ಮೂಲಕ ಹೋಗಿವೆ. ಹುಟಗಿ ಗದಗ ರೈಲ್ವೆ ಮಾರ್ಗದ ಪರಿವರ್ತನೆ ಯೋಜನೆ ನಡೆಯುತ್ತಿದ್ದು. ರಾಜ್ಯ ಮತ್ತು ರಾಷ್ಟ್ರದ ವಿವಿಧ ಭಾಗಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಆದ್ದರಿಂದ ಎಲ್ಲಾ ರೀತಿಯಿಂದ ಸೌಕರ್ಯವಿರುವ ಬಿಜಾಪುರದಲ್ಲಿ ಹೈಕೋರ್ಟ್ ಆಗಬೇಕು' ಎಂದು ಮನವಿ ಮಾಡಿದರು.

ಉತ್ತರ ಕರ್ನಾಟಕದ ಯಾವ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾದರೆ ಸೂಕ್ತ ಎಂಬ ಬಗ್ಗೆ ಜನರ ಅಭಿಪ್ರಾಯಗಳನ್ನು ಕ್ರೋಡೀಕರಿಸಲು ನೇಮಿಸಿರುವ ಸಮಿತಿ ೧೬.೦೩.೨೦೦೩ ರಂದು ಬಳ್ಳಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆ ಕಳೆದ ಹಲವು ದಶಕಗಳಿಂದ ಯಾವ ರೀತಿ ಅನಾಥವಾಗಿದೆ ಎಂಬ ಬಗ್ಗೆ ಬೆಳಕು ಚೆಲ್ಲಿ ಬಳ್ಳಾರಿಯೂ ಹೈಕೋರ್ಟ್ ಪೀಠದ ಸ್ಥಾಪನೆಗೆ ಸೂಕ್ತ ಎಂಬ ವಾದ ಮಂಡಿಸಿದರು. 'ಬಳ್ಳಾರಿಯನ್ನು ಇತ್ತ ಹೈದರಾಬಾದ್ ಕರ್ನಾಟಕ ಭಾಗದವರೂ ಸ್ವೀಕರಿಸುವುದಿಲ್ಲ. ಅತ್ತ ಹುಬ್ಬಳ್ಳಿ–ಧಾರವಾಡ ಮತ್ತಿತರ ಪ್ರದೇಶಗಳೂ ಸ್ವೀಕರಿಸುವುದಿಲ್ಲ. ಇನ್ನು ದಕ್ಷಿಣ ಕರ್ನಾಟಕದವರಿಗಂತೂ ಬಳ್ಳಾರಿ ಬೇಡವೇ ಬೇಡ. ಒಂದರ್ಥದಲ್ಲಿ ಬಳ್ಳಾರಿ ಯಾರಿಗೂ ಬೇಡವಾದ ಕೂಸಾಗಿ ಪರಿಣಮಿಸಿದೆ' ಎಂದು ಕೆಲ ಸದಸ್ಯರು ವಾದಿಸಿದರು[೨೨]. ಕೆಲ ವರ್ಷಗಳ ಹಿಂದೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆ ಸಂದರ್ಭದಲ್ಲಿ ಬಳ್ಳಾರಿಯನ್ನು ಹೊರಗಿರಿಸಿ, ಮಂಡಳಿ ರಚನೆಗೆ ಸರ್ಕಾರ ಮುಂದಾಗಿತ್ತು. ಆಗ ಕಲ್ಬುರ್ಗಿ ವಿಭಾಗದಲ್ಲೇ ಇದ್ದ ಬಳ್ಳಾರಿ ಹಿಂದುಳಿದ ಜಿಲ್ಲೆಯಾಗಿದ್ದರೂ ಇದನ್ನು ಕೈಬಿಡುವ ಸರ್ಕಾರದ ಯೋಜನೆಯನ್ನು ಪ್ರತಿಭಟಿಸಿ ಚಳವಳಿಯನ್ನೇ ನಡೆಸಬೇಕಾಯಿತು.

ನಂತರ ನೈರುತ್ಯ ರೈಲ್ವೆ ವಲಯ ರಚನೆ ಸಂದರ್ಭದಲ್ಲಿ ಬಳ್ಳಾರಿ ತೋರಣಗಲ್ ಮತ್ತಿತರ ಪ್ರದೇಶಗಳನ್ನು ಹುಬ್ಬಳ್ಳಿಯಿಂದ ಗುಂತಕಲ್ ವಿಭಾಗಕ್ಕೆ ಸೇರಿಸಿ ಲಾಭದಾಯಕ ಪ್ರದೇಶಗಳನ್ನು ತನ್ನ ತೆಕ್ಕೆಯೊಳಗೆ ಹಾಕಿಕೊಳ್ಳಲು ಆಂಧ್ರಪ್ರದೇಶ ಯತ್ನಿಸಿತ್ತು. ಇದರ ವಿರುದ್ಧ ಕೂಡ ಇಲ್ಲಿನ ಜನರು ಧ್ವನಿ ಎತ್ತಿ ಹೋರಾಟ ನಡೆಸಿ ಈ ಭಾಗ ಮತ್ತೆ ಹುಬ್ಬಳ್ಳಿಯ ನೈರುತ್ಯ ವಲಯಕ್ಕೆ ಸೇರುವಂತೆ ಮಾಡುವಲ್ಲಿ ಯಶಸ್ವಿಯಾದರು. ಈ ಎಲ್ಲಾ ಅಂಶಗಳು ಹೈಕೋರ್ಟ್ ಪೀಠದ ಅಭಿಪ್ರಾಯ ಸಂಗ್ರಹ ಕಾಲಕ್ಕೆ ಸಮಿತಿಯ ಗಮನಕ್ಕೆ ತರಲಾಯಿತು ಅಲ್ಲದೇ ಡಾ. ಡಿ.ಎಂ.ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನ ಅಧ್ಯಯನ ಸಮಿತಿ ಕೂಡ ಯಾವ ಪ್ರದೇಶಗಳಲ್ಲಿ ಸೌಲಭ್ಯಗಳ ಕೊರತೆ ಇದೆಯೋ ಅಂಥ ಕಡೆ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಅವುಗಳನ್ನು ಮುಂದುವರಿದ ಜಿಲ್ಲೆಗಳ ಪ್ರಗತಿಯ ಪ್ರಮಾಣಕ್ಕೆ ಸರಿಸಮಾನವಾಗಿ ನಿಲ್ಲುವಂತೆ ಕ್ರಮ ಕೈಗೊಳ್ಳಬೇಕು ಎಂದು ಪ್ರಸ್ತಾಪಿಸಿರುವುದನ್ನು ಉಲ್ಲೇಖಿಸಿ ಬಳ್ಳಾರಿಗೆ ಹೈಹೋರ್ಟ್ ಪೀಠ ಸ್ಥಾಪನೆಯಾದಲ್ಲಿ ಕೆಲಮಟ್ಟಿಗೆ ಈ ಅಸಮತೋಲನ ನಿವಾರಣೆ ಆದೀತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಕಲ್ಬುರ್ಗಿ ವಿಭಾಗಿಯ ಕೇಂದ್ರವಾದ ನಂತರ ಇಲ್ಲಿದ್ದ ಅನೇಕ ವಿಭಾಗೀಯ ಕಛೇರಿಗಳನ್ನು ಅಲ್ಲಿಗೆ ಸ್ಥಳಾಂತರಿಸಲಾಯಿತು. ಆದರೆ ವಿಭಾಗೀಯ ಕೇಂದ್ರವಾದ ಕಲ್ಬುರ್ಗಿಗೆ ಉತ್ತಮ ರಸ್ತೆ, ನೀರ

ರೈಲಿನ ಸಂಪರ್ಕ ಇಲ್ಲದಿರುವುದರಿಂದ ಅಲ್ಲಿಗೆ ಹೋಗುವುದೇ ಕಷ್ಟಕರ ವಿಷಯ. ಹಾಗಾಗಿ ಕನಿಷ್ಠ ಪಕ್ಷ ಹೈಕೋರ್ಟ್ ಪೀಠವನ್ನಾದರೂ ಬಳ್ಳಾರಿಯಲ್ಲಿ ಸ್ಥಾಪಿಸಬೇಕೆಂದು ಹಲವರು ಮನವಿ ಮಾಡಿದರು. ಇದಲ್ಲದೇ ನೂರು ವರ್ಷಕ್ಕೂ ಹಳೆಯದಾದ "ಬಳ್ಳಾರಿ ಬಾರ್ ಅಸೋಸಿಯೇಷನ್ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಎರಡು ಬಾರಿ ವೈಟ್ ಗ್ಲೋವ್ಸ್ (ಕ್ರಿಮಿನಲ್ ಮೊಕದ್ದಮೆಗಳೇ ಇಲ್ಲದ ವರ್ಷ) ಎಂಬ ಪ್ರಶಸ್ತಿ ಪಡೆದಿದೆ ಅಲ್ಲದೇ ಉತ್ತಮ ನ್ಯಾಯಾಲಯ ಆವರಣ ಕಾನೂನು ಕ್ಷೇತ್ರಕ್ಕೆ ಬೇಕಾದ ಗ್ರಂಥಾಲಯ ವ್ಯವಸ್ಥೆಗಳು ಇಲ್ಲದೆ ಜೊತೆಗೆ ಬೆಂಗಳೂರನ್ನು ಹೊರತುಪಡಿಸಿದರೆ ಅತಿ ದೊಡ್ಡದಾದ ಜೈಲು ಕೂಡ ಇಲ್ಲಿದೆ ಎಂದು ಸಮಿತಿಯ ಗಮನಕ್ಕೆ ತರಲಾಯಿತು.

ಹಿಂದಿನ ಸಂಸದ ಕೋಳೂರು ಬಸವನಗೌಡ ಅವರು 'ಮದ್ರಾಸು ಸಂಸ್ಥಾನವಿದ್ದಾಗಲೂ ಬಳ್ಳಾರಿ ಜಿಲ್ಲಾ ಕೇಂದ್ರವಾಗಿತ್ತು. ನಾಲ್ಕು ಜಿಲ್ಲೆಗಳನ್ನು ಒಳಗೊಂಡಿತ್ತು. ಇಲ್ಲಿ ಮೂಲಭೂತ ಸೌಕರ್ಯಗಳಿಗೆ ಕೊರತೆ ಇಲ್ಲ. ಒಂದು ವೇಳೆ ಕೊರತೆ ಕಂಡುಬಂದಲ್ಲಿ ಎಲ್ಲ ಅವಶ್ಯಕತೆಗಳನ್ನು ಪೂರೈಸುವುದಾಗಿ ಭರವಸೆ ನೀಡಿದ್ದರು'. ಹಿರಿಯ ನ್ಯಾಯವಾದಿ ಅರವಿಂದ ಬೆನ್ನೂರ ಅವರು ಇಲ್ಲಿ ೮ ಮಿಲಿಯನ್ ಟನ್ ಕಬ್ಬಿಣದ ಅದಿರು ಹೆಕ್ಕಿ ತೆಗೆಯಲಾಗುತ್ತದೆ. ಲಕ್ಷಗಟ್ಟಲೇ ಹೆಕ್ಟೇರ್ ಭೂಮಿ ನೀರಾವರಿ ಇದೆ. ಹುಬ್ಬಳ್ಳಿ-ಧಾರವಾಡದಲ್ಲಿ ಮತ್ತು ಗುಲಬರ್ಗಾದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವುದರಿಂದ ಓಡಾಡಲು ಅನನುಕೂಲವಾಗುತ್ತದೆ. ಒಂದು ವೇಳೆ ಪೀಠ ಗುಲಬರ್ಗಾ ಅಥವಾ ಹುಬ್ಬಳ್ಳಿಯಲ್ಲಿ ಸ್ಥಾಪಿಸುವುದಾದಲ್ಲಿ ನಾವು ವಿರೋಧಿಸುತ್ತೇವೆ ಎಂದರು[೨೩].

ಪತ್ರಕರ್ತರ ಪರವಾಗಿ ಶ್ಯಾಮಸುಂದರ್ ಅವರು ಮನವಿ ಸಲ್ಲಿಸಿ ಜಿಲ್ಲೆಯಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳಿವೆ. ಇಲ್ಲಿ ಕನ್ನಡ, ತೆಲುಗು ಮತ್ತು ಇತರೆ ಭಾಷೆಗಳಿಗೆ ಮಾನ್ಯತೆ ನೀಡಲಾಗುತ್ತದೆ ಅಲ್ಲದೆ ಹೈಕೋರ್ಟ್‌ಗೆ ಮಹಿಳಾ ನ್ಯಾಯಾಧೀಶೆ ಮಂಜುಳಾ ಚೆಲ್ಲೂರು ಅವರನ್ನು ನೀಡಿದ ಶ್ರೇಯಸ್ಸು ಬಳ್ಳಾರಿಗೆ ಸಲ್ಲಬೇಕು ಎಂಬ ಅಂಶಗಳನ್ನು ಸಮಿತಿಯ ಗಮನಕ್ಕೆ ತಂದರು[೨೪]. ನ್ಯಾಯವಾದಿ ಮಹೇಂದ್ರನಾಥ, ಮಾಜಿ ಪುರಸಭೆ ಅಧ್ಯಕ್ಷೆ ಪದ್ಮಾವತಿ, ಅಂದಿನ ಜಿಲ್ಲಾ ಬಿಜೆಪಿ ಅಧ್ಯಕ್ಷ ಕರುಣಾಕರ ರೆಡ್ಡಿ ಮತ್ತು ನವಭಾರತ ಮಕ್ಕಳ ವೇದಿಕೆಯ ಕಮಲ, ಸಂಡೂರು ಬಾರ್ ಅಸೋಸಿಯೇಷನ್ ಹಾಗೂ ಹೊಸಪೇಟೆ ಬಾರ್ ಅಸೋಷಿಯೇಷನ್ ಪರವಾಗಿ ಎ.ಕೆ.ಭಟ್ ಬಳ್ಳಾರಿಯಲ್ಲೇ ಹೈಕೋರ್ಟ್ ಪೀಠ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಅದಕ್ಕೆ ಕಾರಣಗಳನ್ನು ಸಮಿತಿಗೆ ಮನವರಿಕೆ ಮಾಡಿಕೊಟ್ಟರು. 'ಬಳ್ಳಾರಿಯಲ್ಲಿ ಭರೂಕ ಸಮಿತಿಯು ಪ್ರವಾಸ ಕೈಗೊಂಡು ಜನತೆಯ ಅಹವಾಲು ಸಂಗ್ರಹಿಸಲು ಬಂದಾಗ ವಕೀಲರನ್ನು ಬಿಟ್ಟರೆ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಅಲ್ಪ ಪ್ರಮಾಣದಲ್ಲಿದ್ದರು. ಇಲ್ಲಿನ ಪರಿಸ್ಥಿತಿ ಮತ್ತು ಜನತೆಯ ಮನೋಭಾವವನ್ನು ಅರಿತು ಸಮಿತಿಯ ಕೆಲ ಸದಸ್ಯರು ಬಳ್ಳಾರಿಯನ್ನು ಹೊರತುಪಡಿಸಿ ಬೇರೆ ಯಾವ ಜಿಲ್ಲೆಯಲ್ಲಿ ನೀವು ಪೀಠ ಸ್ಥಾಪಿಸಲು ಬಯಸುತ್ತೀರಿ ಎಂದಾಗ ಎಲ್ಲರೂ ಹುಬ್ಬಳ್ಳಿ ಮತ್ತು ಧಾರವಾಡದ ಕಡೆ ಬೆಟ್ಟು ಮಾಡಿದರೇ ವಿನಾಃ ಬಳ್ಳಾರಿಯಲ್ಲೇ ಮಾಡಿ, ಹಿಂದಿನಿಂದಲೂ ನಮಗಾಗುತ್ತಿರುವ ಅನ್ಯಾಯಕ್ಕೆ ಪೀಠ ಸ್ಥಾಪಿಸಿ ನ್ಯಾಯ ಒದಗಿಸಿ' ಎಂದು ಕೇಳುವ ಮನಸ್ಸು ಮಾಡಲಿಲ್ಲ[೨೫].. ಬಿಜಾಪುರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಅಲ್ಲಿಯ ರಾಜಕಾರಣಿಗಳು ಪ್ರತಿ ವರ್ಷ ೫೦ ಲಕ್ಷ ನೀಡಿದರೆ, ಬಳ್ಳಾರಿ ಒಂದು ಕೋಟಿ ರೂ. ವಂತಿಗೆ ಸಂಗ್ರಹಿಸುವುದಾಗಿ ಹಿರಿಯ ನ್ಯಾಯವಾದಿ ಎನ್.ತಿಪ್ಪಣ್ಣ ಅವರು ಹೇಳಿದರು.

ನ್ಯಾಯಮೂರ್ತಿ ಭರೂಕ ನೇತೃತ್ವದ ೭ ಜನ ನ್ಯಾಯಮೂರ್ತಿಗಳ ಸಮಿತಿಯು ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗ, ಬಿಜಾಪುರ ಹಾಗೂ ಬಳ್ಳಾರಿಗಳಲ್ಲಿ ಬೈಠಕ್‌ಗಳನ್ನು ನಡೆಸಿ ವಿವಿಧ ವ್ಯಕ್ತಿ ಹಾಗೂ ಸಂಘಟನೆಗಳಿಂದ ಸುಮಾರು ೨೦೦೦ ಮನವಿ ಸ್ವೀಕರಿಸಿತು. ಈ ಸಮಿತಿಯು ಬೆಳಗಾವಿ ಹಾಗೂ ಸಮೀಪದ ಜಿಲ್ಲೆಗಳಲ್ಲಿ ಮನವಿ ಸ್ವೀಕರಿಸಿದ ನಂತರ ಮೇ ತಿಂಗಳು ೨೦೦೩ ಅಂತ್ಯದೊಳಗೆ ವರದಿ ಸಲ್ಲಿಸುವುದಾಗಿ ಹೈಕೋರ್ಟ್‌ನ ರಿಜಿಸ್ಟ್ರಾರ್ ಎ.ವಿ.ಕಬ್ಬಿನ್ ತಿಳಿಸಿದರು. ಈ ಸಮಿತಿಯು ಮುಖ್ಯವಾಗಿ ಗಮನಿಸುವ ಅಂಶಗಳು:

ಹೈಕೋರ್ಟ್‌ನಿಂದ ಹೈಕೋರ್ಟ್ ಪೀಠ ಕೇಳುತ್ತಿರುವ ಸ್ಥಳದ ಅಂತರ

೧. ಆ ಸ್ಥಳಗಳಲ್ಲಿ ಬಾಕಿ ಉಳಿದಿರುವ ಮೊಕದ್ದಮೆಗಳ ಸಂಖ್ಯೆ.

೨. ಆ ಸ್ಥಳಕ್ಕೆ ಪೀಠದ ಅಗತ್ಯತೆ ಹಾಗೂ ಮೂಲಭೂತ ಸೌಲಭ್ಯಗಳ ಲಭ್ಯತೆ ಇವುಗಳನ್ನು ಸಮಿತಿಯು ತನ್ನ ವರದಿ ಸಲ್ಲಿಸುವ ಮುನ್ನ ಗಮನಿಸಲಿದೆ ಎಂದು ಕಬ್ಬಿನ್ ಹೇಳಿದರು.

ನ್ಯಾಯಮೂರ್ತಿ ಭರೂಕ ನೇತೃತ್ವದ ಏಳು ಜನ ನ್ಯಾಯಮೂರ್ತಿಗಳ ಸಮಿತಿ ಬೆಳಗಾವಿಯ ಕುಮಾರಗಂಧರ್ವ ರಂಗಮಂದಿರಕ್ಕೆ ಭೇಟಿ ಇಟ್ಟು ಜನಾಭಿಪ್ರಾಯ ಸಂಗ್ರಹಣೆ ಕಾರ್ಯವನ್ನು ೦೬.೦೩.೨೦೦೩ರಂದು ಆರಂಭಿಸಿದರು. 'ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಬೆಳಗಾವಿಯೇ ಸೂಕ್ತ ಸ್ಥಳವಾಗಿದೆ. ಸಕ್ಕರೆ ನಾಡು ಎಂದು ಹೆಗ್ಗಳಿಕೆ ಹೊತ್ತ ಬೆಳಗಾವಿಯಲ್ಲಿ ೧೮ ಸಕ್ಕರೆ ಕಾರ್ಖಾನೆಗಳಿವೆ. ಬೆಳಗಾವಿಯಲ್ಲಿಯೇ ಹೈಕೋರ್ಟ್ ಪೀಠ ಸ್ಥಾಪನೆಗೆ ಶಿಫಾರಸ್ಸು ಮಾಡಿದರೆ ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದಲೇ ಸಹಾಯವನ್ನು ಪಡೆದು ಪೀಠಕ್ಕೆ ಬೇಕಾಗುವ ಅತ್ಯಾಧುನಿಕ ಕಟ್ಟಡವನ್ನು ನಿರ್ಮಿಸಿ ಕೊಡುತ್ತೇವೆ' ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯ ಪ್ರಭಾಕರ್ ಕೋರೆ ತಿಳಿಸಿದರು[೨೭]. ಈ ಸಮಿತಿಯಲ್ಲಿ ಭಾಗವಹಿಸಲು ಸಚಿವರು, ಶಾಸಕರು, ವಿವಿಧ ಸಂಘಸಂಸ್ಥೆಯ ಪದಾಧಿಕಾರಿಗಳು, ಮಹಿಳಾ ಸಂಘಟನೆಯವರು, ವಕೀಲರು ಮನವಿ ಪತ್ರವನ್ನು ಸಲ್ಲಿಸಿ ಬೆಳಗಾವಿ ಹೇಗೆ ಸೂಕ್ತ ಎಂಬುದರ ಬಗ್ಗೆ ಸಮಗ್ರ ಚಿತ್ರಣ ನೀಡಿದರು. ಜಿಲ್ಲಾ ಉಸ್ತುವಾರಿ ಮತ್ತು ಮಾಜಿ ಕೃಷಿ ಮಂತ್ರಿ ವಿ.ಎನ್.ಕೌಜಲಗಿ ಅವರು 'ಕರ್ನಾಟಕ ಸರಕಾರ ಪೀಠ ಸ್ಥಾಪನೆಗಾಗಿ ಸುಮಾರು ೧೦ಕೋಟಿ ರೂ.ಗಳ ಆರ್ಥಿಕ ಸಹಾಯವನ್ನು ಆಯವ್ಯಯದಲ್ಲಿ ಕಾಯ್ದಿರಿಸಿದೆ' ಎಂದರು. ಹೀಗೆ ಪ್ರತಿಯೊಂದು ಜಿಲ್ಲೆಯು ಹೈಕೋರ್ಟ್ ಪೀಠ ತಮ್ಮ ಜಿಲ್ಲೆಯಲ್ಲಿ ಆಗಬೇಕು ಎಂದು ಮನವಿ ಮಾಡಿಕೊಂಡವು.

ಬೆಳಗಾವಿ ನ್ಯಾಯವಾದಿಗಳ ಸಂಘದ ಪರವಾಗಿ ಮನವಿ ಸಲ್ಲಿಸಿ ಮಾತನಾಡಿದ ಹಿರಿಯ ನ್ಯಾಯವಾದಿ ಮತ್ತು ಮಾಜಿ ಸಂಸದ ಎ.ಕೆ.ಕೊಟ್ರಶೆಟ್ಟಿ ಅವರು ದೇಶದ ವಿವಿಧ ಭಾಗಗಳಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ವಿಚಾರದಲ್ಲಿ ಜಸ್ವಂತ್ ಸಿಂಗ್ ಸಮಿತಿ ಕೆಲವೊಂದು ಮಾನದಂಡಗಳನ್ನು ನಿಗದಿಪಡಿಸಿತ್ತು. ಈ ಸಮಿತಿ ನಿಗದಿಪಡಿಸಿದ್ದ ಬಹುತೇಕ ಮಾನದಂಡಗಳು ಬೆಳಗಾವಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ವಿಚಾರದಲ್ಲಿ ಅನ್ವಯಿಸುತ್ತವೆ ಎಂದರು. ನ್ಯಾಯಮೂರ್ತಿಗಳ ಸಮಿತಿಗೆ ಮಾಜಿ ಸಂಸದ ಅಮರಸಿಂಹ ಪಾಟೀಲ, ಅಂದಿನ ವಿಧಾನ ಪರಿಷತ್ ಸದಸ್ಯ ಪ್ರಭಾಕರ ಕೋರೆ, ನಾಗನೂರು ರುದ್ರಾಕ್ಷಿ ಮಠದ ಸಿದ್ದರಾಮಸ್ವಾಮಿಗಳು, ಶಾಸಕರಾದ ರಮೇಶ ಕುಡಚಿ ಎ.ಬಿ.ಪಾಟೀಲ್, ಎಸ್.ಸಿ.ಮಾಳಗಿ ಶಿಕ್ಷಣ ಸಂಸ್ಥೆಗಳ ಪರವಾಗಿ ಕೆ.ಎಲ್.ಇ. ಸಂಸ್ಥೆಯ ಅಧ್ಯಕ್ಷ ಹಾಗೂ ಮಾಜಿ ಸಚಿವ ಶಿವಾನಂದ

ಕೌಜಲಗಿ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಸುರೇಶ ಅಂಗಡಿ ಮತ್ತು ಮುಂತಾದವರು ಮನವಿ ಸಲ್ಲಿಸಿ ಬೆಳಗಾವಿಯಲ್ಲಿಯೇ ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕು ಎಂದು ಸಮಿತಿಯ ಗಮನಕ್ಕೆ ತರಲಾಯಿತು.

'ಜಸ್ವಂತ್ ಆಯೋಗ' ದ ಪ್ರಕಾರ ಹೈಕೋರ್ಟ್ ಪೀಠ ಸ್ಥಾಪನೆಗೆ ಅಗತ್ಯವಾಗಿರುವ ಎಲ್ಲ ಅಂಶಗಳನ್ನು ಗಮನಿಸಿದರೆ ಭೌಗೋಳಿಕವಾಗಿ ಕೊಪ್ಪಳ ಸೂಕ್ತವಾಗಿದ್ದು ಕೊಪ್ಪಳದಲ್ಲಿಯೇ ಪೀಠ ಸ್ಥಾಪಿಸಿದರೆ ಒಳಿತು ಎಂಬ ಬಗ್ಗೆ ಮುಖ್ಯ ನ್ಯಾಯಾಧೀಶರೊಬ್ಬರು ಹೆಚ್ಚಿನ ಒಲವು ತೋರಿಸಿದರು. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಕೊಪ್ಪಳವೇ ಸೂಕ್ತ ಸ್ಥಳವೆಂದು ಆಗ್ರಹಿಸಲು ಹಾಗೂ ಈ ಕುರಿತು ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಯಿತು.

ಪೀಠ ಸ್ಥಾಪನೆಗೆ ಭೌಗೋಳಿಕ ಹಿನ್ನೆಲೆ ಉತ್ತಮ ಪರಿಸರ ಸವಲತ್ತುಗಳಿರಬೇಕಾದ ಅವಶ್ಯ

ಈ ದೃಷ್ಟಿಯಲ್ಲಿ ಹೈದ್ರಾಬಾದ್ ಕರ್ನಾಟಕ ಮತ್ತು ಮುಂಬೈ–ಕರ್ನಾಟಕ ಪ್ರದೇಶಗಳಿಗೆ ಹೋಲಿಸಿದರೆ ಕೊಪ್ಪಳ ಕೇಂದ್ರ ಬಿಂದುವಾಗಿದೆ. ರಸ್ತೆ, ರೈಲು ಸಾರಿಗೆ ವ್ಯವಸ್ಥೆ ಸಮರ್ಪವಾಗಿದೆ. ನಗರದಲ್ಲಿ ೧೬.೫ ಕೋಟಿ ರೂ. ವೆಚ್ಚದಲ್ಲಿ ಸುಮಾರು ೩೦೮ ಕೊಠಡಿಗಳನ್ನೊಳಗೊಂಡ ಸುಸಜ್ಜಿತ ಜಿಲ್ಲಾ ಸಂಕೀರ್ಣ ನಿರ್ಮಿಸಲಾಗಿದೆ. ಹೈಕೋರ್ಟ್‌ಗೆ ಸೂಕ್ತವಾಗಿದೆ ಎಂಬುದನ್ನು ಸರಕಾರದ ಮತ್ತು ಸಮಿತಿಯ ಗಮನಕ್ಕೆ ತರಲಾಯಿತು. ಹೀಗೆ ಪ್ರತಿಯೊಂದು ಜಿಲ್ಲೆಯಲ್ಲಿ ತಮ್ಮ ಜಿಲ್ಲೆಯಲ್ಲಿ ಹೈಕೋರ್ಟ್ ಪೀಠ ಆಗಬೇಕು ಮತ್ತು ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ಅನುಕೂಲತೆಗಳು ನಮ್ಮ ಜಿಲ್ಲೆಯಲ್ಲಿವೆ ಅದಕ್ಕೆ ಸಂಬಂಧಿಸಿದಂತೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡಲಾಗುತ್ತದೆ ಎಂದು ರಾಜಕಾರಣಿಗಳು, ಜನಪ್ರತಿನಿಧಿಗಳು, ಸಂಘಸಂಸ್ಥೆಗಳು, ನ್ಯಾಯವಾದಿಗಳು, ಸಾರ್ವಜನಿಕರು ಸಮಿತಿಗೆ ತಮ್ಮ ಅಹವಾಲುಗಳನ್ನು ಮಂಡಿಸಿದರು. ಇದು ಒಂದು ರೀತಿಯ ಗೊಂದಲವನ್ನು ಸೃಷ್ಟಿಸಿದಂತಾಗಿತ್ತು[೨೮].

ಭರೂಕ ಸಮಿತಿಯು ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಗುಲ್ಬರ್ಗಾ, ಬಿಜಾಪುರ, ಬಳ್ಳಾರಿ ಮೊದಲಾದ ಸ್ಥಳಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ ನಂತರ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಸ್ಥಾಪನೆ ಬೇಡಿಕೆಗೆ ಸಂಬಂಧಿಸಿದ ವರದಿಯನ್ನು ಜೂನ್ ೨೦೦೩ ಮೂರನೇ ವಾರದಲ್ಲಿ ನೀಡುವ ಸಾಧ್ಯತೆ ಇದೆ ಎಂದು ತಿಳಿದ ನಂತರ ಜನಸಾಮಾನ್ಯರು, ಸಂಘಸಂಸ್ಥೆಗಳು, ನ್ಯಾಯವಾದಿಗಳು, ಜನಪ್ರತಿನಿಧಿಗಳಲ್ಲಿ ಒಂದು ಸಂಚಲನವೇ ನಡೆದಿತ್ತು. ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ವಿಧಾನ ಪರಿಷತ್ತಿನಲ್ಲಿ ಆಗಿನ ಕಾಂಗ್ರೆಸ್ ಪಕ್ಷದ ಜಲಜಾನಾಯ್ಕರ ಪ್ರಶ್ನೆಗೆ ಮುಖ್ಯಮಂತ್ರಿಗಳು ಉತ್ತರಿಸುತ್ತಾ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡುವ ಬಗ್ಗೆ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗಳು ಸಹಾನುಭೂತಿಯ ನಿಲುವು ತಳೆದಿದ್ದಾರೆ ಏನೇ ಆದರೂ ನ್ಯಾಯ ಪೀಠದ ಸ್ಥಾಪನೆ ಅಧಿಕಾರ ಸರಕಾರಕ್ಕಿಲ್ಲ ಅದೇನಿದ್ದೂ ಹೈಕೋರ್ಟ್ ಮೂಲಕವೇ ಆಗಬೇಕು ಎಂದು ಹೇಳಿದರು.

'ಹುಬ್ಬಳ್ಳಿ–ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕು ಎಂದವರು ಡಾ. ಡಿ.ಎಂ.ನಂಜುಡಪ್ಪನವರು. ಇವರು ಹಳೇ ಮೈಸೂರಿನ ಬಹುತೇಕ ಪ್ರಾಂತ್ಯಗಳಿಗೆ ಹೋಲಿಸಿದಾಗ ಉತ್ತರ ಕರ್ನಾಟಕ ತೀರ ಹಿಂದುಳಿದಿದೆ. ಆದ್ದರಿಂದ ಸರ್ಕಾರ ಈ ಪ್ರಾಂತ್ಯದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಹಣ ಕೊಡಬೇಕೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಇವರ ಅಂತಿಮ ವರದಿ

ಹೇಳಿದ್ದು ಅದನ್ನೇ. ಆರಂಭದಲ್ಲಿ ಹಳೇ ಮೈಸೂರಿನ ಕೆಲವರು ನಂಜುಂಡಪ್ಪ ವರದಿಗೆ ಅಪಸ್ವರ ಎತ್ತಿದರೂ ಅವರ ನಿಲುವಿನಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಸರ್ಕಾರಕ್ಕೆ ತಾವು ಸಲ್ಲಿಸಿದ ಅಂತಿಮ ವರದಿಯಲ್ಲಿ ಈ ವಿಚಾರಕ್ಕೆ ಅಂದರೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ವಿಚಾರಕ್ಕೆ ಹೆಚ್ಚು ಒತ್ತನ್ನು ನೀಡಿದ್ದರು. ಆದರೆ ಎಸ್.ಎಂ.ಕೃಷ್ಣ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದೆ ಸುಮ್ಮನಿದ್ದಾಗ ಸರ್ಕಾರದ ನಿಲುವನ್ನು ಬಹಿರಂಗವಾಗಿ ಯಾವುದೇ ಮುಲಾಜಿಲ್ಲದೇ ಕಟುವಾಗಿ ಟೀಕಿಸಲು ಅವರು ಹಿಂಜರಿಯಲಿಲ್ಲ. ಅವರ ದೃಷ್ಟಿಯಲ್ಲಿ ಹಿಂದುಳಿದ ಪ್ರದೇಶಗಳ ಬೆಳವಣಿಗೆಗೆ ಸರ್ಕಾರದ ಗಂಭೀರ ಚಿಂತನೆ ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ ಎಂಬುದಾಗಿತ್ತು.

ಬಿಜಾಪುರ, ಬಾಗಲಕೋಟೆ, ಧಾರವಾಡದ ಸಾಮಾನ್ಯ ಜನರು ಬೆಂಗಳೂರಿಗೆ ನೂರಾರು ರೂಪಾಯಿ ಖರ್ಚು ಮಾಡಿಕೊಂಡು ಬರುತ್ತಾರೆ. ಸರ್ಕಾರಕ್ಕೆ ಪೀಠ ಸ್ಥಾಪಿಸಲು ಉಂಟಾಗಿರುವ ತೊಡಕಾದರೂ ಏನು? ಯಾಕೆ ಈ ಕೆಲಸವನ್ನು ಬೇಗನೇ ಕೈಗೆತ್ತಿಕೊಳ್ಳುತ್ತಿಲ್ಲ? ಇದರಲ್ಲಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ಕೈವಾಡವಿದೆಯೇ ಎಂಬ ಪ್ರಶ್ನೆಗಳನ್ನು ನೇರವಾಗಿ ತೂರಿಬಿಡುವ ಮೂಲಕ ನಂಜುಂಡಪ್ಪನವರು ಸರ್ಕಾರದ ನಿಷ್ಠುರವನ್ನು ಕಟ್ಟಿಕೊಂಡವರು. ಹೈದರಾಬಾದ್ ಮತ್ತು ಮುಂಬೈ ಕರ್ನಾಟಕದಲ್ಲಿ ಎಷ್ಟು ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಶಾಲಾ ಕಟ್ಟಡಗಳು ಇಲ್ಲ? ಆಸ್ಪತ್ರೆಗಳಲ್ಲಿ ಅಂತಹ ಕಡೆ ಸರ್ಕಾರ ತುರ್ತಾಗಿ ಮಾಡಬೇಕಾದ್ದೇನು ಎಂಬುದನ್ನು ಪ್ರಪ್ರಥಮವಾಗಿ ವೈಜ್ಞಾನಿಕ ರೂಪದಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದ ಧೀಮಂತರು ನಂಜುಂಡಪ್ಪ ದುರಂತವೆಂದರೆ ಇಂತಹ ವರದಿಗಳೂ ಕೂಡ ವಿಧಾನ ಸೌಧದಲ್ಲಿ ಹಲವಾರು ದಿನಗಳ ಕಾಲ ಧೂಳು ತಿನ್ನುತ್ತಾ ಕುಳಿತಿತ್ತು[೬೯].

ಅಷ್ಟರಲ್ಲಿ ನ್ಯಾಯಮೂರ್ತಿ ಜಿ.ಸಿ.ಭರೂಕ ನೇತೃತ್ವದ ಸಮಿತಿಯು ಹೈಕೋರ್ಟ್ ಪೀಠ ಸ್ಥಾಪನೆ ಸಂಬಂಧ ಸರಕಾರಕ್ಕೆ ವರದಿ ಸಲ್ಲಿಸಿ ಉಚ್ಚ ನ್ಯಾಯಾಲಯದ ಮೂಲಗಳ ಪ್ರಕಾರ ಹೈಕೋರ್ಟ್ ಪೀಠವನ್ನು ಶಿಕ್ಷಣದ ಕಾಶಿ ಧಾರವಾಡದಲ್ಲೇ ಸ್ಥಾಪಿಸುವ ಕುರಿತು ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ತಿಳಿದ ಅವಳಿ ನಗರದ ಜನತೆಯ ದಶಕಗಳ ಹೋರಾಟಕ್ಕೆ ಸಂದ ಪ್ರತಿಫಲವೆಂದೇ ವ್ಯಾಖ್ಯಾನಿಸಲಾಗಿತ್ತು [೭೦]. ಅವಳಿ ನಗರದ ಜನರಲ್ಲಿ ಹರ್ಷ ಉತ್ಸಾಹ ಮತ್ತಷ್ಟು ಇಮ್ಮಡಿಸಿತು. ನ್ಯಾಯವಾದಿಗಳು ಜನಪ್ರತಿನಿಧಿಗಳು ಸಂಘ ಸಂಸ್ಥೆಗಳು ಪಟಾಕಿ ಸಿಡಿಸಿ ವಿಜಯೋತ್ಸಾಹ ಆಚರಿಸಿದ್ದು ಆಯಿತು. ನ್ಯಾಯಮೂರ್ತಿಗಳು ಪೀಠ ಸ್ಥಾಪನೆಯ ವರದಿಯನ್ನು ಸಲ್ಲಿಸಿರುವುದರಿಂದ ಎಲ್ಲರ ದೃಷ್ಟಿ ರಾಜ್ಯ ಸರ್ಕಾರದ ಕಡೆಗೆ ಇತ್ತು. ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ನ್ಯಾಯಮೂರ್ತಿಗಳ ವರದಿಯನ್ನು ಒಪ್ಪಿಕೊಂಡು ಕೇಂದ್ರ ಸರಕಾರಕ್ಕೆ ಪೀಠ ಸ್ಥಾಪನೆ ಶಿಫಾರಸ್ಸು ಮಾಡಬೇಕು ಎನ್ನುವ ನಿರೀಕ್ಷೆಯಾಗಿತ್ತು.

ಹುಬ್ಬಳ್ಳಿ–ಧಾರವಾಡದಲ್ಲಿ ಶ್ರೇಷ್ಠ ನ್ಯಾಯಲಯ ಪೀಠ ಸ್ಥಾಪಿಸುವಂತೆ ಏಳು ನ್ಯಾಯಮೂರ್ತಿಗಳ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದನ್ನು ಗುಲ್ಬರ್ಗದಲ್ಲಿ ಖಂಡಿಸಲಾಯಿತು. 'ಈ ವರದಿ ಸಂಪೂರ್ಣವಾಗಿ ರಾಜಕೀಯ ಪ್ರೇರಿತವಾಗಿದೆ. ಇದನ್ನು ಹೈದ್ರಾಬಾದ್ ಕರ್ನಾಟಕ ಯುವ ಹೋರಾಟ ಸಮಿತಿ ಒಪ್ಪುವುದಿಲ್ಲ' ಎಂದು ಸಮಿತಿ ಅಧ್ಯಕ್ಷ ಡಾ.ರಾಜು ಕುಳಗೇರಿ ಹೇಳಿದರು. ಅವರು ಬೆಂಗಳೂರು ಗುಲ್ಬರ್ಗದಿಂದ ೫೦೦ ಕಿ.ಮಿ. ದೂರವಿದ್ದು ಅನನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಉತ್ತರ ಕರ್ನಾಟಕದ ಅದರಲ್ಲಿಯೂ ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶದ "ಗುಲ್ಬರ್ಗದಲ್ಲಿ ಸ್ಥಾಪಿಸಬೇಕೆಂದು ಹೋರಾಟ ಮಾಡಿದರೂ ಈ ಭಾಗವನ್ನು ನಿರ್ಲಕ್ಷಿಸಲಾಯಿತು. ಹುಬ್ಬಳ್ಳಿ–ಧಾರವಾಡ

ಗುಲ್ಬರ್ಗದಿಂದ ೩೦೦ ಕಿ.ಮೀ. ಅದೇ ರೀತಿಯಾಗಿ ಬೀದರ ನಿಂದ ೪೫೦ ಕಿ.ಮೀ. ದೂರವಾಗುತ್ತದೆ ಎಂದರು[೩೧].

"ಹೈದ್ರಾಬಾದ್ ಕರ್ನಾಟಕ ಭಾಗ ರಾಜಕೀಯವಾಗಿ ಬಲಿಷ್ಠವಾಗಿದ್ದರೂ ಯಾವುದೇ ಸೌಲಭ್ಯಗಳನ್ನು ಮಾತ್ರ ಈ ಭಾಗಕ್ಕೆ ತಂದುಕೊಡುವಲ್ಲಿ ರಾಜಕಾರಣಿಗಳು ಹಿಂದೆ ಬಂದಿದ್ದಾರೆ" ಎಂದು ಇದರ ವಿರುದ್ಧ ಪ್ರತಿಭಟನೆಗೆ ಮುಂದಾದರು.

"ಹೈದ್ರಾಬಾದ್ ಕರ್ನಾಟಕ ಭಾಗವನ್ನು ಎಲ್ಲಾ ರಾಜಕೀಯ ಪಕ್ಷಗಳು ನಿರ್ಲಕ್ಷಿಸಿವೆ ಶಿಕ್ಷಣ ಆಯುಕ್ತರ ಕಛೇರಿ ಅಭಿವೃದ್ಧಿ ಆಯುಕ್ತರ ಕಾರ್ಯಾಲಯಗಳನ್ನು ತರುವಲ್ಲಿ ವಿಫಲವಾಗಿವೆ. ನೀರಾವರಿ, ಕೈಗಾರಿಕೆ, ಕಬ್ಬು ಬೆಳೆಗಾರರಿಗೆ ಹಿಂದಿನ ಬಾಕಿ ಪಾವತಿಸುವಲ್ಲಿ ವಿಳಂಬ. ಈ ರೀತಿಯಾಗಿ ಎಲ್ಲಾ ಕ್ಷೇತ್ರಗಳಲ್ಲಿ ಈ ಭಾಗವನ್ನು ಕಡೆಗಣಿಸಿದರೆ ಅಭಿವೃದ್ಧಿ ಹೇಗಾಗುತ್ತದೆ" ಎಂದ ಅವರು "ಈಗ ಹೈಕೋರ್ಟ್ ಪೀಠವು ಕೈಕೊಟ್ಟಿತು ಎಂದರು. ಎಲ್ಲಾ ದೃಷ್ಟಿಯಿಂದಲೂ ಹಿಂದುಳಿದಿರುವ ಈ ಭಾಗ ಮುಂದೆ ಬರಬೇಕಾದರೆ ಪ್ರತ್ಯೇಕ ರಾಜ್ಯ ಒಂದೇ ಮಾರ್ಗ" ಎಂದು ಕುಳಗೇರಿ ಹೇಳಿದರು[೩೨].

೩.೨.೧ ನ್ಯಾಯಮೂರ್ತಿ ಎನ್.ಕೆ.ಜೈನ್

ಇವೆಲ್ಲದರ ಮಧ್ಯೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರ ಸದ್ಯದ ಸ್ಥಿತಿಯಲ್ಲಿ ಉತ್ತರ ಕರ್ನಾಟಕವದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯ ಅಗತ್ಯವಿಲ್ಲ ಎಂದು ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದರು. ಈ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಕೋರಿ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆಯಲು ಸಚಿವ ಸಂಪುಟ ತೀರ್ಮಾನಿಸಿತು. ಆಗಿನ ಕಾನೂನು ಸಚಿವ ಡಿ.ಬಿ.ಚಂದ್ರೇಗೌಡ ಅವರು ಈಗಿನ ಸ್ಥಿತಿಯಲ್ಲಿ ಕೇಂದ್ರ ಸ್ಥಾನ ಬೆಂಗಳೂರು ಹೊರಗಡೆ ಹೈಕೋರ್ಟ್ ಪೀಠ ಅಗತ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ ಎಂದು ಮುಖ್ಯ ನ್ಯಾಯಮೂರ್ತಿಗಳು ಪತ್ರದಲ್ಲಿ ತಿಳಿಸಿದ್ದಾರೆ ಎಂದು ಚಂದ್ರೇಗೌಡ ಹೇಳಿದರು[೩೩].

'ಪೀಠ ಸ್ಥಾಪನೆ ಸಂಬಂಧ ಕೃಷ್ಣ ಸರಕಾರದ ಅವಧಿಯಲ್ಲಿ ನೀಡಿದ್ದ ಅಭಿಪ್ರಾಯವನ್ನೇ ಮುಖ್ಯ ನ್ಯಾಯಮೂರ್ತಿಯವರು ಧರ್ಮಸಿಂಗ್ ಸರಕಾರಕ್ಕೆ ಬರೆದಿರುವ ಪತ್ರದಲ್ಲೂ ಅದನ್ನೇ ಬರೆದಿದ್ದಾರೆ. ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್‌ರವರು ಹಿಂದಿನ ಅಭಿಪ್ರಾಯವನ್ನು ಬದಲಿಸುವ ಅಗತ್ಯ ಕಂಡುಬರುತ್ತಿಲ್ಲ. ಆ ಭಾಗದ ಮೊಕದ್ದಮೆಗಳ ಸಂಖ್ಯೆ ಪರಿಶೀಲಿಸಿದರೆ ಪ್ರತ್ಯೇಕ ಪೀಠ ಸ್ಥಾಪಿಸುವ ಅಗತ್ಯ ಕಂಡುಬರುತ್ತಿಲ್ಲ' ಎಂದರು. ಅದೇ ರೀತಿ ಸರ್ಕಿಟ್ ಬೆಂಚ್ ಸ್ಥಾಪನೆಗೆ ದುಬಾರಿ ಹಣ ವೆಚ್ಚವಾಗುತ್ತದೆ ಎಂದು ಅಬಿಪ್ರಾಯಪಡುವ ಮೂಲಕ ಹೈಕೋರ್ಟ್ ಪೀಠದ ಬೇಡಿಕೆಯನ್ನು ತಳ್ಳಿ ಹಾಕಲಾಯಿತು.

ಆಗಿನ ಸಚಿವ ಎಂ.ಪಿ.ಪ್ರಕಾಶ್ ಅವರು ಉತ್ತರ ಕರ್ನಾಟಕದ ಯಾವುದೇ ಸ್ಥಳದಲಿ ಪ್ರತ್ಯೇಕ ಪೀಠ ಅಥವಾ ಸರ್ಕಿಟ್ ಬೆಂಚ್ ಸ್ಥಾಪನೆ ಆಗಬೇಕು ಎಂಬ ನಿಲುವಿನಲ್ಲಿ ಬದಲಾವಣೆ ಇಲ್ಲ ಮುಖ್ಯ ನ್ಯಾಯಮೂರ್ತಿಯವರು ಸರಕಾರದ ನಿಲುವಿಗೆ ವ್ಯತಿರಿಕ್ತ ಅಭಿಪ್ರಾಯ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಪ್ರಧಾನಿ ಹಾಗೂ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಳಿಗೆ ತೆಗೆದುಕೊಂಡು ಹೋಗಲು ತೀರ್ಮಾನಿಸಲಾಗಿದೆ ಎಂದರು.[೩೪] ಸರ್ವ ಪಕ್ಷಗಳ ನಿಯೋಗ ತೆರಳಿ ಪ್ರಧಾನಿ ಮನಮೋಹನ್ ಸಿಂಗ್' ಕೇಂದ್ರ ಕಾನೂನು ಸಚಿವ ಎಚ್.ಆರ್.ಭಾರಧ್ವಾಜ ಹಾಗೂ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯವರಿಗೆ ಪೀಠ ಸ್ಥಾಪನೆಯ ಅವಶ್ಯಕತೆ ಮನವರಿಕೆ ಮಾಡಿ ಕೊಡಲು ನಿರ್ಧರಿಸಲಾಯಿತು.

೩.೨.೨. ಪ್ರೊ.ಡಿ.ಎಂ.ನಂಜುಂಡಪ್ಪ

ಪ್ರೊ.ಡಿ.ಎಂ.ನಂಜುಂಡಪ್ಪ ಅವರು ಹೈಕೋರ್ಟ್ ನ್ಯಾಯಮೂರ್ತಿಗಳ ಅಭಿಪ್ರಾಯವನ್ನು ತೀವ್ರವಾಗಿ ವಿರೋಧಿಸಿದರು ಮತ್ತು ಅವರು ಪೀಠ ಸ್ಥಾಪನೆ ಬೇಡವಾದರೆ ಅದಕ್ಕೆ ಕಾರಣಗಳೇನು ಎಂಬುದನ್ನು ಸರಕಾರ ಬಹಿರಂಗಪಡಿಸಬೇಕು ಎಂದು ಅವರು ಒತ್ತಾಯಿಸಿದರು. ಉತ್ತರ ಕರ್ನಾಟಕದ ಸ್ಥಿತಿಯ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿರುವ ಅವರು ಪೀಠ ಸ್ಥಾಪನೆಯ ಅನಿವಾರ್ಯತೆ ತಿಳಿದಿದ್ದು ಕೇವಲ ಅಂಕಿ-ಅಂಶಗಳನ್ನೇ ಮಾನದಂಡವಾಗಿಟ್ಟುಕೊಂಡು ಪ್ರಸ್ತಾವನೆ ಪುರಸ್ಕರಿಸದಿರುವುದು ಸರಿಯಲ್ಲ ಎಂದರು. ಇತರೆ ರಾಜ್ಯಗಳಲ್ಲಿ ಎರಡು ಅಥವಾ ಮೂರು ಕಡೆ ಪೀಠ ಸ್ಥಾಪಿಸಲು ಅನುಸರಿಸುವ ಮಾನದಂಡವೇನು ಮತ್ತು ಇಲ್ಲಿ ಅನುಸರಿಸಲಾಗುತ್ತಿರುವ ಮಾನದಂಡವೇನು ಎಂಬುದನ್ನು ಈ ಭಾಗದ ಜನರು ತಿಳಿದುಕೊಳ್ಳುವ ಹಕ್ಕು ಹೊಂದಿದ್ದಾರೆ ಎಂದರು. ನ್ಯಾಯಮೂರ್ತಿಗಳು ನೀಡಿರುವ ವರದಿಯನ್ನು ಬಹಿರಂಗಗೊಳಿಸಬೇಕು. ಇಲ್ಲವಾದರೆ ದಶಕಗಳಿಂದ ಅಲ್ಲಿನ ಜನರು ನಡೆಸುತ್ತಿರುವ ಹೋರಾಟ ಮತ್ತೆ ಬುಗಿಲೇಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಅಭಿಪ್ರಾಯಪಟ್ಟರು. ಸರಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು. ಪೀಠ ಸ್ಥಾಪನೆಗೆ ರಾಷ್ಟ್ರಪತಿಗಳು ಕ್ರಮ ಜರುಗಿಸಬೇಕು. ಅದಕ್ಕೆ ಬೇಕಿರುವ ಪೂರಕ ಕೆಲಸವನ್ನು ಸರಕಾರ ಮಾಡಬೇಕು. ಪೀಠ ಸ್ಥಾಪನೆ ಅನಿವಾರ್ಯತೆಯನ್ನು ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಬೇಕು ಎಂದರು[೩೫].

೩.೨.೩. ಡಾ.ಪಾಟೀಲ ಪುಟ್ಟಪ್ಪ

ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಇಲ್ಲ ಎಂದು ಬರದಿರುವ ಪತ್ರಕ್ಕೆ ಪ್ರತಿಕ್ರಿಯಿಸಿದ ಹಿರಿಯ ಪತ್ರಕರ್ತ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ವ್ಯಾವಹಾರಿಕ ಸತ್ಯ ತಿಳಿಯುವ ಮನಸ್ಸು ರಾಜ್ಯ ಸರಕಾರ ಮತ್ತು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ಇದ್ದಿದ್ದರೆ ಉತ್ತರ ಕರ್ನಾಟಕದಲ್ಲಿ ಪೀಠ ಸ್ಥಾಪನೆಗೆ ನಿರಾಕರಿಸುವುದರ ಮೂಲಕ "ರಾಜ್ಯ ಒಡೆಯುವ ಕೂಗಿಗೆ ನ್ಯಾಯಮೂರ್ತಿಗಳೇ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ"ದ ಅವಶ್ಯಕತೆ ಇಲ್ಲ ಎನ್ನುವ ನಿರ್ಧಾರಕ್ಕೆ ಬರುವುದರ ಮೂಲಕ ಹೈಕೋರ್ಟ್‌ನ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ಮತ್ತೊಂದು ಆಂದೋಲನಕ್ಕೆ ದಾರಿ ಮಾಡಿಕೊಟ್ಟಿದ್ದು ಈ ಕುರಿತಾಗಿ ಈಗಾಗಲೇ ನಡೆದಿರುವ ಚಳವಳಿಗೆ ಇನ್ನಷ್ಟು ತುಪ್ಪ ಸುರಿದಂತಾಗಿದೆ ಎಂದರು. ಪೀಠ ಬೇಕಿರುವುದು ಜನರಿಗಾಗಿಯೇ ಹೊರತು ನ್ಯಾಯಾಧೀಶರು ಹಾಗೂ ವಕೀಲರಿಗಾಗಿ ಅಲ್ಲ. ಜನತೆಯ ಮನೆ ಬಾಗಿಲಿಗೆ ನ್ಯಾಯದಾನ ಬರಬೇಕು. ಅದಕ್ಕಾಗಿ ಪೀಠದ ಅವಶ್ಯಕತೆ ಇದೆ. ೨೦ ವರ್ಷಗಳ ಹಿಂದೆ ನ್ಯಾಯಮೂರ್ತಿ ಚಂದ್ರಶೇಖರ ಅವರಿಗೆ ಅವಶ್ಯವಾಗಿ ಕಂಡಿದ್ದು ನ್ಯಾಯಮೂರ್ತಿ ಎನ್.ಕೆ.ಜೈನ್‌ರಿಗೆ ಏಕೆ ಕಾಣುತ್ತಿಲ್ಲ. ಅವಶ್ಯಕತೆ ಇಲ್ಲ ಎಂದು ಹೇಳಲಿಕ್ಕೆ ಇವರಿಗೆ ಇಷ್ಟು ವರ್ಷ ಬೇಕಿತ್ತೆ ಎಂದು ಡಾ. ಪಾಟೀಲ್ ಪುಟ್ಟಪ್ಪನವರು ಆಕ್ರೋಶ ವ್ಯಕ್ತಪಡಿಸಿದರು[೩೫].

೩.೨.೪. ಡಾ. ಚಂದ್ರಶೇಖರ ಪಾಟೀಲ (ಚಂಪಾ)

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಅವಶ್ಯಕತೆ ಇಲ್ಲ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವುದರ ಮೂಲಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಉತ್ತರ ಕರ್ನಾಟಕ ಜನತೆಗೆ ದೊಡ್ಡ ಅನ್ಯಾಯ ಎಸಗಿದ್ದಾರೆ ಎಂದು ಹಿರಿಯ ಸಾಹಿತಿ ಡಾ. ಚಂದ್ರಶೇಖರ ಪಾಟೀಲ

ಅಭಿಪ್ರಾಯಪಟ್ಟರು. ನ್ಯಾಯಾಂಗದ ವಿಕೇಂದ್ರೀಕರಣ ಆಗಬೇಕು ಎನ್ನುವುದಕ್ಕೆ ಹಿಂದಿನಿಂದಲೂ ಹೋರಾಟ ನಡೆದಿದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಬೇಕು ಎಂದು ಕಳೆದ ೩೦ ವರ್ಷಗಳಿಂದ ಇಲ್ಲಿ ಜನಪರ ಹೋರಾಟ ನಡೆದಿದೆ. ಇಷ್ಟೆಲ್ಲ ಗೊತ್ತಿದ್ದು ನ್ಯಾಯಮೂರ್ತಿಗಳು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಅವಶ್ಯವಿಲ್ಲ ಎಂದು ಪತ್ರ ಬರೆದಿರುವುದು ದುರದೃಷ್ಟಕರ ಎಂದರು[೩೭].

೩.೨.೫ ಸಂಸದ ಪ್ರಹ್ಲಾದ್ ಜ್ಯೋಶಿ

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ವಿಷಯವಾಗಿ ಐವರು ನ್ಯಾಯಮೂರ್ತಿಗಳ ಸಮಿತಿ ವರದಿ ಸಲ್ಲಿಸಿದಾಗಿನ ಸಂದರ್ಭಕ್ಕೂ ಮತ್ತು ಈಗಿನ ಸಂದರ್ಭಕ್ಕೂ ಇರುವ ವ್ಯತ್ಯಾಸವನ್ನು ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ರಾಜ್ಯ ಜನತೆಗೆ ಸ್ಪಷ್ಟಪಡಿಸಬೇಕು ಎಂದು ಧಾರವಾಡ ಉತ್ತರ ಲೋಕಸಭೆಯ ಸಂಸದ ಪ್ರಹ್ಲಾದ್ ಜೋಶಿ ಹೇಳಿದರು. ಸ್ಥಳ ಸೂಚಿಸುವಂತೆ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ರಾಜ್ಯ ಸರಕಾರಕ್ಕೆ ಹಿಂದೆ ಸೂಚಿಸಿದ್ದರು ಈಗ ಹೈಕೋರ್ಟ್ ಪೀಠದ ಅವಶ್ಯವಿಲ್ಲ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದು ತಮಗೆ ಆಶ್ಚರ್ಯ ತಂದಿದೆ ಎಂದರು. ಐವರು ನ್ಯಾಯಮೂರ್ತಿಗಳು ತಪ್ಪುವರದಿ ಸಲ್ಲಿಸಿದ್ದರೆ ಅಥವಾ ಮುಖ್ಯ ನ್ಯಾಯಮೂರ್ತಿಗಳು ಆ ವರದಿಯನ್ನು ನಂಬಲಿಲ್ಲವೇ ಎನ್ನುವ ಗೊಂದಲ ಜನತೆಯನ್ನು ಕಾಡುತ್ತಿದೆ ಎಂದರು. ಆದ್ದರಿಂದ ಸಮಿತಿ ವರದಿ ಸಲ್ಲಿಸುವಾಗಿನ ಸಂದರ್ಭಕ್ಕೂ ಈಗ ಅವಶ್ಯವಿಲ್ಲ ಎನ್ನುವುದಕ್ಕೂ ಇರುವ ವ್ಯತ್ಯಾಸವನ್ನು ಮುಖ್ಯ ನ್ಯಾಯಮೂರ್ತಿಗಳು ಸ್ಪಷ್ಟಪಡಿಸಬೇಕು ಎಂದು ಜೋಶಿ ಆಗ್ರಹಿಸಿದರು[೩೮].

೩.೨.೬. ಮೋಹನ ನಾಗಮ್ಮನವರ

ರಾಜಧಾನಿಯಲ್ಲಿ ಕೇಂದ್ರೀಕೃತವಾಗಿರುವ ನ್ಯಾಯಾಂಗ ಹಾಗೂ ಶಾಸಕಾಂಗ ಸೇರಿದಂತೆ ಎಲ್ಲ ಮನಸ್ಸುಗಳಿಗೆ ಉತ್ತರ ಕರ್ನಾಟಕದ ಜನತೆಯ ನೋವು, ಸಂಕಟಗಳು ಅರ್ಥವಾಗುತ್ತಿಲ್ಲ. ಈ ಭಾಗದ ಬಗ್ಗೆ ಅವರಲ್ಲಿ ದಿವ್ಯ ನಿರ್ಲಕ್ಷ್ಯ ಮನೆ ಮಾಡಿದೆ. ಹೀಗಾಗಿ ಆಗಾಗ ಇಂಥ ನಿರ್ಧಾರಗಳು ಪ್ರಕಟವಾಗುತ್ತದೆ ಎಂದು ಸಾಹಿತಿ ಮೋಹನ ನಾಗಮ್ಮನವರ ಕಟುವಾಗಿ ಪ್ರತಿಕ್ರಿಯಿಸಿದರು[೩೯]. ಮುಖ್ಯ ನ್ಯಾಯಮೂರ್ತಿಗಳು ಇಂಥ ಪತ್ರ ಬರೆಯುವುದರ ಮೂಲಕ ಮತ್ತೊಮ್ಮೆ ಉತ್ತರ ಕರ್ನಾಟಕದ ಜನತೆಯ ಆಕ್ರೋಶಕ್ಕೆ ಕಾರಣರಾಗಿದ್ದರು. ಈ ವರದಿ ನ್ಯಾಯದ ನಿರೀಕ್ಷೆಯಲ್ಲಿದ್ದ ಇಲ್ಲಿಯ ಜನತೆಗೆ ಭಾರಿ ಆಘಾತ ನೀಡಿತ್ತು.

ಧಾರವಾಡ ವಕೀಲರ ಸಂಘದ ಅಧ್ಯಕ್ಷ ಬಿ.ಡಿ.ಹಿರೇಮಠ ಮತ್ತು ಪ್ರದೇಶ ಜನತಾದಳ ಆಗಿನ ಅಧ್ಯಕ್ಷ ಎನ್.ತಿಪ್ಪಣ್ಣ ನೇತೃತ್ವದ ನಿಯೋಗದ ಜೊತೆಗೆ ಈ ಸಂಬಂಧವಾಗಿ ಚರ್ಚಿಸಲಾಯಿತು. ಬಿ.ಡಿ.ಹಿರೇಮಠ ಅವರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕೆ ಸ್ಥಳ ಆಯ್ಕೆ ಮಾಡುವ ವಿಚಾರದಲ್ಲಿ ಯಾವುದೇ ವಿವಾದವಿಲ್ಲ. ಸ್ಥಳ ಆಯ್ದ ಸರ್ಕಾರ ಮತ್ತು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ಬಿಟ್ಟಿದ್ದು ಎಂದರು. ಸ್ಥಳದ ಆಯ್ಕೆ ವಿಚಾರವಾಗಿ ೨೦೦೩ ಅಕ್ಟೋಬರ್ ೭ರಂದು ಅಂದಿನ ಕಾನೂನು ಸಚಿವರಾಗಿದ್ದ ಡಿ.ಬಿ.ಚಂದ್ರೇಗೌಡ ಅವರ ಸಮ್ಮುಖದಲ್ಲಿ ನಡೆದ ಉತ್ತರ ಕರ್ನಾಟಕ ಭಾಗದ ೧೨ ಜಿಲ್ಲೆಗಳ ವಕೀಲರ ಸಭೆಯಲ್ಲೇ ಸಹಮತಕ್ಕೆ ಬರಲಾಗಿತ್ತು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕಾಗಿ ಹುಬ್ಬಳ್ಳಿ ಕೋರ್ಟ್ ಕಲಾಪಗಳನ್ನು ಆಗಸ್ಟ್ ೨೮, ೨೦೦೩ರಿಂದ ಬಹಿಷ್ಕರಿಸಲಾಗಿತ್ತು. ೫೨ ದಿನಗಳ ನಂತರ ಹುಬ್ಬಳ್ಳಿ ವಕೀಲರ ಸಂಘದ ಅಧ್ಯಕ್ಷರಾಗಿದ್ದ ಹಳೆಮನಿಯವರ ನೇತೃತ್ವದಲ್ಲಿ ೧೫.೧೦.೨೦೦೩ರಂದು ಹುಬ್ಬಳ್ಳಿ ಕೋರ್ಟ್ ಕಲಾಪಗಳನ್ನು ಪುನರಾರಂಭಿಸುವ ಮೂಲಕ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಕುರಿತಾದ ಚಳವಳಿಗೆ ಹೊಸರೂಪ ನೀಡಲಾಯಿತು. ಕೋರ್ಟ್ ಕಲಾಪಗಳ ಪುನರಾರಂಭ ಮತ್ತು ಹೋರಾಟದ ಸಂಕೇತವಾಗಿ ಪ್ರತಿ ಶನಿವಾರ ಕೋರ್ಟ್ ಕಲಾಪಗಳನ್ನು ಬಹಿಷ್ಕರಿಸುವುದು ಎಂಬ ಈ ಎರಡು ನಿರ್ಣಯಗಳನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

೧೪.೧೦.೨೦೦೩ರಂದು ಧಾರವಾಡ ವಕೀಲರ ಸಂಘದಲ್ಲಿ ಸರ್ವಸದಸ್ಯರ ಸಭೆಯ ನಿರ್ಣಯದಂತೆ ೨೪.೧೦.೨೦೦೩ರ ಒಳಗೆ ಗೌರವಾನ್ವಿತ ಮುಖ್ಯಮಂತ್ರಿಗಳು ಗೌರವಾನ್ವಿತ ಮುಖ್ಯ ನ್ಯಾಯಾಧೀಶರನ್ನು? ಗೌರವಾನ್ವಿತ ರಾಜ್ಯಪಾಲರನ್ನು, ಕೇಂದ್ರ ಸರಕಾರವನ್ನು, ರಾಷ್ಟ್ರಪತಿಗಳನ್ನು ಕಂಡು ಪೀಠ ಸ್ಥಾಪನೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಇಲ್ಲದ ಪಕ್ಷದಲ್ಲಿ "ಬೆಂಗಳೂರು ಚಲೋ" ಕಾರ್ಯಕ್ರಮ ಹಮ್ಮಿಕೊಂಡು ದಿನಾಂಕ ೨೯.೧೦.೨೦೦೩ ಬೆಳಿಗ್ಗೆ ೧೧.೦೦ ಗಂಟೆಗೆ ವಿಧಾನಸೌಧ ಬೆಂಗಳೂರು ಎದುರಿಗೆ ಧರಣಿ ಕಾರ್ಯಕ್ರಮವನ್ನು ಎಲ್ಲ ಸಂಘ ಸಂಸ್ಥೆಗಳು ಸರ್ವ ರಾಜಕೀಯ ಪಕ್ಷಗಳು ಜನಪರ ಸಂಘಟನೆಗಳು ರೈತರು, ಕಾರ್ಮಿಕರು ಯುವ ಸಂಘಟನೆಗಳು ಮತ್ತು ಮಹಿಳೆಯರು ಕೈಗೊಳ್ಳಲು ತೀರ್ಮಾನಿಸಲಾಯಿತು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕೆ ಸಂಬಂಧಪಟ್ಟ ಹಾಗೆ ಬೇಗ ತೀರ್ಮಾನ ತೆಗೆದುಕೊಳ್ಳದೇ ಹೋದಲ್ಲಿ "ಆತ್ಮಹತ್ಯೆ" ಮಾಡಿಕೊಳ್ಳುವುದಾಗಿ ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ.ಹಿರೇಮಠ ಮತ್ತು ಇತರರು ದಿನಾಂಕ ೦೪.೦೯.೨೦೦೩ರಂದು ಒತ್ತಾಯಿಸಿದರು ಬಿ.ಡಿ. ಹಿರೇಮಠ ಅವರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗುವವರೆಗೂ ಚಳವಳಿ ಮುಂದುವರೆಯುವುದು ಎಂದರು [೪೦].

ಹುಬ್ಬಳ್ಳಿ–ಧಾರವಾಡದಲ್ಲಿ ೦೪.೦೯.೨೦೦೩ರಂದು ಬಂದ್ ಆಚರಿಸಲು ಸಕಲ ಸಿದ್ಧತೆಗಳನ್ನು ಮಾಡಲಾಯಿತು. ಬಿ.ಡಿ.ಹಿರೇಮಠ ಅವರು ಇತರ ಜಿಲ್ಲೆಗಳ ವಕೀಲರ ಸಂಘಗಳೊಂದಿಗೆ ಮಾತನಾಡಿ ಬಂದ್ ಆಚರಿಸಲು ಸಹಮತವನ್ನು ಕೇಳಿದ್ದರು. ಇವರು ಬೀದರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳೊಂದಿಗೂ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಬೇಕಾಗಿ ಕೇಳಿದ್ದರು. ಆದರೆ ಬಿಜಾಪುರ ವಕೀಲರ ಸಂಘವು ಬಂದ್‌ಗೆ ಬೆಂಬಲ ನೀಡಲು ತಿರಸ್ಕರಿಸಿತು.

ಧಾರವಾಡದಲ್ಲಿ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರ ನಿಲುವನ್ನು ಪ್ರತಿಘಟಿಸಿ ದಿನಾಂಕ ೦೧.೦೯.೨೦೦೪ರಂದು ಧಾರವಾಡ ವಕೀಲರು ಕಲಾಪದಿಂದ ದೂರ ಉಳಿದರು. ಅಂದು ಶಾಲಾ–ಕಾಲೇಜು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ಅಂದು ಬೆಳಿಗ್ಗೆ ೮ ಘಂಟೆಗೆ ಕಾನೂನು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನೆ ಮಾಡಿದರು. ಹುರಕಡ್ಲಿ ಅಜ್ಜ ಕಾನೂನು ಕಾಲೇಜು ಮತ್ತು ವಿಶ್ವವಿದ್ಯಾಲಯ ಕಾನೂನು ಕಾಲೇಜಿನಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು. ಅನಂತರ ಮೆರವಣಿಗೆಯಲ್ಲಿ ತೆರಳಿದ ವಿದ್ಯಾರ್ಥಿಗಳು ಕಿಟೆಲ್ ಕಾಲೇಜು, ಬಾಸೆಲ್ ಮಿಷನ್ ಜೂನಿಯರ್ ಕಾಲೇಜು, ಮೃತ್ಯುಂಜಯ ಕಾಲೇಜು , ಅಂಜುಮನ್ ಕಾಲೇಜು, ಕರ್ನಾಟಕ ವಿಜ್ಞಾನ ಕಲಾ ಕಾಲೇಜುಗಳನ್ನು ಬಂದ್ ಮಾಡಿಸಿದರು[೪೧].

ಆಲೂರು ವೆಂಕಟರಾವ್ ವೃತ್ತದಲ್ಲಿ ೧೦ ನಿಮಿಷ ಮಾನವ ಸರಪಳಿ ನಿರ್ಮಿಸಿದ ವಿದ್ಯಾರ್ಥಿಗಳು ಸಿವಿಲ್ ನ್ಯಾಯಾಲಯಕ್ಕೆ ಆಗಮಿಸಿ ವಕೀಲರ ಸಂಘದಲ್ಲಿ ಸಭೆ ಸೇರಿದರು. ಈ ಸಭೆಯಲ್ಲಿ ಮಾತನಾಡಿದ ಬಿ.ಡಿ.ಹಿರೇಮಠ ಚಳವಳಿಯಲ್ಲಿ ವಿದ್ಯಾರ್ಥಿ ಸಮುದಾಯ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು[೪೨]. ನಂತರ ವಕೀಲರ ಸಭೆಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಆಗುವವರೆಗೆ ಚಳವಳಿ ನಿಲ್ಲುವುದಿಲ್ಲ. ಹೈಕೋರ್ಟ್ ಪೀಠ ಕೊಡದಿದ್ದರೆ ಪ್ರತ್ಯೇಕ ರಾಜ್ಯ ಹೋರಾಟ ಮಾಡುವುದು ಮತ್ತು ಅನಿರ್ದಿಷ್ಟ ಕಾಲ ಕೋರ್ಟ್ ಕಲಾಪ ಬಹಿಷ್ಕಾರ ಮಾಡಲು ನಿರ್ಣಯ ಕೈಗೊಳ್ಳಾಯಿತು. ಧಾರವಾಡ ಜಿಲ್ಲೆ ಜನಪ್ರತಿನಿಧಿಗಳು, ಎಲ್ಲ ಪಕ್ಷಗಳ ಪದಾಧಿಕಾರಿಗಳು, ವಕೀಲರ ಸಂಘಗಳ ಪದಾಧಿಕಾರಿಗಳ ಸಭೆಯನ್ನು ಧಾರವಾಡ ವಕೀಲರ ಸಂಘದಲ್ಲಿ ಕರೆಯಲು ಶಾಲಾ ಕಾಲೇಜುಗಳನ್ನು ಅನಿರ್ದಿಷ್ಟ ಅವಧಿಗೆ ಬಂದ್ ಮಾಡಲು ನಿರ್ಧರಿಸಲಾಯಿತು. ಈ ರೀತಿ ಪ್ರತಿಭಟನೆಯು ತೀವ್ರ ಸ್ವರೂಪವನ್ನು ಪಡೆದುಕೊಂಡಿತು.

ಜೈನ್ ವರದಿ ಖಂಡಿಸಿ ಗುಲ್ಬರ್ಗದಲ್ಲಿಯೇ ಹೈಕೋರ್ಟ್ ಪೀಠ ಸ್ಥಾಪಿಸಲು ಆಗ್ರಹಿಸಿ ವಕೀಲರ ಸಂಘದವರು ಅಲ್ಲಿನ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಸರದಿ ಧರಣಿ ಪ್ರಾರಂಭಿಸಿದರು. ಈ ಚಳವಳಿಗೆ ವಿವಿಧ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಬೆಂಬಲ ಸೂಚಿಸಿದವು. ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮಾಜಿ ಅಧ್ಯಕ್ಷ ಎಸ್.ಎನ್. ಕುಮ್ಮಣ್ಣ , ಗುಲ್ಬರ್ಗ ವಕೀಲರ ಸಂಘದ ಮಾಜಿ ಅಧ್ಯಕ್ಷ ಶಿವಾನಂದ ಪಾಟೀಲ, ಮಹ್ಮದ ಖಾದರ್‌ಖಾನ್ ಮತ್ತು ವಿವೇಕಾನಂದ ದೇಸಾಯಿ ಧರಣಿಯಲ್ಲಿ ಭಾಗವಹಿಸಿದ್ದರು. ಸರ್ಕಾರದ ಮೇಲೆ ಒತ್ತಡ ಹೇರಲು ಹೋರಾಟ ಅನಿವಾರ್ಯವಾಗಿತ್ತು. ವಕೀಲರ ಈ ಹೋರಾಟಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹೈದ್ರಾಬಾದ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ಬೆಂಬಲಿಸಿದವು.

ಬಿಜಾಪುರದ ವಕೀಲರ ಸಂಘವು ನ್ಯಾಯಮೂರ್ತಿ ಎಸ್.ಕೆ.ಜೈನ್ ವರದಿಯನ್ನು ಖಂಡಿಸಿ ಬಿಜಾಪುರದಲ್ಲಿ ನ್ಯಾಯಾಲಯದ ಕಲಾಪಗಳಿಗೆ ಬಹಿಷ್ಕಾರ ಹಾಕಿ ಸಾಂಕೇತಿಕವಾಗಿ ರಸ್ತೆ ತಡೆ ನಡೆಸಿತು. ನ್ಯಾಯಾಲಯದ ಆವರಣದಲ್ಲಿ ತುರ್ತುಸಭೆ ಸೇರಿದ ವಕೀಲರು ನ್ಯಾಯಾಲಯದ ಕಲಾಪಗಳಿಗೆ ಬಹಿಷ್ಕಾರ ಹಾಕಿ ರಸ್ತೆ ತಡೆ ನಡೆಸುವ ನಿರ್ಧಾರ ಮಾಡಿ ನಂತರ ನ್ಯಾಯಾಲಯದ ಸಂಕೀರ್ಣದ ಎದುರಿನ ರಸ್ತೆ ಮಧ್ಯೆ ಕುಳಿತು ವಾಹನ ಸಂಚಾರಕ್ಕೆ ಅಡ್ಡಿ ಪಡಿಸಿದರು[೪೩].

೩.೩. ಮೂರನೇ ಹಂತ

೩.೩.೧. ಪ್ರತ್ಯೇಕ ರಾಜ್ಯಕ್ಕಾಗಿ ಕೂಗು

ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರ ನಿಲುವನ್ನು ಪ್ರತಿಭಟಿಸಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ ಕೂಗು ಆರಂಭವಾಯಿತು. ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ವಿಷಯದಲ್ಲಿ ರಾಜ್ಯ ಸರಕಾರ ತೋರಿದ್ದ ಧೋರಣೆಯನ್ನು ಪ್ರತಿಭಟಿಸಿ ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟವನ್ನು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಹೋರಾಟ ಕ್ರಿಯಾಸಮಿತಿಯು, ಪ್ರತ್ಯೇಕ ರಾಜ್ಯ ಧ್ವಜಾರೋಹಣ ಮಾಡಲು ನಿರ್ಧರಿಸುವ ಮೂಲಕ ಚಳವಳಿಗೆ ಹೊಸ ಚಾಲನೆ ನೀಡಲು ನಿರ್ಧರಿಸಿತು. ಇಲ್ಲಿಯ ಹಿಂದಿ ಪ್ರಚಾರ ಸಭಾ ಆವರಣದಲ್ಲಿ ವೈಜನಾಥ್ ಪಾಟೀಲರ ನೇತೃತ್ವದ ಸಮಿತಿ ಧ್ವಜಾರೋಹಣ ನೆರವೇರಿಸಿದ ನಂತರ ಪ್ರತ್ಯೇಕ ರಾಜ್ಯದ ನಕ್ಷೆ ಬಿಡುಗಡೆ ಮಾಡಲು ನಿರ್ಧರಿಸಿತ್ತು. ಈ ಪತ್ಯೇಕತೆಯ ಕೂಗನ್ನು ಬಲವಾಗಿ ವಿರೋಧಿಸಿದ ಹಿರಿಯ ಪತ್ರಕರ್ತ ಡಾ.

ಪಾಟೀಲ ಪುಟ್ಟಪ್ಪ ಅವರು ಮುಂಬೈ ಮತ್ತು ಹೈದ್ರಾಬಾದ್ ಕರ್ನಾಟಕದಲ್ಲೂ ಹೈಕೋರ್ಟ್ ಪೀಠ ಬೇಕು ಎಂದರು ಆದರೆ ಮುಂಬೈ ಮತ್ತು ಹೈದ್ರಾಬಾದ್ ಕರ್ನಾಟಕದ ಯಾವ ಜಿಲ್ಲೆಯಲ್ಲಿ ಪೀಠ ಸ್ಥಾಪಿಸಬೇಕು ಎನ್ನುವುದು ಸರ್ಕಾರ ಮತ್ತು ಹೈಕೋರ್ಟ್‌ಗೆ ಬಿಟ್ಟ ವಿಚಾರ. ಆದರೆ ಎರಡು ಪೂರ್ಣ ಪೀಠ ಬೇಕು ಎಂದು ಸ್ಪಷ್ಟವಾಗಿ ಹೇಳಿದರು[೪೪]. ಪೀಠದ ನೆಪದಲ್ಲಿ ಪ್ರತ್ಯೇಕತೆ ಬಾವುಟ ಹಾರಿಸುವುದನ್ನು ಡಾ. ಪಾಟೀಲ ಪುಟ್ಟಪ್ಪನವರು ವಿರೋಧಿಸಿದರು.

ಜಿಲ್ಲೆಯ ಸಾಹಿತಿಗಳು, ಕನ್ನಡ ಅಭಿಮಾನಿಗಳು, ವರ್ತಕರು, ವಿಚಾರವಾದಿಗಳು, ಜನಸಾಮಾನ್ಯರು ಹಾಗೂ ವಿದ್ಯಾರ್ಥಿಗಳು ಪತ್ಯೇಕ ರಾಜ್ಯದ ಕೂಗನ್ನು ವಿರೋಧಿಸಿದರು. ಕರ್ನಾಟಕ ಏಕೀಕರಣದ ನಂತರವೂ ಸಹ ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿಯ ಉಳಿವಿಗಾಗಿ ನಿರಂತರ ಹೋರಾಟ ಮಾಡಲೇಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅಖಂಡ ಕರ್ನಾಟಕದ ಸ್ಥಿತಿಯೇ ಹೀಗಿರುವಾಗ ಇನ್ನು ಈ ರಾಜ್ಯವನ್ನು ಒಡೆದು ಉತ್ತರ ಕರ್ನಾಟಕ ಪತ್ಯೇಕ ರಾಜ್ಯ ಮಾಡಿದರೆ ಕನ್ನಡದ ಮತ್ತು ಕನ್ನಡಿಗರ ಸ್ಥಿತಿ ಏನಾಗಬಹುದು ಎನ್ನುವ ಆತಂಕ ಕಂಡುಬಂತು. ಉತ್ತರ ಕರ್ನಾಟಕ ನಿರ್ಲಕ್ಷಕ್ಕೊಳಗಾಗಿದೆ ಎಂಬ ಆಪಾದನೆ ಇದೆ. ಪ್ರಾದೇಶಿಕ ಸಮಾನತೆ ಕಾಯ್ದುಕೊಳ್ಳುವುದು ಅಗತ್ಯ, ಆದರೆ ಬೇಡಿಕೆ ಈಡೇರಿಲ್ಲ ಎಂಬ ಕಾರಣಕ್ಕೆ ರಾಜ್ಯವನ್ನು ಒಡೆಯುವುದು ಎಷ್ಟು ಸರಿ ಎನ್ನುವುದು ಎಲ್ಲರ ಪ್ರಶ್ನೆಯಾಗಿತ್ತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಪ್ರಾಚಾರ್ಯ ಎಂ.ಜಿ.ಈಶ್ವರಪ್ಪ ಅವರು ಪ್ರತ್ಯೇಕ ರಾಜ್ಯ ರಚನೆಯಿಂದ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ಭಾವಿಸಲಾಗದು. ಹಕ್ಕುಗಳಿಗೆ ಹೋರಾಟ ಮಾಡುವುದರಲ್ಲಿ ತಪ್ಪಿಲ್ಲ. ರಾಜ್ಯ ಒಡೆಯುವ ಮಾತು ಬರಬಾರದು ಎಂದರು[೪೫].

'ಹೈಕೋರ್ಟ್ ಪೀಠದ ಬೇಡಿಕೆ ನ್ಯಾಯಯುತವೇ. ಆದರೆ ರಾಜ್ಯ ವಿಭಜನೆ ಮಾಡುವುದರಿಂದ ಏನು ಸಾಧನೆ ಮಾಡಿದಂತಾಗುತ್ತದೆ' ಎಂದು ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಕಾಸಲ್ ಎಸ್.ವಿಠ್ಠಲ್ ಅವರು 'ರಾಜ್ಯಗಳನ್ನು ಒಡೆಯುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತವೆಯೇ ಹೊರತು ಪರಿಹಾರ ದೊರಕುವುದಿಲ್ಲ' ಎಂದರು. ಸಾಹಿತಿ ಟಿ.ಗಿರಿಜ ಅವರು ರಾಜ್ಯ ದೇಶ ಒಡೆಯುವ ಕೆಲಸಕ್ಕೆ ಯಾರೂ ಸಹ ಬೆಂಬಲ ವ್ಯಕ್ತಪಡಿಸಬಾರದು ಎಂದರು. ಅವರು 'ಹೋರಾಟಕ್ಕೆ ಹಲವಾರು ಮಾರ್ಗಗಳಿವೆ. ಅದರ ಬದಲಿಗೆ ಪ್ರತ್ಯೇಕ ರಾಜ್ಯ ಮಂಡನೆ ಮಾಡುವುದು ಸರಿಯಲ್ಲ' ಎಂದರು[೪೬]. ಜನಸಾಮಾನ್ಯರು ಆಕ್ರೋಶಗೊಂಡು ಈ ಎಲ್ಲಾ ಸಮಸ್ಯೆಗಳಿಗೆ ಸರ್ಕಾರವೇ ಕಾರಣ. ಸಮಸ್ಯೆಗಳಿಗೆ ಪರಿಹಾರ ರೂಪಿಸುವ ವಿಷಯಗಳಲ್ಲಿಯೂ ಸಹ ರಾಜಕೀಯ ಬೆರೆಸುವುದರಿಂದ ಸಮಸ್ಯೆಗಳು ಗಂಭೀರ ಸ್ವರೂಪ ಪಡೆದು ಕೊಳ್ಳುತ್ತವೆ. ಜನರ ಸಮಸ್ಯೆ ಕೂಡ ರಾಜಕೀಯ ದೃಷ್ಟಿಯಿಂದ ನೋಡುವ ವ್ಯವಸ್ಥೆ ಮುಂದುವರೆಯುವ ವರೆಗೆ ಇಂತಹ ಹೋರಾಟಗಳು ನಡೆಯುತ್ತಲೇ ಇರುತ್ತವೆ. ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಬರಲು ಕಾರಣಗಳೇನು ಎನ್ನುವುದನ್ನು ಸರ್ಕಾರ ತಿಳಿದುಕೊಳ್ಳಬೇಕು. ಯಲಬುರ್ಗಾದ ಅಂದಿನ ಶಾಸನ ಬಸವರಾಜರಾಯರೆಡ್ಡಿ ಅವರು ಪ್ರತ್ಯೇಕ ರಾಜ್ಯದ ಕೂಗನ್ನು ವಿರೋಧಿಸುತ್ತಾ 'ಉತ್ತರ ಕರ್ನಾಟಕದಲ್ಲಿ ಪೀಠ ಸ್ಥಾಪಿಸಿದರೆ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ದಲ್ಲಿ ಸ್ಥಾಪಿಸುವುದು ಸೂಕ್ತ ಎಂದರು. ಉತ್ತರ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಭಾಗಕ್ಕೆ ಮುನಿರಾಬಾದ್ ಸೂಕ್ತ ಸ್ಥಳವಾಗಿದ್ದು. ಗುಲಬರ್ಗಾ ಮತ್ತು ಬೀದರಿನಲ್ಲಿ ಸ್ಥಾಪನೆಗಿಂತ ಮುನಿರಾಬಾದ್ ಅನುಕೂಲವಾಗಿದೆ. ರಸ್ತೆ ರೈಲು ಸಂಪರ್ಕ ನೀರಾವರಿ ಸೌಲಭ್ಯ ಮತ್ತು ಭೌಗೋಳಿಕವಾಗಿ ಸೂಕ್ತ ಸ್ಥಳವಾಗಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು[೪೭].

ಬಳ್ಳಾರಿಯ ರಾಜಕೀಯೇತರ ಸಂಘಟನೆಯು ಹೈಕೋರ್ಟ್ ಪೀಠ ಬೇಡಿಕೆಯನ್ನು ಮುಂದಿಟ್ಟುಕೊಂಡು ಹುಬ್ಬಳ್ಳಿ-ಧಾರವಾಡ ಮತ್ತು ಇತರ ಕೆಲ ಜಿಲ್ಲೆಗಳಲ್ಲಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ಬೇಕೆಂದು ಕೇಳತೊಡಗಿತ್ತು. ಇದನ್ನು ಬಳ್ಳಾರಿಯ ವಿಶಾಲ ಕರ್ನಾಟಕ ರಕ್ಷಣಾ ಸಮಿತಿಯು ಇದಕ್ಕೆ ವಿರೋಧ ವ್ಯಕ್ತಪಡಿಸಿತು. ಈ ಸಭೆಯ ಮುಖಂಡರು ಅಂದಿನ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಜಿ.ಉಮೇಶ್, ಬುಡಾ ಮಾಜಿ ಅಧ್ಯಕ್ಷ ಎನ್.ಪ್ರತಾಪ್ ರೆಡ್ಡಿ, ಜನತಾದಳದ ಎಚ್.ಹನುಮಂತಪ್ಪ, ಬಿ.ಶಿವಪ್ರಕಾಶ್ ಮುಂತಾದವರು ಭಾಗವಹಿಸಿದ್ದರು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಸಂಬಂಧ ಸಮಾಲೋಚನೆ ನಡೆಸಲು ಬೆಂಗಳೂರಿಗೆ ಸರ್ವಪಕ್ಷ ಮುಖಂಡರ ಸಭೆಯನ್ನು ಕರೆದ ಅಂದಿನ ಮುಖ್ಯಮಂತ್ರಿ ಧರ್ಮಸಿಂಗ್ ಶಾಸಕರ ಜೊತೆ ಚರ್ಚೆ ನಡೆಸಿದರು, ವಿವಿಧ ಮುಖಂಡರು ವಿಚಾರ ಪ್ರಸ್ತಾಪಿಸಿದ್ದರು. ಕೇಂದ್ರದ ಮಾಜಿ ಸಚಿವ ಬಸವನಗೌಡ ಪಾಟೀಲ್ ಯತ್ನಾಳ ಅವರು 'ಹೈಕೋರ್ಟ್ ಪೀಠದ ಸ್ಥಳ ನಮ್ಮ ವಿವಾದವೇ ಅಲ್ಲ. ಆದರೆ ಪ್ರಾದೇಶಿಕ ಅಸಮಾನತೆ ಪ್ರಮುಖ ವಿಷಯವಾಗಿದೆ. ಹೈಕೋರ್ಟ್ ಪೀಠಕ್ಕೆ ಸರ್ಕಾರ ೧೦೦ಕೋಟಿ ರೂ.ಗಳನ್ನು ಮೀಸಲಾಗಿಸಬೇಕು. ಪೀಠದ ಕುರಿತು ಸರ್ಕಾರ ಸರಿಯಾಗಿ ತೀರ್ಮಾನ ಮಾಡದೆ ಹೋದರೆ ನಮ್ಮ ಕ್ಷೇತ್ರದಲ್ಲಿ ನಾವು ಕಾಲಿಡಲು ಆಗುವುದಿಲ್ಲ' ಎಂದರು[೪೮]. ಮಾಜಿ ಕಾನೂನು ಸಚಿವ ಡಿ.ಬಿ.ಚಂದ್ರೇಗೌಡ ಅವರು 'ಉತ್ತರ ಕರ್ನಾಟಕ ಎಂದು ಹೇಳದೆ ಕರ್ನಾಟಕದ ಉತ್ತರ ಭಾಗದಲ್ಲಿ ಎಂದು ಹೇಳುವುದು ಸೂಕ್ತ. ಇದೇ ರಾಜ್ಯದ ಜನತೆ ಹೈಕೋರ್ಟ್ ಪೀಠಕ್ಕೆ ಸಂಬಂಧಿಸಿದಂತೆ ಒಗ್ಗಟ್ಟಿನಿಂದ ಇರಬೇಕು' ಎಂದರು. ಮಾಜಿ ಸಚಿವ ಎಂ.ಸಿ.ನಾಣಯ್ಯ ಅವರು 'ಮುಖ್ಯಮಂತ್ರಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಿ ಹೋರಾಟ ಮಾಡಬೇಕು. ಸರ್ಕಾರ ನಿಗದಿ ಮಾಡುವ ಸ್ಥಳದಲ್ಲಿ ಪೀಠ ಸ್ಥಾಪನೆಯಾಗಬೇಕು' ಎಂದು ಅಭಿಪ್ರಾಯಪಟ್ಟರು. ಅಂದಿನ ಶಾಸಕ ಜಿ.ಎ.ಶ್ರೀರಾಮ ರೆಡ್ಡಿ ಅವರು 'ನ್ಯಾಯಾಂಗದ ಮಧ್ಯ ಪ್ರವೇಶದಿಂದ ವಿವಾದವಾಗಿದೆ. ಪುನರ್ ಪರಿಶೀಲನೆ ಮಾಡುವಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಲ್ಲಿ ಮನವಿ ಮಾಡಿಕೊಳ್ಳುವುದು ಸರಿ' ಎಂದು ಸಲಹೆ ಮಾಡಿದ್ದರು. ಸಂಯುಕ್ತ ಜನತಾದಳದ ಡಾ.ಎಂ.ಪಿ.ನಾಡಗೌಡ ಅವರು ಹೈಕೋರ್ಟ್ ಪೀಠ ನೆಪ ಮಾತ್ರ, ಜನರ ಭಾವನೆಗೆ ಸ್ಪಂದಿಸದೆ ಹೋದರೆ ಹೋರಾಟ ಇನ್ನಷ್ಟು ಜಾಸ್ತಿಯಾಗುತ್ತದೆ' ಎಂದು ಎಚ್ಚರಿಕೆಯನ್ನು ನೀಡಿದರು[೪೯]. ವಿವಿಧ ರಾಜಕೀಯ ಮುಖಂಡರು ಚರ್ಚೆ ನಡೆಸಿದರು. ಆದರೆ ಇದರ ಫಲಿತಾಂಶ ಮಾತ್ರ ಶೂನ್ಯವಾಗಿತ್ತು. ಪೀಠಕ್ಕೆ ರಾಜಕೀಯ ಪಕ್ಷಗಳ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿತ್ತು.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕು ಎಂದು ಒತ್ತಾಯಿಸಿ ಧಾರವಾಡ ವಕೀಲರ ಸಂಘದ ಅಧ್ಯಕ್ಷ ಬಿ.ಡಿ.ಹಿರೇಮಠ ಅವರ ನೇತೃತ್ವದಲ್ಲಿ ಸುಮಾರು ೧೯ ಜನರು ದಿನಾಂಕ ೨೫.೦೮.೨೦೦೪ರಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಇದರ ಮೂಲಕ ಚಳವಳಿಯು ತನ್ನ ತೀವ್ರತೆಯನ್ನು ಪಡೆದುಕೊಂಡಿತು. ಇವರು ಸಿಟಿ ಸಿವಿಲ್ ನ್ಯಾಯಾಲಯದ ಹೊರಗಡೆ ಈ ಸತ್ಯಾಗ್ರಹ ಆರಂಭಿಸಲಾಗಿತ್ತು. ಇವರು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ರಾಜ್ಯ ಸರ್ಕಾರಕ್ಕೆ ಬರೆದ ಪತ್ರವನ್ನು ಬಹಿರಂಗಪಡಿಸುವವರೆಗೆ ಈ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ ಎಂದು ಧರಣಿ ನಿಂತ ವಕೀಲರು ಎಚ್ಚರಿಸಿದ್ದರು. ಉತ್ತರ ಕರ್ನಾಟಕದ ೧೨ ಜಿಲ್ಲೆಗಳ ವಕೀಲರು ಅಂದಿನ ಕಾನೂನು ಸಚಿವರ ಸಮ್ಮುಖದಲ್ಲಿ ಸಭೆ ಸೇರಿಸಿ ಆ ಜಿಲ್ಲೆಗಳ ಪೈಕಿ ಯಾವ ಜಿಲ್ಲೆಯಲ್ಲಾದರೂ

ಹೈಕೋರ್ಟ್ ಪೀಠವನ್ನು ಸ್ಥಾಪಿಸಬೇಕು ಎಂದು ನ್ಯಾಯಸಮ್ಮತಿ ಸೂಚಿಸಿ ಸ್ಥಳ ನಿರ್ಧಾರದ ಜವಾಬ್ದಾರಿಯನ್ನು ಮುಖ್ಯ ನ್ಯಾಯಮೂರ್ತಿಗಳಿಗೆ ಬಿಡಲಾಗಿತ್ತು. ಜೊತೆಗೆ ಗುಲ್ಬರ್ಗಾ ಮತ್ತು ಬೆಳಗಾವಿ ಕಂದಾಯ ವಿಭಾಗದ ಒಂದೊಂದು ಕಡೆಯಲ್ಲಿ ಸರ್ಕಿಟ್ ಪೀಠವನ್ನು ಸ್ಥಾಪಿಸಬೇಕು ಎಂದೂ ಆ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೂ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ಪೀಠದ ವಿರುದ್ಧ ಪತ್ರ ಬರೆದಿರುವುದು ಉತ್ತರ ಕರ್ನಾಟಕದ ಜನರ ಆಶಯಕ್ಕೆ ಪೆಟ್ಟು ಬಿದ್ದಂತಾಗಿತ್ತು.

ಹೈಕೋರ್ಟ್ ಪೀಠ ಸ್ಥಾಪನೆಗೆ ಒತ್ತಾಯಿಸಿ ೨೧.೦೯.೨೦೦೪ರಂದು ಗುಲ್ಬರ್ಗಾ, ಬೀದರ್, ರಾಯಚೂರು ಬಂದ್ ಆಚರಿಸಲು ನಿರ್ಧರಿಸಲಾಯಿತು. ಮೂರು ಜಿಲ್ಲೆಯ ನ್ಯಾಯವಾದಿಗಳು ೧೩.೦೯.೨೦೦೪ರಿಂದ ೨೩.೦೯.೨೦೦೪ರವರೆಗೆ ಕೋರ್ಟ್ ಕಲಾಪ ಬಹಿಷ್ಕರಿಸಿದರು. ಹೀಗಾಗಿ ಚಳವಳಿಯು ಹೊಸ ರೂಪವನ್ನು ಪಡೆದುಕೊಂಡಿತು. ರಾಯಚೂರು, ಬೀದರ್, ಗುಲ್ಬರ್ಗಾ ನ್ಯಾಯವಾದಿಗಳು ಕ್ರಿಯಾ ಸಮಿತಿ ಸಭೆಯನ್ನು ಕರೆದು ಇದರಲ್ಲಿ ಈ ಜಿಲ್ಲೆಗಳ ಬಹುತೇಕ ತಾಲ್ಲೂಕುಗಳ ನ್ಯಾಯವಾದಿಗಳು ಪಾಲ್ಗೊಂಡಿದ್ದರು. ಸಭೆಯು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿತು. ಅವು ಈ ಕೆಳಗಿನಂತಿದೆ.

೧. ೧೩.೦೯.೨೦೦೪ರಿಂದ ೨೩.೦೯.೨೦೦೪ರವರೆಗೆ ಕೋರ್ಟ್ ಕಲಾಪ ಬಹಿಷ್ಕರಿಸುವುದು.

೨. ೨೩.೦೯.೨೦೦೪ರಂದು ನಗರಕ್ಕೆ ಆಗಮಿಸುವ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಗೆ ಮನವಿ ಸಲ್ಲಿಸುವುದು.

೩. ಹೈದ್ರಾಬಾದ್ ಕರ್ನಾಟಕ ಹೈಕೋರ್ಟ್ ಪೀಠ ಹೋರಾಟ ಸಮಿತಿ ರಚಿಸುವುದು.

೪. ೨೧.೦೯.೨೦೦೪ ರಂದು ಬೀದರ್, ಗುಲ್ಬರ್ಗಾ, ರಾಯಚೂರು ಜಿಲ್ಲೆ ಬಂದ್ ಆಚರಿಸುವುದು.

೫. ೧೫.೦೯.೨೦೦೪ ರಂದು ಮುಖ್ಯಮಂತ್ರಿ ನೇತೃತ್ವದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರನ್ನು ನಿಯೋಗ ಭೇಟಿ ಮಾಡುವುದು[೫೦].

ಈ ಸಭೆಯಲ್ಲಿ ಈ ಮೂರು ಜಿಲ್ಲೆಗಳಿಂದ ಪ್ರತ್ಯೇಕ ಮನವಿ ಸಲ್ಲಿಸಲು ಸಭೆ ತೀರ್ಮಾನಿಸಿತು. ಉತ್ತರ ಕರ್ನಾಟಕವೆಂದರೆ ಕೇವಲ ಹುಬ್ಬಳ್ಳಿ–ಧಾರವಾಡ ಎಂದು ಭಾವಿಸಲಾಗುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳು ಸೇರಿ ಹೋರಾಟಕ್ಕೆ ಚುರುಕು ನೀಡುವುದು ಅಗತ್ಯವೆಂದು ನಿರ್ಧರಿಸಲಾಗಿತ್ತು. ಸಭೆಯು ಮುಖ್ಯಮಂತ್ರಿ ನೇತೃತ್ವದಲ್ಲಿ ಮುಖ್ಯ ನ್ಯಾಯಮ್ಹೂರ್ತಿ ಬಳಿ ಹೋದಾಗ ಉತ್ತರ ಕರ್ನಾಟಕದ ಹೆಸರಿನ ಮೇಲೆ ಮನವಿ ಸಲ್ಲಿಸುವುದು ಬೇಡ. ಹೈದ್ರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳ ಪ್ರತ್ಯೇಕ ಮನವಿ ನೀಡಬೇಕು. ಒಂದು ವೇಳೆ ಮುಖ್ಯ ನ್ಯಾಯಮೂರ್ತಿಗಳು ಒಪ್ಪದಿದ್ದರೆ ಉತ್ತರ ಕರ್ನಾಟಕದ ಹೆಸರಿನಲ್ಲಿ ಸಲ್ಲಿಸುವ ಮನವಿ ಬೆಂಬಲಿಸುವುದು ಬೇಡ ಎಂದು ಅನೇಕ ನ್ಯಾಯವಾದಿಗಳು ಅಭಿಪ್ರಾಯಪಟ್ಟರು. ಸಭೆಯಲ್ಲಿ ರಾಯಚೂರಿನ ಅಂದಿನ ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಾಂತನಗೌಡ, ರಾಜಕುಮಾರ ಕುಲ್ಕರ್ಣಿ ಬೀದರ್, ಅಂದಿನ ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಕಾಶೀನಾಥರಾವ್, ಚೆನ್ನಬಸಪ್ಪ ಹಾಲಳ್ಳಿ, ವಿಲಾಸರಾವ್ ಮೋರೆ, ಮಾಜಿ ಶಾಸಕರಾದ ಚಂದ್ರಕಾಂತ, ಗುಲ್ಬರ್ಗಾದ ಅಂದಿನ ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಂ.ಎನ್.ಪಾಟೀಲ ಮತ್ತು ಇತರ ಅನೇಕ ವಕೀಲರುಗಳು ಪಾಲ್ಗೊಂಡಿದ್ದರು[೫೧].

ಹೈಕೋರ್ಟ್ ಪೀಠ ಸ್ಥಾಪನೆ ಬೇಡಿಕೆ ಈಡೇರುವವರೆಗೆ ಪ್ರತ್ಯೇಕ ರಾಜ್ಯ ಹೋರಾಟ ಚಳವಳಿ ನಿಲ್ಲದು ಎಂದು ಉತ್ತರ ಕರ್ನಾಟಕ ಭಾಗದ ವಕೀಲರ ಸಂಘಗಳ ಅಧ್ಯಕ್ಷರು ಘೋಷಿಸಿದರು. ಪ್ರಾದೇಶಿಕ ಅಸಮಾನತೆ ವಿಷಯವನ್ನು ಪ್ರಧಾನವಾಗಿಟ್ಟುಕೊಂಡು ಪ್ರತ್ಯೇಕ ರಾಜ್ಯ ಚಳವಳಿಗೆ ಹೋರಾಟದ ಸ್ವರೂಪ ನೀಡುವುದಾಗಿ ವಕೀಲರು ಎಚ್ಚರಿಸಿದ್ದರು. ಪೀಠ ಸ್ಥಾಪನೆ ಹೈಕೋರ್ಟ್ ಸಂಬಂಧಿಸಿ ಆಯ್ದ ಕೆಲವು ಜಿಲ್ಲಾ ವಕೀಲರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಮುಂದಿನಂತೆ ವಿವರಿಸಬಹುದು.

ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ.ಹಿರೇಮಠ ಅವರು 'ವಕೀಲರ ಚಳವಳಿ ಸಾರ್ವಜನಿಕ ಹೋರಾಟವಾಗಿ ಮಾರ್ಪಟ್ಟಿದೆ. ಆದ್ದರಿಂದ ಚಳವಳಿ ನಿಲ್ಲಿಸುವುದು ನಮ್ಮ ಕೈಯಲಿಲ್ಲ. ಪ್ರಾದೇಶಿಕ ಅಸಮಾನತೆ ನಿವಾರಣೆ ನಿಟ್ಟಿನಲ್ಲಿ ಹೈಕೋರ್ಟ್ ಪೀಠ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲು ಡಾ.ನಂಜುಂಡಪ್ಪನವರು ನೀಡಿರುವ ವರದಿ ಅನುಷ್ಠಾನಗೊಳ್ಳಬೇಕು' ಎಂದರು. ಬಿಜಾಪುರ ವಕೀಲರ ಸಂಘದ ಅಧ್ಯಕ್ಷರಾಗಿದ್ದ ವಿ.ಎಸ್.ಕಾಡೆ ಅವರು 'ಪೀಠ ಸ್ಥಾಪನೆ ಚಳವಳಿ ೩೦ ವರ್ಷಗಳಿಂದ ನಡೆಯುತ್ತಿದೆ. ಜಸ್ವಂತಸಿಂಗ್ ಸಮಿತಿ ವರದಿ, ನ್ಯಾಯಮೂರ್ತಿ ಭಾನ್ ವರದಿ ಹಾಗೂ ನ್ಯಾಯಮೂರ್ತಿ ಜೆ.ಸಿ.ಭರೂಕ ವರದಿ ಬಂದರೂ ಬೇಡಿಕೆ ಈಡೇರಲಿಲ್ಲ ಕೇವಲ ಅಂಕಿ ಅಂಶ ಮುಂದಿಟ್ಟುಕೊಂಡು ಪೀಠ ನಿರಾಕರಿಸುವುದು ಸರಿಯಲ್ಲ' ಎಂದರು. ಕೊಪ್ಪಳ ವಕೀಲರ ಸಂಘದ ಅಧ್ಯಕ್ಷರಾಗಿದ್ದ ಸಂಧ್ಯಾ ಬಿ.ಮದಿನೂರು ಅವರು 'ಸರ್ಕಾರದ ಧೋರಣೆಯಿಂದಾಗಿ ಪ್ರತ್ಯೇಕ ರಾಜ್ಯ ಬೇಡಿಕೆ ಜನರ ಚಳವಳಿ ಆಗಿ ಮಾರ್ಪಟ್ಟಿದೆ. ಉತ್ತರ ಕರ್ನಾಟಕದ ಯಾವುದೇ ಸ್ಥಳದಲ್ಲಾದರೂ ಪೀಠ ಸ್ಥಾಪನೆಗೆ ವಕೀಲರ ಒಮ್ಮತ ಇದೆ. ಮುಖ್ಯ ನ್ಯಾಯಮೂರ್ತಿ ಪೀಠ ಸ್ಥಾಪನೆಗೆ ಸಂಬಂಧಿಸಿ ಸಕಾರಾತ್ಮಕ ವರದಿ ನೀಡಬೇಕು' ಎಂದರು. ಬಾಗಲಕೋಟೆ ವಕೀಲರ ಸಂಘದ ಅಧ್ಯಕ್ಷರಾಗಿದ್ದ ಎ.ವಿ.ಜವಳಿ ಅವರು 'ಪೀಠ ಸ್ಥಾಪನೆ ವಿಳಂಬವಾದರೆ ಪ್ರತ್ಯೇಕ ರಾಜ್ಯ ಹೋರಾಟ ಅನಿವಾರ್ಯ. ಇದುವರೆಗೂ ಬಂದ ಸರಕಾರಗಳಿಂದ ಉತ್ತರ ಕರ್ನಾಟಕ ಹಿಂದುಳಿದಿದೆ ಎಂಬ ಅನುಕಂಪದ ಮಾತುಗಳು ಬಿಟ್ಟರೆ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸಿಲ್ಲ. ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಾದರೂ ಪೀಠ ಸ್ಥಾಪನೆಗೆ ವಕೀಲರ ಒಮ್ಮತ ಇದೆ. ಸೂಕ್ತ ಸ್ಥಳವನ್ನು ಆಯ್ಕೆ ಮಾಡುವುದು ಸರ್ಕಾರ ಹಾಗೂ ನ್ಯಾಯಾಲಯಕ್ಕೆ ಬಿಟ್ಟ ವಿಚಾರವೆಂದರು'. ಹುಬ್ಬಳ್ಳಿ ವಕೀಲರ ಸಂಘದ ಅಧ್ಯಕ್ಷರಾಗಿದ್ದ ಸಿ.ಆರ್.ಪಾಟೀಲ್ ಅವರು 'ಪೀಠ ಸ್ಥಾಪನೆ ನ್ಯಾಯಮೂರ್ತಿ ಚಂದ್ರಶೇಖರ್ ನೀಡಿರುವ ವರದಿ ಅಂತಿಮ. ಪೀಠ ಸ್ಥಾಪನೆ ವಿಳಂಬ ಆಗಿರುವುದರಿಂದಲೇ ಪ್ರತ್ಯೇಕ ರಾಜ್ಯ ಕೂಗು ಎದ್ದಿದೆ. ಉತ್ತರ ಕರ್ನಾಟಕದ ಜನರ ಬಾವನಾತ್ಮಕ ಬೇಡಿಕೆಗಳಿಗೆ ಸರಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಪೀಠ ಸ್ಥಾಪನಗೆ ಆಗ್ರಹಿಸಿ ರಾಷ್ಟ್ರಪತಿ ಪ್ರಧಾನಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಬಳಿಗೆ ರಾಜ್ಯ ಸರಕಾರ ನಿಯೋಗ ಕೊಂಡೊಯ್ಯಬೇಕು' ಎಂದು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು[೫೨].

೩೦.೦೮.೨೦೦೪ರಂದು ಉತ್ತರ ಕರ್ನಾಟಕದಲ್ಲಿ ಪೀಠ ಸ್ಥಾಪನೆಗೆ ಬದ್ಧವಾಗಿದ್ದ ಸರ್ಕಾರ ಅದಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯ ಒದಗಿಸಲು ಸರಕಾರ ಸಿದ್ಧವಿದೆ ಎಂದು ಹೇಳುತ್ತಿದ್ದ ಧರ್ಮಸಿಂಗ್ ಸರಕಾರ ಸಂಪುಟ ಸಭೆಯಲ್ಲಿ ಪೀಠ ಕೊಡುವುದಿಲ್ಲ ಎಂದು ಘೋಷಿಸಿದರು. ಇದು ಚಳವಳಿಕಾರರಿಗೆ ತೀವ್ರ ಅಸಮಾಧಾನವನ್ನು ಉಂಟುಮಾಡಿತು. ಕೇವಲ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಈ ಬೇಡಿಕೆ ಬೇಡಿಕೆಯಾಗಿಯೇ ಉಳಿದುಕೊಂಡಿತ್ತು.

ಈ ಬೇಡಿಕೆಯು ಬೇಡಿಕೆಯಾಗಿಯೇ ಉಳಿದುಕೊಳ್ಳುತ್ತದೆ ಎನ್ನುವಷ್ಟರಲ್ಲಿ ಅಂದಿನ ಮುಖ್ಯಮಂತ್ರಿ ಧರ್ಮಸಿಂಗ್ ಅವರು ನ್ಯಾಯಮೂರ್ತಿ ಜೈನ್ ನಿವೃತ್ತರಾಗಲು ಕೆಲವೇ ದಿನಗಳಿರುವಾಗ ಅವರನ್ನು ಭೇಟಿಯಾಗಿ ಜನಪರ ಬೇಡಿಕೆಗಳಿಗೆ ಸ್ಪಂದಿಸುವಂತೆ ಮಾಡಿದರು. ಅದರ ಪರಿಣಾಮವಾಗಿ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ೨೦೦೪ ಅಕ್ಟೋಬರ್‌ನಲ್ಲಿ ಧಾರವಾಡದಲ್ಲಿ ಮತ್ತು ಕಲಬುರ್ಗಿಗಳಲ್ಲಿ ಸಂಚಾರಿ ಪೀಠ ಸ್ಥಾಪಿಸುವ ನಿರ್ಧಾರವನ್ನು ಮಾಡಿ ಅಧಿಕೃತ ಪ್ರಕಟಣೆಯನ್ನು ಹೊರಡಿಸಿದರು. ಇದನ್ನು ಮುಂದುವರೆಸಿದವರು ನ್ಯಾಯಮೂರ್ತಿ ಸಿರಿಯಾಕ್ ಜೋಸೆಫ್ ಅವರು. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳೆಂದು ಪದ ಸ್ವೀಕಾರ ಮಾಡಲು ಕರ್ನಾಟಕವನ್ನು ಬಿಡುವ ಮೊದಲು ಎರಡು ಪೀಠಗಳ ಕಾರ್ಯಾಚರಣೆಯನ್ನು ಅನೇಕ ಅಡೆತಡೆಗಳ ನಡುವೆ ನೆರವೇರಿಸಿ ಜನರ ಮನಸ್ಸಿನಲ್ಲಿ ಮತ್ತು ಕರ್ನಾಟಕದ ಚರಿತ್ರೆಯಲ್ಲಿ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡು ಕರ್ನಾಟಕದಿಂದ ನಿರ್ಗಮಿಸಿದರು.

ಹೈಕೋರ್ಟ್ ಸಂಚಾರಿ ಪೀಠಗಳನ್ನು ಸ್ಥಾಪಿಸುವ ಕುರಿತು ನಡೆದ ವಿಳಂಬವನ್ನು ಖಂಡಿಸಿ ಧಾರವಾಡದಲ್ಲಿ ಮಾರ್ಚ್ ೧೮, ೨೦೦೫ರಂದು "ಬಂದ್" ಆಚರಿಸಲಾಯಿತು. ಧಾರವಾಡ ವಕೀಲರ ಸಂಘದ ಅಧ್ಯಕ್ಷರಾದ ಬಿ.ಡಿ.ಹಿರೇಮಠ ಮತ್ತು ಪ್ರಫುಲ್ಲಾ ನಾಯಕ್ ಇವರು ಉಪವಾಸ ಸತ್ಯಾಗ್ರಹ ೧೧ನೇ ದಿನಕ್ಕೆ ಕಾಲಿಟ್ಟಿತ್ತು. ಈ ಚಳವಳಿಗೆ ಸಂಬಂಧಿಸಿದಂತೆ ಮಾನವ ಸರಪಳಿಯನ್ನು ಆಲೂರು ವೆಂಕಟರಾವ್ ವೃತ್ತದಲ್ಲಿ ನಿರ್ಮಿಸಲಾಯಿತು.[೫೩]

ಬಿ.ಡಿ.ಹಿರೇಮಠ ಅವರು ಉಪವಾಸ ಸತ್ಯಗ್ರಹವನ್ನು ಕೈಬಿಡುವಂತೆ ಮನವೊಲಿಸಲು ಅಂದಿನ ಮುಖ್ಯಮಂತ್ರಿ ಧರ್ಮಸಿಂಗ್ ಅವರು ಪ್ರಯತ್ನಿಸಿದರು. ಆದರೆ ಬಿ.ಡಿ.ಹಿರೇಮಠ ಅವರು ಇದಕ್ಕೆ ಒಪ್ಪಲಿಲ್ಲ.[೫೪]

ಕರ್ನಾಟಕ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಸೋಧಿ ಅವರು ಮೂರು ಜನ ನ್ಯಾಯಮೂರ್ತಿಗಳ ಸಮಿತಿಯನ್ನು ನೇಮಕ ಮಾಡಿ ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿಗೆ ಭೇಟಿ ನೀಡಿ ವರದಿಯನ್ನು ಸಲ್ಲಿಸಲು ನಿಯೋಜಿಸಲಾಗಿತ್ತು. ಅದರಂತೆ ಸಮಿತಿಯು ಸೂಚಿಸಿದ ಎಲ್ಲ ಸ್ಥಳಗಳಿಗೆ ಭೇಟಿ ನೀಡಿ ತನ್ನ ವರದಿಯನ್ನು ಸಲ್ಲಿಸಿತು. ನಂತರ ಮುಖ್ಯನ್ಯಾಯಮೂರ್ತಿ ಎನ್.ಕೆ.ಸೋಧಿ ಅವರು ಧಾರವಾಡದಲ್ಲಿ ೧೪.೦೮.೨೦೦೫ರಂದು ಮತ್ತು ಗುಲ್ಬರ್ಗಾದಲ್ಲಿ ೧೮.೦೯.೨೦೦೫ರಂದು ಹೈಕೋರ್ಟ್ ಸಂಚಾರಿ ಪೀಠಕ್ಕೆ ಶಂಕುಸ್ಥಾಪನೆ ಮಾಡಿದರು[೫೫].

೨೦೦೫ ಆಗಸ್ಟ್ ೧೪ರಂದು ಧಾರವಾಡದಿಂದ ಸುಮಾರು ೧೨ ಕಿ,ಮೀ ಅಂತರದಲ್ಲಿರುವ "ವಾಲ್ಮಿ" (ವಾಟರ್ ಅಂಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್) ಪ್ರಾಂಗಣದಲ್ಲಿ ಹೈಕೋರ್ಟ್‌ನ ಸಂಚಾರಿ ಪೀಠದ ಕಟ್ಟದ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಯಿತು. ಕಟ್ಟಡ ಕಾಮಗಾರಿ ವಿಳಂಬವಾಗಬಹುದು ಎಂದು ಜಿಲ್ಲಾ ನ್ಯಾಯಾಲಯದಲ್ಲಿ ಸಂಚಾರಿ ಪೀಠದ ಕಾರ್ಯಕಲಾಪ ಆರಂಭಕ್ಕೆ ನ್ಯಾಯಮೂರ್ತಿ ಎಸ್.ಆರ್.ಬನ್ನೂರ ಮಠ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಕಾರ್ಯಕಲಾಪ ಆರಂಭಿಸಲು ಸಮಿತಿ ಸಹ ಸಮ್ಮತಿ ಸೂಚಿಸಿತ್ತು. ಆದರೆ ಅಷ್ಟರೊಳಗೆ ಕಟ್ಟಡ ಕಾಮಗಾರಿ ಮುಕ್ತಾಯದ ಹಂತ ಬಂದಿದ್ದರಿಂದ ಜುಲೈ ೪, ೨೦೦೮ ರಂದು ಧಾರವಾಡ ಸಂಚಾರಿ ಪೀಠದ ಉದ್ಘಾಟನೆಯಾಯಿತು.

೩.೩.೨. ಧಾರವಾಡ ಸಂಚಾರಿ ಪೀಠದ ವೈಶಿಷ್ಟತೆಗಳು

೧. ೪೬ ಎಕರೆಗಳ ವಿಶಾಲ ಪ್ರದೇಶದಲ್ಲಿ ರೂ.೧೧೫ ಕೋಟಿ ವೆಚ್ಚದಲ್ಲಿ ಆಕರ್ಷಕ ವಾಸ್ತು ವಿನ್ಯಾಸದೊಂದಿಗೆ ಸುಂದರ ಸೌಧ ಮತ್ತು ಈ ಆವರಣದಲ್ಲಿ ಎಲ್ಲಾ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ.

೨. ಪೀಠದ ಕಾರ್ಯವ್ಯಾಪ್ತಿ ಜಿಲ್ಲೆಗಳು ಧಾರವಾಡ, ಗದಗ, ಹಾವೇರಿ, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ಉತ್ತರ ಕನ್ನಡ.

೩. ಸಾರ್ವಜನಿಕ ಹಿತಾಸಕ್ತಿ ಮತ್ತು ಕಂಪನಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ರೀತಿಯ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುವುದು.

೪. ಈ ಪ್ರದೇಶಕ್ಕೆ ಸಂಬಂಧಿಸಿದ ೨೨,೦೦೦ ಪ್ರಕರಣಗಳನ್ನು ಬೆಂಗಳೂರಿನ ಹೈಕೋರ್ಟ್‌ನಿಂದ ಧಾರವಾಡ ಪೀಠಕ್ಕೆ ವರ್ಗಾವಣೆ ಮಾಡಲಾಗಿದೆ.[೫೬]

ಗುಲ್ಬರ್ಗ ಹೈಕೋರ್ಟ್ ಸಂಚಾರಿ ಪೀಠವು ಗೋಥಿಕ್ ಶೈಲಿಯಲ್ಲಿದ್ದು (ಹೈಕೋರ್ಟ್ ಮಾದರಿ) ಗುಲ್ಬರ್ಗದ ಹೊರವಲಯದ ಅಫಜಲ್‌ಪುರ ರಸ್ತೆಯಲ್ಲಿ ೫೫ ಎಕರೆ ಜಾಗದಲ್ಲಿ ರೂ. ೬೫.೪೫ ಕೋಟಿ ವೆಚ್ಚದಲ್ಲಿ ಸಂಚಾರಿ ಪೀಠದ ಭವ್ಯ ಕಟ್ಟಡ ತಲೆ ಎತ್ತಿ ನಿಂತಿದೆ. ಹೆಚ್ಚುವರಿಯಾಗಿ ಮತ್ತೆ ಮೂರು ಎಕರೆ ಭೂಮಿ ಪಡೆದುಕೊಳ್ಳಲಾಗಿದೆ. ಗುಲ್ಬರ್ಗಾ ಪೀಠದ ಕಾಮಗಾರಿಯ ಟೆಂಡರ್ ಶೀಘ್ರ ಅಂತಿಮಗೊಳಿಸಲು ಆಗದಿದ್ದುದರಿಂದ ಹುಬ್ಬಳ್ಳಿ–ಧಾರವಾಡ ಸಂಚಾರಿ ಪೀಠ ಕಾಮಗಾರಿ ಆರಂಭವಾದ ಮೂರು ತಿಂಗಳ ಬಳಿಕ ಆರಂಭಿಸಲಾಗಿದ್ದು. ಅಂದಾಜು ವೆಚ್ಚ ರೂ.೧೦೧ ಕೋಟಿ ಗೆ ಏರಿತು. ಒಟ್ಟು ೧೧ ಕೋರ್ಟ್ ಹಾಲ್‌ಗಳಲ್ಲಿ ಸದ್ಯ ಕಾರ್ಯಕಲಾಪಕ್ಕೆ ಅಗತ್ಯವಿರುವ ಆರು ಕೋರ್ಟ್ ಹಾಲ್ ಆರು ನ್ಯಾಯಾಧೀಶರ ವಸತಿ ಗೃಹ, ಎರಡು ಗೆಸ್ಟ್ ಹೌಸ್, ೫೦ ಸಿಬ್ಬಂದಿ ವಸತಿ ಗೃಹ ಪೂರ್ಣಗೊಂಡಿದ್ದು. ಬೆಂಗಳೂರು ಹೈಕೋರ್ಟ್‌ನ ಎಲ್ಲ ಸೌಲಭ್ಯಗಳು ಗುಲ್ಬರ್ಗ ಸಂಚಾರಿ ಪೀಠದಲ್ಲಿ ದೊರೆತಿವೆ.

೩.೩.೩. ಗುಲ್ಬರ್ಗ ಸಂಚಾರಿ ಪೀಠದ ವೈಶಿಷ್ಟತೆಗಳು

೧. ಗುಲ್ಬರ್ಗ ಸಂಚಾರಿ ಪೀಠದ ಕಟ್ಟಡದ ಕಾಮಗಾರಿ ಅಂದಾಜು ವೆಚ್ಚ ರೂ ೧೦೧ ಕೋಟಿಗೆ ಏರಿದೆ ಮತ್ತು ಈ ಪೀಠದ ವ್ಯಾಪ್ತಿಗೆ ಬೀದರ್, ಗುಲ್ಬರ್ಗ, ರಾಯಚೂರು ಹಾಗೂ ಬಿಜಾಪುರ ಜಿಲ್ಲೆಗಳು ಒಳಪಟ್ಟಿವೆ.

೨. ಹೈಕೋರ್ಟ್‌ನಲ್ಲಿರುವ ಈ ಜಿಲ್ಲೆಗಳ ೧೦೦೦೦ ಪ್ರಕರಣಗಳನ್ನು ಗುಲ್ಬರ್ಗ ಸಂಚಾರಿ ಪೀಠಕ್ಕೆ ವರ್ಗಾಯಿಸಲಾಗಿದೆ.

೩. ಜುಲೈ ೭, ೨೦೦೮ರಿಂದ ಸಂಚಾರಿ ಪೀಠದ ಕಲಾಪಗಳು ನಡೆದು ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯಗಳು ಕಂಪನಿ ತಕರಾರು ಅರ್ಜಿ ಕಂಪನಿ ಮೇಲ್ಮನವಿ ಹೊರತುಪಡಿಸಿ ಉಳಿದ ಪ್ರಕರಣಗಳ ವಿಚಾರಣೆ ನಡೆಯುತ್ತವೆ[೫೭].

೪. ಗುಲ್ಬರ್ಗಕ್ಕೆ ಐವರು ನ್ಯಾಯಮೂರ್ತಿಗಳು ಹಾಗೂ ೨೦೦ ಸಿಬ್ಬಂದಿಯನ್ನು ನೇಮಕ ಮಾಡಲಾಗಿದ್ದು. ಒಂದು ದ್ವಿಸದಸ್ಯ ವಿಭಾಗೀಯ ನ್ಯಾಯಪೀಠ ಹಾಗೂ ಮೂರು ಏಕ ಸದಸ್ಯ ನ್ಯಾಯಪೀಠಗಳು ಕಾರ್ಯ ನಿರ್ವಹಿಸುತ್ತವೆ. ವಾರದಲ್ಲಿ ಐದು ದಿನ ಪೀಠದ ಕಲಾಪ ನಡೆದು ಹಳೆಯ ಪ್ರಕರಣಗಳ ವಿಲೇವಾರಿ ಹಾಗೂ ಇತ್ಯರ್ಥಕ್ಕೆ ಆದ್ಯತೆ ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೧. ಕರ್ಮವೀರ, ೨೧.೦೯.೨೦೦೩
೨. ಸಂಯುಕ್ತ ಕರ್ನಾಟಕ, ೨೪.೦೧.೨೦೦೩
೩. ಅದೇ ಪುಟ
೪. ಕರ್ಮವೀರ, ೨೧.೦೯.೨೦೦೩
೫. ಅದೇ ಪುಟ ೧೩
೬ ಪ್ರಜಾವಾಣಿ, ೧೮.೧.೨೦೦೨
೭ ಅದೇ ಪುಟ
೮. ವಿಜಯ ಕರ್ನಾಟಕ, ೨೯.೦೩.೨೦೦೨
೯. ಅದೇ ಪುಟ
೧೦. ವಿಶ್ವಕರ್ಮ, ೪.೦೪.೨೦೦೨
೧೧. ಸಂಯುಕ್ತ ಕರ್ನಾಟಕ, ೧೦.೦೭.೨೦೦೨
೧೨. ಸಂಯುಕ್ತ ಕರ್ನಾಟಕ, ೨೭.೦೪.೨೦೦೨
೧೩. ಅದೇ ಪುಟ
೧೪. ಸಂಯುಕ್ತ ಕರ್ನಾಟಕ, ೧೨.೦೯.೨೦೦೨
೧೫. ವಿಜಯ ಕರ್ನಾಟಕ, ೦೧.೧೦.೨೦೦೨
೧೬. ಅದೇ ಪುಟ
೧೭. ಕನ್ನಡಪ್ರಭ, ೦೪.೧೨.೨೦೦೨
೧೮. ಅದೇ ಪುಟ
೧೯. ಸಂಯುಕ್ತ ಕರ್ನಾಟಕ, ೨೫.೦೧.೨೦೦೩
೨೦. ಅದೇ ಪುಟ
೨೧. ಕನ್ನಡಪ್ರಭ, ೨೨.೦೨.೨೦೦೩
೨೨. ಪ್ರಜಾವಾಣಿ, ೧೭.೦೩.೨೦೦೩
೨೩. ವಿಜಯ ಕರ್ನಾಟಕ, ೧೭.೦೩.೨೦೦೩
೨೪. ಅದೇ ಪುಟ
೨೫. ಅದೇ ಪುಟ
೨೬. ಉದಯವಾಣಿ, ೨೪.೦೩.೨೦೦೩
೨೭. ಸಂಯುಕ್ತ ಕರ್ನಾಟಕ, ೦೭.೦೩.೨೦೦೩
೨೮. ವಿಜಯ ಕರ್ನಾಟಕ, ೨೨.೦೪.೨೦೦೩
೨೯. ಹೈಕೋರ್ಟ್ ಪೀಠ ವಿಶೇಷಾಂಶ ೦೪.೦೭.೨೦೦೮
೩೦. ವಿಜಯ ಕರ್ನಾಟಕ, ೧೩.೦೮.೨೦೦೩
೩೧. ಕನ್ನಡಪ್ರಭ, ೧೫.೦೮.೨೦೦೩
೩೨. ಅದೇ ಪುಟ

೩೩. ಪ್ರಜಾವಾಣಿ, ೨೪.೦೮.೨೦೦೩

೩೪. ಪ್ರಜಾವಾಣಿ, ೩೧.೦೮.೨೦೦೩

೩೫. ವಿಜಯ ಕರ್ನಾಟಕ, ೨೪.೦೮.೨೦೦೩

೩೬. ಕನ್ನಡಪ್ರಭ, ೩೦.೦೮.೨೦೦೩

೩೭. ಅದೇ ಪುಟ

೩೮. ಅದೇ ಪುಟ

೩೯. ಅದೇ ಪುಟ

೪೦. ದಿ ಹಿಂದು ಇಂಗ್ಲೀಷ್ ದಿನಪತ್ರಿಕೆ ೪.೦೯.೨೦೦೩

೪೧. ಪ್ರಜಾವಾಣಿ, ೦೨.೦೯.೨೦೦೪

೪೨. ಅದೇ ಪುಟ

೪೩. ಅದೇ ಪುಟ

೪೪. ಕನ್ನಡಪ್ರಭ, ೦೭.೦೯.೨೦೦೪

೪೫. ಸಂಯುಕ್ತ ಕರ್ನಾಟಕ, ೦೯.೦೯.೨೦೦೪

೪೬. ಅದೇ ಪುಟ

೪೭. ಅದೇ ಪುಟ

೪೮. ವಿಜಯ ಕರ್ನಾಟಕ, ೦೯.೦೯.೨೦೦೪

೪೯. ಪ್ರಜಾವಾಣಿ, ೦೬.೦೯.೨೦೦೪

೫೦. ವಿಜಯ ಕರ್ನಾಟಕ, ೧೪.೦೯.೨೦೦೪

೫೧. ಅದೇ ಪುಟ

೫೨. ಸಂಯುಕ್ತ ಕರ್ನಾಟಕ, ೧೩.೦೯.೨೦೦೪

೫೩. ದಿ ಹಿಂದು ಇಂಗ್ಲೀಷ್ ದಿನಪತ್ರಿಕೆ ೧೯.೦೩.೨೦೦೫

೫೪. ದಿ ಹಿಂದು ಇಂಗ್ಲೀಷ್ ದಿನಪತ್ರಿಕೆ ೨೧.೦೩.೨೦೦೫

೫೫. ಸಂಯುಕ್ತ ಕರ್ನಾಟಕ, ೦೫.೦೭.೨೦೦೮

೫೬. ಪ್ರಜಾವಾಣಿ, ೦೮.೦೭.೨೦೦೮

* * *

ಕೃತಜ್ಞತೆ

"ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠಕ್ಕಾಗಿ ನಡೆದ ಚಳವಳಿಗಳು: ಚಾರಿತ್ರಿಕ ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಒಪ್ಪಿಸಲು ಅವಕಾಶ ಕಲ್ಪಿಸಿಕೊಟ್ಟ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಹಾಗೂ ಕುಲಸಚಿವರಾದ ಎಸ್.ಎಸ್.ಪೂಜಾರ್ ಅವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುವೆ.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಸಲಹೆ, ಸಹಕಾರ ನೀಡಿದ ಅಧ್ಯಯನಾಂಗದ ನಿರ್ದೇಶಕರಿಗೆ ಹಾಗೂ ನನಗೆ ನಿಬಂಧದ ವಿಷಯ ಸೂಚಿ ಅಧ್ಯಯನದ ಕ್ರಮವನ್ನು ಭೋದಿಸಿ, ಪ್ರೀತಿಯಿಂದ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ, ಸಹಕಾರ ಪ್ರೇರಣೆಗಳನ್ನು ಅತ್ಯಂತ ಆತ್ಮೀಯವಾಗಿ ಮಾರ್ಗದರ್ಶನ ನೀಡಿದ ಹಾಗೂ ಮುಖ್ಯಸ್ಥರಾದ ಡಾ.ವಿರೂಪಾಕ್ಷ ಪೂಜಾರ ಹಳ್ಳಿ ಅವರಿಗೆ ನನ್ನ ಮನಃಪೂರ್ವಕ ಧನ್ಯವಾದಗಳು ಮತ್ತು ನನ್ನ ಅಧ್ಯಯನದ ಸಂರ್ಧದಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಪ್ರೊ.ಟಿ.ಪಿ.ವಿಜಯ್, ಡಾ. ಕೆ. ಮೋಹನ್‌ಕೃಷ್ಣ ರೈ., ಪ್ರೊ.ಸಿ.ಆರ್ ಗೋವಿಂದರಾಜು, ಡಾ.ಚಿನ್ನಸ್ವಾಮಿ ಸೋಸಲೆ ಅವರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುವೆ.

ಮಗಳ ಓದನ್ನು ಮತ್ತು ಏಳ್ಗೆಯನ್ನು ಬಯಸುತ್ತಿರುವ ತಂದೆಯಾದ ಎನ್. ಕಲ್ಲಪ್ಪ ತಾಯಿಯಾದ ಎನ್.ಶಕುಂತಲಮ್ಮ ಅವರಿಗೆ ಹೃದಯ ಪೂರ್ವಕ ಪ್ರಣಾಮಗಳು. ನನ್ನ ಓದಿಗೆ ಸೂಕ್ತ ಪ್ರೇರಣೆ, ಸಹಕಾರ, ಪ್ರೋತ್ಸಾಹ, ಶ್ರೇಯಸ್ಸನ್ನು ಬಯಸುತ್ತಿರುವ ಅಕ್ಕ ಎಚ್. ಜಯಶ್ರೀ, ಅಣ್ಣಂದಿರಾದ ಎನ್.ಜಯಪ್ರಕಾಶ, ಎನ್. ಆನಂದ ವಂದನೆಗಳನ್ನು ಅರ್ಪಿಸುವೆ

ಪುಸ್ತಕ ಸೌಲಭ್ಯಗಳನ್ನು ಒದಗಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಗಳಿಗೆ, ಮತ್ತು ಇತರ ಸಿಬ್ಬಂದಿ ವರ್ಗದ ಸಹಕಾರವನ್ನು ಈ ಸಂರ್ಧದಲ್ಲಿ ನೆನೆಯುತ್ತೇನೆ.

ಸ್ನೇಹಿತರಾಗಿ, ಹಿತೈಷಿಗಳಾಗಿ ಎಂದಿಗೂ ನನ್ನ ಏಳಿಗೆಯನ್ನು ಬಯಸುತ್ತಿರುವ ಹಾಗೂ ನನಗೆ ಸಹಕಾರ ನೀಡಿದ ಆಪ್ತ ಸ್ನೇಹಿತೆಯರಾದ ವಿ.ಸುನಿತಾ ಮತ್ತು ರಮಾದೇವಿ ಹಾಗೂ ನನ್ನ ವಿಭಾಗದ ಸಹ ಸಂಶೋಧಕರಾದ ನನ್ನ ಸ್ನೇಹಿತರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚರಿತ್ರೆ ವಿಭಾಗದ ಆಡಳಿತ ಸಿಬ್ಬಂದಿಯಾದ ಗಂಗಾಧರ ಮತ್ತು ಪ್ರೀತಿಯಿಂದ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಗುರು ಮೌನೇಶ್ವರ ಗ್ರಾಫಿಕ್ಸ್‌ನ ನಾಗರಾಜ ಬಡಿಗೇರ ಅವರುಗಳನ್ನು ಸ್ಮರಿಸಿಕೊಳ್ಳುತ್ತೇನೆ.

ಹೇಮಾ.ಎನ್

[illegible]

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ–೪

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠದ ಚಳವಳಿಗಳ ಸ್ವರೂಪ

ಅಧ್ಯಾಯ–೪

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ (ಸಂಚಾರಿ) ಪೀಠದ ಚಳವಳಿಗಳ ಸ್ವರೂಪ

ಅಥಣಿ, ಬೀದರ್, ಭಟ್ಕಳ ಮುಂತಾದ ಕಡೆಗಳಿಂದ ಬರುವ ಬಡಕಕ್ಷಿದಾರರಿಗೆ ಬೆಂಗಳೂರು ಬಹುದೂರ. ಆ ದೂರ ಅಲ್ಲಗಳೆಯಲಾರದ ಸತ್ಯ. ಅಲ್ಲಿಯೇ ಧಾರವಾಡ ಅಥವಾ ಬೆಳಗಾವಿ ಇಲ್ಲವೇ ಗುಲ್ಬರ್ಗಾದಲ್ಲಿ ಒಂದು ನ್ಯಾಯ ಪೀಠವಾದರೆ ಬಡಕಕ್ಷಿದಾರರಿಗೆ ಖರ್ಚು ಕಡಿಮೆಯಾಗುತ್ತದೆ. ಎನ್ನುವುದು ಚಳವಳಿಗಾರರ ವಿಚಾರವಾಗಿತ್ತು.

ಧಾರವಾಡದಲ್ಲಿ ಹೈಕೋರ್ಟ್‌ನ ನ್ಯಾಯಪೀಠವೊಂದನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸುವುದಾಗಿಯೂ ಕೇಂದ್ರ ಕಾನೂನು ಮಂತ್ರಿಗಳು ಅದಕ್ಕೆ ಒಪ್ಪಿರುವುದಾಗಿಯೂ ರಾಜ್ಯದ ಕಾನೂನು ಮಂತ್ರಿಗಳು ಹೇಳಿದ್ದಾರೆ ಎಂದು ತಿಳಿದ ಹಿರಿಯ ವಕೀಲರೊಬ್ಬರು ಇದು ಸರಿಯಾದ ಕ್ರಮವೇ? ಇದರಿಂದ ಎರಡು ಕರ್ನಾಟಕಕ್ಕೆ ದಾರಿ ಆಗುವುದಿಲ್ಲವೇ? ಎಂದು ಹೇಳಿದ್ದರು ಎರಡು ಕರ್ನಾಟಕ ಆದರೆ ತಪ್ಪೇನು? ಎರಡು ವಿಧಾನಸಭೆಗಳು, ಮಂತ್ರಿಮಂಡಲಿಗಳು, ಇಬ್ಬರು ಮುಖ್ಯಮಂತ್ರಿಗಳು ಇಬ್ಬರು ಶ್ರೇಷ್ಠ ನ್ಯಾಯಮೂರ್ತಿಗಳು, ಹೀಗೆ ಎರಡು ಕರ್ನಾಟಕಗಳೋ ಹತ್ತು ಕರ್ನಾಟಕಗಳೋ ಅದು ಮುಖ್ಯವಲ್ಲ. ಗಾಂಧೀಜಿ ಇದಕ್ಕೆಲ್ಲ ಒಂದು ತಾರಕ ಮಂತ್ರ ಹೇಳುತ್ತಿದ್ದರು ಮಾಡಲಿರುವ ಕೆಲಸದಿಂದ ಬಡವರಿಗೆ ಒಳ್ಳೆಯದಾಗುತ್ತಿದ್ದರೆ ಅದು ಒಳ್ಳೆಯ ಕೆಲಸ[೧].

ಮತ್ತೊಂದು ಪೀಠದ ಲಾಭವನ್ನು ಬಡಜನರು ಪಡೆದುಕೊಳ್ಳುವುದು ಮುಖ್ಯವಾಗಿರುತ್ತದೆ. ಏಕೆಂದರೆ ಅನ್ಯಾಯಕ್ಕೆ ತುತ್ತಾಗುವ ಜನರಲ್ಲಿ ೯೦ರಷ್ಟು ಜನರು ಬಡವರಾಗಿರುತ್ತಾರೆ. ಇವರಿಗೆ ಕಡಿಮೆ ಖರ್ಚಿನಲ್ಲಿ ಶೀಘ್ರ ನ್ಯಾಯ ದೊರೆಯುವುದು ಮುಖ್ಯವಾಗಿರುತ್ತದೆ. ನ್ಯಾಯಪರಿಪಾಲನೆಯ ಉದ್ದೇಶ ಸೂಕ್ತ ನ್ಯಾಯ ದಾನ ಮಾಡುವುದು. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಅನ್ಯಾಯಕ್ಕೆ ಬಲಿಯಾದ ಬಡಜನರಿಗೆ ನ್ಯಾಯ ಒದಗಿಸುವುದಾಗಿರುತ್ತದೆ.

ಮತ್ತೊಂದು ದೃಷ್ಟಿಕೋನದಿಂದ ನೋಡಿದರೆ ಕಕ್ಷಿದಾರರಿಗೆ ಸ್ವಲ್ಪ ಕಾಲ ಇನ್ನೂ ಹೆಚ್ಚು ಖರ್ಚು ತಗುಲುವುದು. ಈಗ ಬೆಂಗಳೂರಿನಲ್ಲಿರುವ ಕೇಸುಗಳಿಗೆ ಬೆಂಗಳೂರು ವಕೀಲರನ್ನು ನೇಮಕ ಮಾಡಿಕೊಂಡು ಆಗಲೇ ಫೀಜು ಕೊಟ್ಟಿರುತ್ತಾರೆ. ಮತ್ತೆ ಧಾರವಾಡಕ್ಕೆ ಅಥವಾ ಗುಲ್ಬರ್ಗಾಕ್ಕೆ ಆ ಪ್ರಕರಣವು ವರ್ಗಾವಣೆಯಾಗಿ

[illegible]

[illegible]

[illegible]

[illegible]

[illegible]

[illegible]

[illegible]

ಅಂಥ ಕೇಸುಗಳ ವಿಚಾರಣೆ ಆಗುವುದಾದರೆ ಈ ವಕೀಲರನ್ನು ಅಲ್ಲಿಗೆ ಕರೆದುಕೊಂಡು ಹೋಗಬೇಕು. ಇಲ್ಲವೇ ಮತ್ತೊಬ್ಬ ವಕೀಲರನ್ನು ನೇಮಿಸಿಕೊಂಡು ಅವರಿಗೆ ಮತ್ತೇ ಪ್ರತ್ಯೇಕ ಫೀಜು ಕೊಡಬೇಕು. ಈಗಾಗಲೇ ಫೀಜು ಪಡೆದ ವಕೀಲರು ಕಕ್ಷಿದಾರರ ಹಣವನ್ನು ವಾಪಸ್ಸು ಕೊಡವರೇ? ಅಂದರೆ ಯಾವ ಪ್ರಜೆಗೆ ಪ್ರಯೋಜನವಾಗಬೇಕೆಂದು ಹಣದ ಹೊರೆ ಹಗುರವಾಗಬೇಕೆಂದು ಇನ್ನೊಂದು ಪೀಠದ ಸ್ಥಾಪನೆಯಿಂದ ಇಂಥ ಸ್ಥಿತಿ ಪ್ರಸ್ತುತ ಕೆಲವು ಕಾಲ ಇರುತ್ತದೆ ಎಂಬುದಂತೂ ಸರಿ. ನಾಲ್ಕಾರು ವರ್ಷಗಳಲ್ಲಿ ಇಂಥ ಪರಿಸ್ಥಿತಿ ಇರಲಾರದು. ಈ ಕಷ್ಟವನ್ನು ಇಂಥ ಬದಲಾವಣೆಯ ಕಾಲದಲ್ಲಿ ಎಲ್ಲರೂ ಅನುಭವಿಸಲೇಬೇಕು. ಬರಬಹುದಾದ ತಾತ್ಕಾಲಿಕ ಕಷ್ಟಗಳಿಗೆ ಅಂಜಿ ಶಾಶ್ವತ ಪ್ರಯೋಜನವನ್ನು ತಳ್ಳಿಹಾಕಬಾರದು. ಜಲಾಶಯ ನಿರ್ಮಾಣದಿಂದ ಕೆಲವು ಹಳ್ಳಿಗಳೇ ಮುಳುಗುತ್ತವೆ ಅಂದಮಾತ್ರಕ್ಕೆ ಜಲಾಶಯವನ್ನೇ ಕೈಬಿಡಲಾಗದು.

ಹಾಗಾದರೆ ಉಚ್ಚ ನ್ಯಾಯಾಲಯದ ಮತ್ತೊಂದು ನ್ಯಾಯಪೀಠ ಸ್ಥಾಪನೆಯಿಂದ ಶಾಶ್ವತ ಪ್ರಯೋಜನ, ಅಂದರೆ (ತೃಪ್ತಿಕರವಾದ 'ನ್ಯಾಯದಾನ') ಎಂದು ಎಂಥಾದ್ದಕ್ಕೆ ಕರೆಯುತ್ತಾರೆ? ಮೊಕದ್ದಮೆಯ ಇಬ್ಬರು ಕಕ್ಷಿದಾರರಿಗೂ ತೃಪ್ತಿಯನ್ನು ಕೊಡುವುದು ಎಂಥ ನ್ಯಾಯಪದ್ಧತಿಯಲ್ಲೂ ಸಾಧ್ಯವಿಲ್ಲ. ಸಾಧ್ಯವಾದಷ್ಟು ಸರಿಯಾದ ನಿರ್ಣಯವನ್ನು ನ್ಯಾಯವಿದ್ದ ಪಕ್ಷಕ್ಕೆ ದಾನ ಮಾಡುವುದು ತೃಪ್ತಿಕರವಾದ ನ್ಯಾಯ ಪರಿಪಾಲನೆ ಎಂದು ಸ್ಥೂಲವಾಗಿ ಇಟ್ಟುಕೊಳ್ಳಬಹುದು. ಈ ಉದ್ದೇಶ ಈಡೇರಿದರೆ ಮತ್ತೊಂದು ನ್ಯಾಯಪೀಠ ಸ್ಥಾಪಿಸುವುದು ಸರ್ವಥಾ ಯೋಗ್ಯ[೨].

ಕರ್ನಾಡಕದ ಏಕೀಕರಣ ನಂತರವೂ ಪ್ರಾದೇಶಿಕ ತಾರತಮ್ಯದ ಬಿರುಗಾಳಿಗೆ ಸಿಲುಕಿದ್ದು ಉತ್ತರ ಕರ್ನಾಟಕ ಈಗ ಹೈಕೋರ್ಟ್ ಸಂಚಾರಿ ಪೀಠದ ಸ್ಥಾಪನೆಯಿಂದ ಸ್ವಲ್ಪ ಮಟ್ಟಿನ ನೆಮ್ಮದಿ ಉಂಟಾಗಿದೆ. ಹೈಕೋರ್ಟ್ ಕಾಯಂ ಪೀಠಕ್ಕೆ ಹೋರಾಟ ನಡೆದಿರುವುದು ನಿಜ. ಈಗ ಹುಬ್ಬಳ್ಳಿ-ಧಾರವಾಡದಲ್ಲಿ ಸಂಚಾರಿ ಪೀಠ ಸ್ಥಾಪನೆಯಾಗಿದೆ. ಆದರೆ ಇಲ್ಲಿನ ಜನರ ನಿಜವಾದ ಬೇಡಿಕೆ ಕಾಯಂ ಪೀಠ ಸ್ಥಾಪನೆ ಆಗಿತ್ತು. ರಾಜ್ಯದ ಇತಿಹಾಸದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ಉತ್ತರ ಕರ್ನಾಟಕದಲ್ಲಿ ನಡೆದ ನಿರಂತರ ಚಳವಳಿಯನ್ನು ಪ್ರಮುಖವಾಗಿ ದಾಖಲಿಸುವಂತಹದ್ದು[೩].

ಮುಂಬೈ ಹಾಗೂ ಹೈದ್ರಾಬಾದ್ ಕರ್ನಾಟಕದ ಲಕ್ಷಾಂತರ ಕಕ್ಷಿದಾರರು ಇದುವರೆಗೆ ನ್ಯಾಯಕ್ಕಾಗಿ ಬೆಂಗಳೂರಿಗೆ ಹೋಗಬೇಕಿತ್ತು. ಕಕ್ಷಿದಾರರು ಅದೆಷ್ಟೋ ಸಾರಿ ಬೆಂಗಳೂರಿಗೂ ಬಿಜಾಪುರಕ್ಕೂ, ಗುಲ್ಬರ್ಗಕ್ಕೂ, ಕೊಪ್ಪಳಕ್ಕೂ ಪ್ರಯಾಣ ಮಾಡಿದ್ದುಂಟು. ಸಾಮಾನ್ಯ ಕಕ್ಷಿದಾರನಿಗೆ ಅದೆಷ್ಟು ರೂಪಾಯಿ ವೃಥಾ ಖರ್ಚಾಗಿದ್ದೂ ಉಂಟು. 'ಜನರ ಬಾಗಿಲಿಗೆ ನ್ಯಾಯ' ಎಂಬುದು ಸಾಮಾಜಿಕ ನ್ಯಾಯದ ಆಡುಮಾತು. ನ್ಯಾಯಾಂಗದಲ್ಲೂ ಈ ಆಡುಮಾತು ಸರ್ವೇಸಾಮಾನ್ಯ. ಆದರೆ ಉತ್ತರ ಕರ್ನಾಟಕದ ಜನರು ತಮ್ಮ ಮನೆಬಾಗಿಲಿಗೆ ಹೈಕೋರ್ಟ್ ತೆಗೆದುಕೊಂಡು ಬರಲು ಅದೆಷ್ಟು ಕಷ್ಟಪಡಬೇಕಾಯಿತು. ಸುಧೀರ್ಘ ಚಳವಳಿಯ ಮೂಲಕ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮಾಡಲಾಯಿತು.

ಐತಿಹಾಸಿಕ ಕಾರಣಗಳಿಗಾಗಿ ಈ ಭಾಗದಲ್ಲಿ ಸಂಚಾರಿ ಪೀಠದ ಒತ್ತಾಯ ಶುರುವಾಯಿತು. ಈ ಒತ್ತಾಯದ ಹಿಂದೆ ಈ ಭಾಗದ ಸಾಮಾನ್ಯ ಜನರ ಮೂಲಭೂತ ಬೇಡಿಕೆಯು ಇದೆ. ಅದನ್ನು ರಾಜ್ಯ ಆಡಳಿತ ನಡೆಸುವ ಜನಪ್ರತಿನಿಧಿಗಳು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ಇಂದು ಸುಸಜ್ಜಿತ ಪ್ರಮಾಣದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಿರುವ ಹಿಂದೆ ನೂರಾರು ಸಂಘಟನೆಗಳದ್ರ ಕ್ರಮ

ಇದೆ. ಇಲ್ಲಿ ಪೀಠ ಸ್ಥಾಪನೆಯಾಗುವುದರಿಂದ ಇಲ್ಲಿನ ಜನರಿಗೆ ಅನುಕೂಲ ಆಗಲಿದೆ. ಎಂಬ ನಾಡಿನ ಹಲವಾರು ಚಿಂತಕರ ಒತ್ತಾಯ ಮತ್ತು ಪ್ರತಿಪಾದನೆಯೂ ಸೇರಿದೆ.

ಬೆಂಗಳೂರಿನಿಂದ ಹುಬ್ಬಳ್ಳಿ-ಧಾರವಾಡ ಅಥವಾ ಗುಲ್ಬರ್ಗಕ್ಕೆ ಖಾಯಂ ಪೀಠವಾಗಲಿ ಸಂಚಾರಿ ಪೀಠವಾಗಲಿ ಈ ಭಾಗದಲ್ಲಿ ಆಗುವುದು ಕೆಲವರಿಗೆ ಸುತರಾಂ ಇಷ್ಟವಿರಲಿಲ್ಲ. ಕಾರಣ ಸುಂದರ ವಾತಾವರಣ ಥಳುಕು ಬಳುಕಿನ ಜಗತ್ತನ್ನು ತುಂಬಿಕೊಂಡಿರುವ ಮಾಯಾನಗರಿ ಬೆಂಗಳೂರು ಒಂದು ರೀತಿಯಲ್ಲಿ ಕೆಲವರನ್ನು ಮೋಡಿ ಮಾಡಿರುವುದು. ಈ ಮೋಡಿಗೆ ಸಿಲುಕಿದವರು ಉತ್ತರ ಕರ್ನಾಟಕಕ್ಕೆ ಪೀಠ ಬೇಡವೆಂದು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೊನೆಯವರೆಗೂ ಕೆಲಸ ಮಾಡಿದ್ದುಂಟು[೪].

ಅದೆಷ್ಟೋ ಮಂದಿ ವಕೀಲರು, ವಿದ್ಯಾರ್ಥಿಗಳು, ವ್ಯಾಪಾರಿಗಳು, ಬುದ್ದಿಜೀವಿಗಳು, ರೈತರು ಇಲ್ಲಿ ಪೀಠ ಸ್ಥಾಪನೆಗಾಗಿ ಹೋರಾಟ ನಡೆಸಿದ್ದರು. ರೈಲು ಮತ್ತು ಬಸ್ಸುಗಳ ಸಂಚಾರಕ್ಕೆ ಭಂಗ ಮಾಡಿದ್ದರು. ಆ ಸಮಯದಲ್ಲಿ ಲಾಠಿ ಏಟು ಚಳವಳಿಕಾರರನ್ನು ಮಾತನಾಡಿಸಿದ್ದುಂಟು. ದಿನಗಟ್ಟಲೆ ನ್ಯಾಯಾಲಯಗಳು ಕಲಾಪಗಳಿಲ್ಲದೆ ಸ್ತಬ್ಧವಾಗಿದ್ದುಂಟು. ಶಾಲಾ-ಕಾಲೇಜುಗಳ ಬಾಗಿಲು ವಾರಗಟ್ಟಲೆ ಮುಚ್ಚಿದ್ದವು. ಆದರೆ ಇಷ್ಟೆಲ್ಲಾ ಪ್ರತಿಭಟನೆಯಾಗಿದ್ದು ಒಂದು ನ್ಯಾಯಯುತ ಬೇಡಿಕೆಗಾಗಿ.

ಧಾರವಾಡ ಮತ್ತು ಗುಲ್ಬರ್ಗದಲ್ಲಿ ಹೈಕೋರ್ಟ್ ಸಂಚಾರಿ ಪೀಠದ ಆರಂಭದೊಂದಿಗೆ ಸ್ವಲ್ಪಮಟ್ಟಿನ ಪ್ರಾದೇಶಿಕ ಅಸಮತೋಲನ ನಿವಾರಣೆಯಾಗಿದೆ. ತ್ವರಿತಗತಿಯಲ್ಲಿ ನ್ಯಾಯ ಇತ್ಯರ್ಥವಾಗಿದ್ದು, ಜನರ ಮನೆಬಾಗಿಲಿಗೆ ನ್ಯಾಯದಾನ ಪರಿಕಲ್ಪನೆ ಜಾರಿಗೆ ಬಂದಿದ್ದು. ಬಡಕಕ್ಷಿದಾರರು ಬೆಂಗಳೂರಿಗೆ ಅಲೆಯುವುದು ತಪ್ಪುತ್ತಿದೆ. ಇದರಿಂದ ಹಣ, ಶ್ರಮ, ಸಮಯ ಉಳಿತಾಯವಾಗುತ್ತಿದ್ದು ಸ್ಥಳೀಯ ವಕೀಲರಿಗೆ ಉದ್ಯೋಗ ಅವಕಾಶ ಹೆಚ್ಚುವ ಕಾರಣ ವಕೀಲರ ಬೆಂಗಳೂರು ವಲಸೆ ನಿಲ್ಲುತ್ತದೆ. ಹೋಟಲ್ ಉದ್ಯಮ, ವಸತಿಗೃಹ, ವಾಣಿಜ್ಯ ವಹಿವಾಟು. ಸಾರಿಗೆ ಸೇರಿದಂತೆ ಸ್ಥಳೀಯವಾಗಿ ಇತರ ಉದ್ಯೋಗಗಳು ಸೃಷ್ಟಿಯಾಗುತ್ತದೆ.

ಕರ್ನಾಟಕದ ಪಾಲಿಗೆ ಒಂದು ಶಾಪ ಇದೆ. ನ್ಯಾಯಬದ್ಧವಾಗಿ ಸಿಗಬೇಕಾಗಿರುವುದಕ್ಕೂ ಕೂಡಾ ಕನ್ನಡಿಗರು ಬೀದಿಗೆ ಇಳಿದು ಎದೆ ಬಡಿದುಕ್ಕೊಳ್ಳಲೇಬೇಕು. ಹೈಕೋರ್ಟ್ ಪೀಠದಿಂದ ಹಿಡಿದು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನದವರೆಗೆ ಎಲ್ಲದ್ದಕ್ಕೂ ಜನ ಬೀದಿಗಿಳಿದು ಕೂಗು ಹಾಕಿದ ನಂತರವೇ ಆಳುವವರ ಕಿವಿ ತೆರೆದದ್ದು. ಚಳವಳಿ ಹೋರಾಟಗಳೆಲ್ಲಾ ರಾಜಕೀಯದ ಪ್ರೇಮಪಾಶಕ್ಕೆ ಸಿಕ್ಕಿ ಕರಗಿ ಹೋಗುತ್ತಿರುವ ದಿನಗಳಲ್ಲಿ ಸುಮಾರು ೫ ದಶಕಗಳ ಕಾಲ ಒಂದು ಹೋರಾಟ ಧ್ಯೇಯ ನಿಷ್ಠೆಯಿಂದ ಉಳಿದು ಗುರಿ ಸಾಧಿಸಿದ್ದು ಉತ್ತರ ಕರ್ನಾಟಕದ ಹೈಕೋರ್ಟ್ ಪೀಠ ಚಳವಳಿಯ ಗರಿಮೆ[೫].

ರಾಜ್ಯದಲ್ಲಿ ಪ್ರಾರಂಭಗೊಂಡ ಎರಡು ಸಂಚಾರಿ ಪೀಠಗಳು ಸೇರಿದಂತೆ ಹನ್ನೆರಡು ರಾಜ್ಯಗಳಲ್ಲಿ ಹದಿನೇಳು ಹೈಕೋರ್ಟ್ ಪೀಠಗಳಿವೆ(ಬಿಹಾರ ರಾಜ್ಯದಲ್ಲಿದ್ದ ರಾಂಚಿ ಪೀಠ ಜಾರ್ಖಂಡ್ ರಚನೆಯಾದ ನಂತರ ಪೂರ್ಣ ಪ್ರಮಾಣದ ಹೈಕೋರ್ಟ್ ಆಗಿ ಪರಿವರ್ತನೆಗೊಂಡಿದೆ). ಇವುಗಳಲ್ಲಿ ಯಾವುದಕ್ಕೂ ಕರ್ನಾಟಕದಲ್ಲಿ ನಡೆದಂತಹ ದೀರ್ಘ ಚಳುವಳಿಯ ಹಿನ್ನೆಲೆ ಇಲ್ಲ. ನಾಲ್ಕು ವರ್ಷಗಳ ಹಿಂದೆ ಮಧುರೈನಲ್ಲಿ ಸ್ಥಾಪನೆಗೊಂಡ ಚೆನ್ನೈ ಹೈಕೋರ್ಟ್‌ನ ಪೀಠಕ್ಕಾಗಿ ತಮಿಳರು ಕನ್ನಡಿಗರಷ್ಟು ಬೆವರು ಸುರಿಸಬೇಕಾಗಲಿಲ್ಲ. ಕೇರಳದ ತಿರುವನಂತಪುರ ಮತ್ತು ಕೋಲ್ಕತ್ತಾದ ಜಲಪೈಗುರಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂಬ ಚಳವಳಿಯೊಂದು ಆಗಾಗ ಸುದ್ದಿ ಮಾಡುತ್ತಿತ್ತು. ಯು.ಪಿ.ಎ.ಸರ್ಕಾರದ

ಜುಟ್ಟು ಕೈಯಲ್ಲಿಟ್ಟುಕೊಂಡಿರುವ ಮಾರ್ಕ್ಸ್‌ವಾದಿಗಳು ಪಟ್ಟು ಹಿಡಿದಿದ್ದರೆ ಅವೆರಡೂ ಪೀಠ ಸ್ಥಾಪನೆಯಾಗಿಯೇ ಬಿಡುತ್ತಿತ್ತು. ಯಾಕೋ ಅವರು ಮನಸ್ಸು ಮಾಡಲಿಲ್ಲ. ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂಬ ಹೋರಾಟ ಪ್ರಾರಂಭವಾದರೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಬೇಡಿಕೆ ತಳ್ಳಿಹಾಕಿದ ನಂತರ ಅದು ಮುಂದುವರಿಯಲಿಲ್ಲ.[೬]

ಉತ್ತರ ಕರ್ನಾಟಕದ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಬೇಕೆಂಬ ಕೂಗು ಮೊದಲು ಕೇಳಿದ್ದು ೧೯೬೯ರಲ್ಲಿ. ಆಗ ಉತ್ತರ ಪ್ರದೇಶದ ಲಖನೌ ಮಹಾರಾಷ್ಟ್ರದ ನಾಗಪುರ ಹಾಗೂ ಮಧ್ಯ ಪ್ರದೇಶದ ಇಂದೋರ್ ಮತ್ತು ಗ್ವಾಲಿಯರ್‌ಗಳಲ್ಲಿ ಮಾತ್ರ ಹೈಕೋರ್ಟ್ ಪೀಠಗಳಿದ್ದವು. ಈ ಸಂಖ್ಯೆ ಹದಿನಾರಕ್ಕೇರಿದರೂ ಕರ್ನಾಟಕದ ಬೇಡಿಕೆ ಮಾತ್ರ ಈಡೇರಲೇ ಇಲ್ಲ. ಇದಕ್ಕೆ ಅಡ್ಡಿಯಾಗಿದ್ದು ೧೯೫೬ರ ಕಾನೂನು ಆಯೋಗದ ವರದಿ. ನ್ಯಾಯಾಂಗದ ಔನ್ನತ್ಯ ಹೈಕೋರ್ಟ್‌ನ ಸಮಗ್ರ ಸ್ವರೂಪ ಮತ್ತು ನ್ಯಾಯದಾನದ ಗುಣಮಟ್ಟದ ದೃಷ್ಟಿಯಿಂದ ಒಂದೇ ಸ್ಥಳದಲ್ಲಿ ಹೈಕೋರ್ಟ್ ಕಾರ್ಯ ನಿರ್ವಹಿಸುವುದು ಅವಶ್ಯ ಎಂದು ಆಯೋಗ ಹೇಳಿತ್ತು. ಆದರೆ ಆ ವರದಿ ಹೊರಬಿದ್ದಾಗ ಹೈಕೋರ್ಟ್ ಪೀಠ ಇದ್ದದ್ದು ಲಖನೌದಲ್ಲಿ ಮಾತ್ರ ನಂತರದ ದಿನಗಳಲ್ಲಿ ಗ್ವಾಲಿಯರ್ ಮತ್ತು ಇಂದೋರ್ ೧೯೫೬. ನಾಗಪುರ ೧೯೬೦, ರಾಂಚಿ ೧೯೭೬, ಜೈಪೂರ್ ೧೯೭೭, ಪೋರ್ಟ್ ಬ್ಲೇರ್ ೧೯೭೮, ಪಣಜಿ ೧೯೮೧, ಔರಂಗಾಬಾದ್ ೧೯೮೪, ಕೊಹಿಮಾ ಮತ್ತು ಐಜ್ವಾಲ್ ೧೯೯೦, ಇಂಫಾಲ್ ಮತ್ತು ಅಗರ್ತಲ ೧೯೯೨, ಶಿಲ್ಲಾಂಗ್ ೧೯೯೫, ಇಟಾನಗರ್ ೨೦೦೦ ಮತ್ತು ಮಧುರೈ ೨೦೦೧ರಲ್ಲಿ ಹೈಕೋರ್ಟ್ ಪೀಠಗಳು ಸ್ಥಾಪನೆಯಾದವು. ಆಗ ಕಾನೂನು ಆಯೋಗದ ವರದಿ ಅಡ್ಡ ಬರಲಿಲ್ಲ. ಧಾರವಾಡ ಮತ್ತು ಗುಲ್ಬರ್ಗಗಳಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾದರೂ ಇದೊಂದು ಸಂಚಾರಿ ಪೀಠ ಮಾತ್ರ ಎನ್ನುವುದನ್ನು ಮರೆಯುವಂತಿಲ್ಲ. ಇವೆರಡನ್ನು ಹೊರತುಪಡಿಸಿದರೆ ದೇಶದಲ್ಲಿ ಈಗ ಇರುವ ಏಕೈಕ ಸಂಚಾರಿ ಪೀಠ ಅಂಡಮಾನ್ ಮತ್ತು ನಿಕೋಬಾರ್‌ನ ಪೋರ್ಟ್ ಬ್ಲೇರ್‌ನಲ್ಲಿದೆ. ಉಳಿದೆಲ್ಲವೂ ಶಾಶ್ವತ ಹೈಕೋರ್ಟ್ ಪೀಠಗಳು[೭].

ರಾಜ್ಯ ಪುನರ್ ವಿಂಗಡಣಾ ಕಾಯಿದೆಯ ಸೆಕ್ಷನ್ ೫೧(೧) ಮತ್ತು (೨)ರ ಪ್ರಕಾರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಮತ್ತು ರಾಜ್ಯಪಾಲರ ಜತೆ ಸಮಾಲೋಚನೆ ನಡೆಸಿದ ನಂತರ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ರಾಜ್ಯದಲ್ಲಿ ಒಂದು ಇಲ್ಲವೇ ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಅನುಮತಿ ನೀಡಬಹುದು. ಹೈಕೋರ್ಟ್‌ನ ಶಾಶ್ವತ ಪೀಠಗಳೆಲ್ಲವೂ ಸ್ಥಾಪನೆಯಾಗಿದ್ದು ಈ ಕಾಯಿದೆಯಡಿ. ಇದೇ ಕಾಯಿದೆಯ ಸೆಕ್ಷನ್ ೫೧(೩)ರ ಪ್ರಕಾರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳೂ ರಾಜ್ಯಪಾಲರ ಜತೆ ಸಮಾಲೋಚನೆ ನಡೆಸಿ ಹೈಕೋರ್ಟ್‌ನ ಮೂಲ ಪೀಠವನ್ನು ಬಿಟ್ಟು ಬೇರೆ ಕಡೆ ನ್ಯಾಯಪೀಠದ ಕಾರ್ಯನಿರ್ವಹಣೆಗೆ ಅವಕಾಶ ನೀಡಬಹುದು. ಇದಕ್ಕೆ ಸಂಚಾರಿ ಪೀಠ ಎಂಬ ಹೆಸರು ಬಳಕೆಯಲ್ಲಿದೆ.

ಸಂಚಾರಿ ಪೀಠ ಸ್ಥಾಪನೆ ಮೂಲತಃ ತಾತ್ಕಾಲಿಕ ಸ್ವರೂಪದ್ದು. ಕಾರ್ಯನಿರ್ವಹಣೆ ತೃಪ್ತಿದಾಯಕ ಅಲ್ಲ ಎಂದು ಅನಿಸಿದರೆ ಯಾವುದೇ ಕ್ಷಣದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಇದನ್ನು ರದ್ದುಪಡಿಸಬಹುದು. ಸಂಚಾರಿ ಪೀಠವನ್ನು ರದ್ದುಗೊಳಿಸಿದ ನಿದರ್ಶನಗಳು ಇಲ್ಲವಾದರೂ ಧಾರವಾಡ ಮತ್ತು ಗುಲ್ಬರ್ಗಾ ಸಂಚಾರಿ ಪೀಠಗಳ ನೆತ್ತಿ ಮೇಲೆ ಇಂತಹದ್ದೊಂದು ತೂಗುಕತ್ತಿ ಇದೆ ಎನ್ನುವುದು ಸತ್ಯ[೮].

ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯೊಂದಿಗೆ ಇನ್ನೊಂದು ಸಮಸ್ಯೆ ಆರಂಭವಾಯಿತು. ಅದು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಗುಲ್ಬರ್ಗ ಸಂಚಾರಿ ಪೀಠಕ್ಕೆ ಸೇರಿಸಬಾರದು. ಧಾರವಾಡ ಸಂಚಾರಿ ಪೀಠಕ್ಕೆ ಸೇರಿಸಬೇಕು ಎಂದು ಬಳ್ಳಾರಿ ಮತ್ತು ಕೊಪ್ಪಳದಲ್ಲಿ ಚಳವಳಿ ನಡೆದವು. ಬಳ್ಳಾರಿಯಿಂದ ಧಾರವಾಡ ಹೈಕೋರ್ಟ್ ಸಂಚಾರಿ ಪೀಠ ಕೇವಲ ೨೫೦ಕಿ.ಮೀ. ಅಂತರದಲ್ಲಿದ್ದು ಗುಲ್ಬರ್ಗ ಹೈಕೋರ್ಟ್ ಸಂಚಾರಿ ಪೀಠವು ೪೫೦ ಕಿ.ಮೀ. ದೂರದಲ್ಲಿದೆ. ಇದು ಸಾಮಾನ್ಯ ಜನರಿಗೆ ಭರಿಸಲಾಗದ ವೆಚ್ಚವಾಗುತ್ತದೆ ಎಂದು ೨೦೦೫ರಲ್ಲಿ ಸರದಿ ಉಪವಾಸ ಸತ್ಯಾಗ್ರಹ ವಕೀಲರಿಂದ ನ್ಯಾಯಾಲಯದ ಕಲಾಪಗಳಿಂದ ದೂರ ಉಳಿಯುವುದು. ಬಂದ್ ಆಚರಣೆ ಎಲ್ಲಾ ತರಹದ ಚಳವಳಿಗಳು ನಡೆದು ಇದಕ್ಕೆ ಹಲವಾರು ಸಂಘಸಂಸ್ಥೆಗಳು ವ್ಯಾಪಾರಿಗಳು ಮತ್ತು ಸಾಮಾನ್ಯ ಜನರು ಬೆಂಬಲಿಸಿದ್ದರು. ನಂತರ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಧಾರವಾಡ ಹೈಕೋರ್ಟ್ ಸಂಚಾರಿ ಪೀಠಕ್ಕೆ ಸೇರಿಸಲಾಯಿತು. ಇದಕ್ಕೆ ಕೆಲವರಿಂದ ವಿರೋಧ ವ್ಯಕ್ತವಾಯಿತು.

ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಕಕ್ಷಿದಾರರಿಗೆ ಧಾರವಾಡಕ್ಕಿಂತ ಗುಲ್ಬರ್ಗ ದೂರ ಎಂಬ ಒಂದೇ ಅಂಶ ಮುಂದಿಟ್ಟುಕೊಂಡು ಅದನ್ನು ಧಾರವಾಡ ಸಂಚಾರಿ ಪೀಠಕ್ಕೆ ಸೇರಿಸಿರುವುದು ನ್ಯಾಯಸಮ್ಮತವಲ್ಲ ಎಂಬುದು ಭಾರತೀಯ ನ್ಯಾಯವಾದಿಗಳ ಸಂಘದ ಹೈದರಾಬಾದ್ ಕರ್ನಾಟಕ ವಿಭಾಗೀಯ ಘಟಕದ ಕಾರ್ಯಾಧ್ಯಕ್ಷ ಹಾಗೂ ಹಿರಿಯ ನ್ಯಾಯವಾದಿ ಪಿ.ವಿಲಾಸಕುಮಾರ ಅವರ ಅಸಮಾಧಾನವಾಗಿದ್ದರು. ಕೋರ್ಟ್ ಇರುವುದು ಕಕ್ಷಿದಾರರಿಗೆ ಹೊರತು ನ್ಯಾಯಾಧೀಶರು, ನ್ಯಾಯವಾದಿಗಳಿಗೆ ಅಲ್ಲ. ಹೀಗಾಗಿ ಹೈದರಾಬಾದ್ ಕರ್ನಾಟಕದೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಂಡಿರುವ ಈ ಎರಡು ಜಿಲ್ಲೆಗಳ ಕಕ್ಷಿದಾರರು ಹಾಗೂ ಜನರ ಅಭಿಪ್ರಾಯ ಪಡೆಯಬೇಕಾಗಿತ್ತು ಎಂದು ಅವರು ಅಭಿಪ್ರಾಯ ಪಡುತ್ತಾರೆ. ಧಾರವಾಡ ಸಂಚಾರಿ ಪೀಠದ ವ್ಯಾಪ್ತಿಗೆ ಎಂಟು ಜಿಲ್ಲೆಗಳ ಒಟ್ಟು ೨೨ ಸಾವಿರ ಪ್ರಕರಣ ಹಾಗೂ ಗುಲ್ಬರ್ಗ ಸಂಚಾರಿ ಪೀಠದ ನಾಲ್ಕು ಜಿಲ್ಲೆಗಳ ೧೦ ಸಾವಿರ ಪ್ರಕರಣಗಳು ಸೇರ್ಪಡೆಯಾಗಿವೆ. ಬಾಕಿ ಪ್ರಕರಣಗಳ ಸಂಖ್ಯೆ ಕಡಿಮೆಯಾದರೆ ಸಂಚಾರಿ ಪೀಠ ಕೈತಪ್ಪಿ ಹೋಗುವ ಸಂಭವವಿದೆ. ಸಂಚಾರಿ ಪೀಠ ಶಾಶ್ವತ ಹೈಕೋರ್ಟ್ ಪೀಠವಾಗಿ ಪರಿವರ್ತನೆಯಾಗುವ ಅವಕಾಶಗಳೂ ಕ್ಷೀಣಿಸುತ್ತದೆ ಎನ್ನುವುದು ಅವರ ಆತಂಕವಾಗಿತ್ತು.

ಬಿ.ಡಿ.ಹಿರೇಮಠ ಅವರ ಅಭಿಪ್ರಾಯದಲ್ಲಿ ಏಕೀಕರಣದ ಸಂದರ್ಭದಲ್ಲಿ ಅಷ್ಟೇ ಅಲ್ಲ, ಅದಕ್ಕಿಂತ ಪೂರ್ವದಲ್ಲಿಯೂ ಈ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಆಗಿನ ಮಹನೀಯರು ಚರ್ಚೆ ಮಾಡಿದ್ದರು. ಅಂದರೆ ಕನ್ನಡ ಮಾತನಾಡುವ ಜನರಿಗಾಗಿ ರಾಜ್ಯ ಆಗಬೇಕು. ಅಷ್ಟೇ ಅಲ್ಲ, ಆ ಕಲ್ಪನೆಯನ್ನು ಇಟ್ಟುಕೊಂಡು ಧಾರವಾಡದಲ್ಲಿ ಇಡೀ ಕರ್ನಾಟಕದ ಸಮಸ್ಯೆಯ ಬಗ್ಗೆ ೧೯೧೪-೧೭ರ ಸುಮಾರಿಗೆ ಧಾರವಾಡದಲ್ಲಿ ಈ ಚಿಂತನೆ ಪ್ರಾರಂಭವಾಯಿತು. ಆ ಕಾರಣಕ್ಕಾಗಿ ೧೯೧೭ರಲ್ಲಿ 'ವಿದ್ಯಾವರ್ಧಕ ಸಂಘ' ಸ್ಥಾಪನೆಯಾಯಿತು. ಅಂದರೆ ಕನ್ನಡ ನಾಡು, ನುಡಿ, ಜನ, ಜಲದ ಬಗ್ಗೆ ಚಿಂತನೆ ವ್ಯಕ್ತಪಡಿಸಿ ಎಲ್ಲಾ ಕನ್ನಡ ಜನರು ಒಂದೇ ಚತ್ರಿನ ಅಡಿ ಬರಬೇಕು ಎಂಬ ಪರಿಕಲ್ಪನೆಯನ್ನು ಇಟ್ಟುಕೊಂಡಿದ್ದರು. ಆ ಸಂದರ್ಭದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆ ಸಹ ಅಲ್ಲಿ ಚರ್ಚೆಯಾಯಿತು. ಕರ್ನಾಟಕದ ಏಕೀಕರಣ ಇತಿಹಾಸವನ್ನು ಅವಲೋಕಿಸಿದಾಗ ಈ ಕಲ್ಪನೆ ಬಗ್ಗೆ ಅಲ್ಲಿ ನಮಗೆ ಸಮಂಜಸವಾದ ಉತ್ತರ ಸಿಗುತ್ತದೆ. ಆಗಿನ ಮೈಸೂರು ಸಂಸ್ಥಾನ (೧೯೫೪) ಉತ್ತರ ಭಾಗದಿಂದ ಇನ್ನೊಂದು ತುತ್ತತುದಿಗೆ ನ್ಯಾಯದಾನದ ಪದ್ಧತಿಯ ಪ್ರಕ್ರಿಯೆಗಾಗಿ ಅಲ್ಲಿ ಹೋಗುವ ಪ್ರಕ್ರಿಯೆ ಬದಲಾಗಬೇಕು. ಆ

[illegible]

ಕಾರಣಕ್ಕಾಗಿ ಪೀಠ ಸ್ಥಾಪನೆಯಾಗಬೇಕು ಎಂದು ಮೈಸೂರು ಸಂಸ್ಥಾನವು ಒಂದು ಸಮಿತಿಯನ್ನು ನಿರ್ಮಿಸಿತ್ತು. ಅದು ವಸ್ತುಸ್ಥಿತಿ ಅಧ್ಯಯನ ಸಮಿತಿ(Fact Finding Committee). ೧೯೫೪ರಲ್ಲಿ ವರದಿಯನ್ನು ಕೊಟ್ಟರು. ಈ ಎಲ್ಲಾ ಕಾರಣಗಳನ್ನು ನೋಡಿದಾಗ ಈ ಪೀಠದ ಕಲ್ಪನೆ ಇತ್ತು ಎಂದು ತಿಳಿಯುತ್ತದೆ[೧೦].

ಏಕೀಕರಣಕ್ಕೆ ಹಳೆ ಮೈಸೂರಿನ ವಿರೋಧವನ್ನು ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ೧೯೨೦ರಲ್ಲಿ ಮೇ ತಿಂಗಳಿನಲ್ಲಿ ಕರ್ನಾಟಕ ರಾಜಕೀಯ ಪರಿಷತ್ತಿನ ಮೊದಲ ಅಧಿವೇಶನವು ಧಾರವಾಡದ ಉಳವಿ ಚೆನ್ನಬಸಪ್ಪನ ಗುಡ್ಡದ ಮೇಲಿನ ಮೈದಾನದಲ್ಲಿ ನಡೆಯಿತು. ಅಧಿವೇಶನದ ಅಧ್ಯಕ್ಷತೆಯನ್ನು ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ನಿವೃತ್ತರಾಗಿದ್ದ ವಿ.ಪಿ.ಮಾಧವರಾಯರು ವಹಿಸಿದ್ದರು. ಆ ಸಂದರ್ಭದಲ್ಲಿ ಈ ಹೈಕೋರ್ಟ್ ಪೀಠ ಎಲ್ಲಿ ಆಗಬೇಕು ಎಂದು ಚರ್ಚೆಯಾಗಿತ್ತು. ಇನ್ನೊಂದು ಸಭೆ ದಾವಣಗೆರೆಯಲ್ಲಾಯಿತು. ಭಾಷಾವಾರು ಕಲ್ಪನೆ ಹುಟ್ಟಿದ್ದು ಇಡೀ ದೇಶದಲ್ಲಿ ನನ್ನ ಪ್ರಕಾರ ಕರ್ನಾಟಕದಿಂದ. ನಾಗಪುರದ ಅಧಿವೇಶನದಲ್ಲಿ ಒಂದು ಪ್ರಾಂತೀಯವಾಗಿ ಒಂದು ಅಧಿಕಾರವನ್ನು ಕೊಡುವಂತ ಕಾಂಗ್ರೆಸ್‌ನ ಕಲ್ಪನೆಯನ್ನು ಕೊಟ್ಟವರು ಕರ್ನಾಟಕದವರು ಎಂದರೆ ತಪ್ಪೇನಿಲ್ಲ. ಜನತೆಯ ಬಗ್ಗೆ ಈ ನಾಡಿನ ಬಗ್ಗೆ ಪೂರ್ವ ದೃಷ್ಟಿಯನ್ನು ಇಟ್ಟುಕೊಂಡು ಪೀಠ ಸ್ಥಾಪನೆಯಷ್ಟೇ ಅಲ್ಲ, ಈ ಭಾಷೆಯ ಬಗ್ಗೆ ಚರ್ಚೆಯಾಗಿತ್ತು. ಮೈಸೂರಿನ ಒಂದು ದಕ್ಷಿಣ ಭಾಗದಲ್ಲಿ ಪ್ರಬಲವಾಗಿ ಇರುವಂತದ್ದು ಮೈಸೂರು. ಕೇಂದ್ರ ಸ್ಥಾನವನ್ನು ಕಿತ್ತಾಕಬಹುದು ಎಂದು ವಿರೋಧ ವ್ಯಕ್ತ ಪಡಿಸಿರಬಹುದು. ಏಕೀಕರಣಕ್ಕೆ ಹಳೇ ಮೈಸೂರು ವಿರೋಧವಿದ್ದರು ಸಹ, ಸಹಜವಾಗಿ ಎಲ್ಲರಿಗೂ ಅನುಕೂಲವಾದ ಪ್ರದೇಶ ಕೇಂದ್ರ ಸ್ಥಾನವಾಗಬೇಕು. ಧಾರವಾಡ ಆಗಬೇಕು ಎಂಬ ಕಲ್ಪನೆ ಇಟ್ಟುಕೊಂಡರು. ಉತ್ತರ ಕರ್ನಾಟಕದ ಜನತೆಯ ಒಪ್ಪಿಗೆ ನೀಡಿದ್ದರು. ಆಗ ಬೆಂಗಳೂರು ಕೇಂದ್ರ ಸ್ಥಾನವಾಗಿ ಹೈಕೋರ್ಟ್ ಪೀಠ ಸ್ಥಾಪನೆಯಾಯಿತು[೧೧].

'ಗ್ಲೋಬಲ್ ವಿಲೇಜ್' ಕಲ್ಪನೆಯಲ್ಲಿ ಮನುಷ್ಯ ಜೀವಿ ವಿಜ್ಞಾನದಿಂದ ಫಲವನ್ನು ಪಡೆಯುತ್ತಾನೆ ಎಂಬ ಕಲ್ಪನೆ ಇಟ್ಟುಕೊಂಡರೂ ಸಹ ನಮ್ಮ ಮನೆಯಲ್ಲಿ ಕುಂತು ಒಂದು ಪತ್ರವನ್ನು ಬರೆದಾಗ ಪರದೇಶಕ್ಕೆ ಹೋಗಲು ತಿಂಗಳು ಬೇಕಿತ್ತು. ಆದರೆ ಇಂದಿನ ಇ-ಮೇಲ್ ಯುಗದಲ್ಲಿ ಕ್ಷಣದಲ್ಲಿ ತಲುಪಿಸಬಹುದು. ಅಷ್ಟೆಲ್ಲಾ ಜ್ಞಾನ ಹೊಂದಿದರೂ ಸಹ ನ್ಯಾಯಾಲಯದ ವಿಚಾರ ನೋಡಿದಾಗ ವಿಜ್ಞಾನದಿಂದ ಕೇಸ್‌ಗಳನ್ನು ದಾಖಲು ಮಾಡಲು ಇ-ಮೇಲ್ ಮುಖಾಂತರ ಹೋದರೂ ಅವಕ್ಕೆ ಜೀವ ಇರುವುದಿಲ್ಲ. ಈ ಜ್ಞಾನದಿಂದ ಕಾನೂನುಗಳು ಇ-ಮೇಲ್ ಮೂಲಕ ಹೋದರೂ ಕೇಸ್ ದಾಖಲೆ ಮಾಡಿದರೂ ತೀರ್ಮಾನ ಕೈಗೊಳ್ಳುವುದು ಮನುಷ್ಯ ಜೀವಿಯೇ. ಶಿಲಾಯುಗದಿಂದ ಪ್ರಾರಂಭವಾದ ಮಾನವನ ಬದುಕು ತಂತ್ರಜ್ಞಾನದ ಯುಗದವರೆಗೆ ಬಂದಿದ್ದೇವೆ. ಸಾಧನೆಗಳನ್ನು ಹೊಂದಿದರೂ ಆತ್ಮತೃಪ್ತಿ ಮನುಕುಲಕ್ಕೆ ಇದೆಯೇ ಎಂಬ ಪ್ರಶ್ನೆಯನ್ನು ಹಾಕಿದಾಗ ಇಂದಿನ ಜೀವನ ಅಕ್ಷರ ಕಲಿಕೆಯಾಗಿದೆಯೇ ಹೊರತು ಮಾನವನ ಬದುಕು ಸಮಾಜಕ್ಕಾಗಿ ಎನ್ನುವ ಕಲ್ಪನೆಯನ್ನು ಮರೆಯುತ್ತಾ ಇದ್ದೇವೆ. ಆ ರೀತಿ ನಮ್ಮ ನಡತೆ ಸಣ್ಣದಾಗುತ್ತಾ ಹೋಗಿದೆ. ಈ ತಂತ್ರಜ್ಞಾನದಲ್ಲಿ ನಮ್ಮನ್ನು ನಾವು ಮರೆಯುತ್ತ ಇದ್ದೇವೆ. ಆತ್ಮತೃಪ್ತಿ ಇಲ್ಲದಂತಾಗಿದೆ. ತಂತ್ರಜ್ಞಾನದ ಈ ಯುಗದಲ್ಲಿ ಈಗ ನ್ಯಾಯಾಲಯಗಳಲ್ಲಿ ನ್ಯಾಯದಾನ ಆ ಪರಿಕಲ್ಪನೆ ಇಟ್ಟುಕೊಂಡಾಗ, ಒಂದು ವಿಷಯದ ಬಗ್ಗೆ ವಿವಾದಾಂಶಗಳು ಇದ್ದಾಗ ಈಗ ನಾವು ಕಾಗದದಲ್ಲಿದ್ದರೂ ಅದನ್ನು ತಿರುಚುವ ಪ್ರಯತ್ನ ಮಾಡಬಹುದು.

ನ್ಯಾಯಾಲಯದಲ್ಲಿ ತೀರ್ಪುಗಳನ್ನು ಕೊಡುವುದು, ನ್ಯಾಯಾಧೀಶರು ನ್ಯಾಯವನ್ನು ಕೊಡುವುದು ಮಾನವನೇ ಹೊರತು ಮಶರಿಗಳಲ್ಲ[೧೨].

ಬಂಡವಾಳಶಾಹಿಗಳಿಗೆ ಮತ್ತು ಆರ್ಥಿಕ ಸಬಲರಿಗೆ ಪೀಠದ ಸ್ಥಾಪನೆಯಿಂದ ಹೆಚ್ಚಿನ ಅನುಕೂಲವಾಗುತ್ತಿದೆ ಎನ್ನುವ ಪ್ರಶ್ನೆ ತಪ್ಪುಕಲ್ಪನೆಯಿಂದ ಕೂಡಿದೆ. ಕಡಿಮೆ ವೆಚ್ಚದಲ್ಲಿ ಬಡಕಕ್ಷಿದಾರರಿಗೆ ಅನುಕೂಲವಾಗಬೇಕು ಎಂದು ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಪೀಠ ಸ್ಥಾಪನೆಯಾಗಿದೆ. ಆರ್ಥಿಕವಾಗಿ ಸಬಲರಿರುವವರು ಬೆಂಗಳೂರಿಗೆ ಹೋಗುತ್ತಾರೆ. ಇದು ಬಡಕಕ್ಷಿದಾರರಿಗೆ ಕಡಿಮೆ ವೆಚ್ಚ ದಾಯಕವಾಗಿರುತ್ತಿದೆ. ಬೆಂಗಳೂರಿಗೆ ಹೋಗಲು ೧೦ ತಾಸುಗಳಿಂದ ೨೦ ತಾಸುಗಳ ವರೆಗೆ ಪ್ರಯಾಣ ಮಾಡಬೇಕಾಗುತ್ತಿತ್ತು. ಈ ಕೆಲಸಕ್ಕೆ ಬೆಂಗಳೂರಿಗೆ ಹೋಗಿ ಬರಲು ಒಟ್ಟು ೪ ದಿನ ಬೇಕಾಗುತ್ತಿತ್ತು. ಈಗ ಇಲ್ಲೇ ಆದದ್ದರಿಂದ ಬಡಕಕ್ಷಿದಾರನಿಗೆ ಅನುಕೂಲವಾಗಿದೆ. ೦೭.೦೭.೨೦೦೮ರಿಂದ ಬಡಕಕ್ಷಿದಾರ ಸಂತೋಷದಿಂದಿದ್ದಾನೆ. ಬೆಂಗಳೂರಿಗೆ ಹೋಗಲು ಬಡವರಿಗೆ ಆಗುತ್ತಿರಲಿಲ್ಲ. ಈಗ ಇಲ್ಲೇ ಆಗಿದ್ದರಿಂದ ತನ್ನ ಕೇಸ್ ಪಡೆಯುವ ಸಂದರ್ಭದಲ್ಲಿ ಅದನ್ನು ನೋಡಿ ಸಂತೋಷಪಡುತ್ತಿದ್ದಾನೆ. ಶೀಘ್ರಗತಿಯಲ್ಲಿ ನ್ಯಾಯದಾನವಾಗುತ್ತದೆ.[೧೩]

ಧಾರವಾಡ ಮತ್ತು ಗುಲ್ಬರ್ಗ ಹೈಕೋರ್ಟ್ ಸಂಚಾರಿ ಪೀಠಗಳ ಸ್ಥಾಪನೆಯಿಂದ ಬರೇ ಶ್ರೀಮಂತರಿಗೆ ಮತ್ತು ಬಂಡವಾಳಶಾಹಿಗಳಿಗೆ ಹೆಚ್ಚು ಅನುಕೂಲವಾಗುತ್ತಿದೆ ಅಂತ ಅಪವಾದವಿದೆಯಲ್ಲ ಎನ್ನುವ ಪ್ರಶ್ನೆಗೆ ಧಾರವಾಡದ ಹಿರಿಯ ವಕೀಲರಾದ 'ಪ್ರಫುಲ್ಲಾ ನಾಯಕ್' ಕಕ್ಷಿದಾರರು ಇಲ್ಲಿಂದ ಬೆಂಗಳೂರಿಗೆ ಹೋಗಿ ಅಲ್ಲಿ ಹೋಟಲ್‌ನಲ್ಲಿ ಉಳಿದು ವಕೀಲರಿಗೆ ಖರ್ಚು ಕೊಟ್ಟು ಮತ್ತೇ ಕೇಸ್ ಏನಾಯಿತು, ಏನೋ ಅಂತ ಗೊತ್ತು ಆಗುತ್ತಿರಲಿಲ್ಲ. ಇಷ್ಟೆಲ್ಲಾ ಮಾಡಲಿಕ್ಕೆ ಆಗದೇ ಇದ್ದಾಗ ನಾವು ಏನು ಮಾಡಿದ್ವಿ, ಇಲ್ಲಿಯೇ ಒಂದು ಪೀಠವನ್ನು ಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆ ಅಂತ ಹೇಳಿ ಸುಧೀರ್ಘವಾಗಿ ಸುಮಾರು ೫೦ ವರ್ಷಗಳ ಕಾಲ ಹೋರಾಟ ಮಾಡಿದೆವು. ಹೈಕೋರ್ಟ್ ಪೀಠ ಬಂದ ಮೇಲೆ ಜನರ ಮನೆ ಬಾಗಿಲಿಗೆ ನ್ಯಾಯದಾನ ಆಗುತ್ತಿದೆ' ಎಂದರು. 'ಪ್ರಫುಲ್ಲಾ ನಾಯಕ್ ಅವರು ಚಳವಳಿಯಲ್ಲಿ ಪ್ರವೇಶಿಸಿದ್ದು ೧೯೮೨ರಲ್ಲಿ ೧೯೮೨ರಿಂದ ಸತತವಾಗಿ ಪೀಠ ಬರುವತನಕ ಹೋರಾಟ ಮಾಡಿದ್ದೇವೆ. ಪ್ರತಿ ಬಾರಿ ಒಂದು ತಿಂಗಳೋ ಎರಡು ತಿಂಗಳೋ ಅದನ್ನು ಮಾಡುವುದು ಮತ್ತು ನಿದ್ರಿಸೋದು ಆಗತ್ತಿತ್ತು. ಆದರೂ ಬಿ.ಡಿ.ಹಿರೇಮಠ ಅವರ ಪ್ರವೇಶದಿಂದ ಅದಕ್ಕೂ ಮೊದಲು ಅಗಡಿ ಎಂಬ ವಕೀಲರ ನೇತೃತ್ವದಲ್ಲಿ ಸತತ ಹೋರಾಟ ನಡೆಯಿತು. ಆಗ ಕೋಡುತ್ತೇವೆ ಅಂತ ಹೇಳಿ ಬೋರಗಲ್ ಮೇಲೆ ಮಳೆ ಸುರದಂಗ ಇತ್ತು. ಹುಂ... ಮಾಡುತ್ತೇವೆ ಅಂತ ಹೇಳುತ್ತಿದ್ದರು. ಆದರೆ ಮಾಡುತ್ತಿರಲಿಲ್ಲ. ಜೆ.ಹೆಚ್.ಪಾಟೀಲ ಅವರು ಬಂದಾಗ 'ಸಂಚಾರಿ ಪೀಠ ಕೊಡುತ್ತೇನೆ ಪಟೇಲ್ ಅಂದ್ರು, ಆದರೆ ಆಗ ನಮಗೆ ಪರಮನೆಂಟ್ ಬೆಂಚ್ ಬೇಕು. ಸಂಚಾರಿ ಪೀಠ ಬೇಡ ಅಂತ ಹೇಳಿದೆವು. ಮುಂದೆ ಪೀಠ ಕೊಡುತ್ತೇವೆ ಅಂದ್ರು ಆದರೆ ಯಾರೂ ಬರಲಿಲ್ಲ, ಆಗ ನಾನು ಮತ್ತು ಬಿ.ಡಿ.ಹಿರೇಮಠ ಅವರು ೧೨ ದಿವಸಗಳ ವರೆಗೆ ಉಪವಾಸ ಮಾಡಿದೆವು. ಆಗ ಧರ್ಮಸಿಂಗ್ ಅವರು ನಮ್ಮ ಉಪವಾಸವವನ್ನು ಹಿಂತೆಗೆದುಕೊಳ್ಳಲು ಹೇಳಿದರು. ಆಗ ನಾವು ಕಮಿಟಿ ಅವರು ಬಂದು 'ವಾಲ್ಮಿ' ಬಿಲ್ಡಿಂಗನ್ನು ನೋಡಿ ಇದು ಸೂಕ್ತ ಎಂದು ಆಶ್ವಾಸನೆ ಕೊಡುವವರೆಗೂ ಉಪವಾಸ ಹಿಂತೆಗೆದುಕೊಳ್ಳುವುದಿಲ್ಲ' ಎಂದೆವು. ನಂತರ ಒಂದು ಉತ್ತಮ ಕೆಲಸ ಅಂದರೆ ಒಂದು

ವರ್ಷದಲ್ಲಿ ಅಗದಿ ಒಂದು ವರ್ಷದಲ್ಲಿ ಕಟ್ಟಡ ನಿರ್ಮಾಣವಾಯಿತು. ಈಗ ಎಲ್ಲಾ ಸೂಕ್ತವಾಗಿ ನಡೀತಾಯಿದೆ.

ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯನ್ನು ಸಹ ಧಾರವಾಡ ಸಂಚಾರಿ ಪೀಠಕ್ಕೆ ಕೊಟ್ಟಿದ್ದರು. ಆದರೆ ಈಗ ಗುಲ್ಬರ್ಗ ಸಂಚಾರಿ ಪೀಠಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಏಕೆಂದರೆ ಅವರಿಗೆ ಕೇಸುಗಳು ಕಡಿಮೆ ಇರುವುದರಿಂದ ಅವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಹಾಗೆ ಮಾಡುತ್ತಿದ್ದಾರೆ. ಜನರ ಕೋರಿಕೆಗಳು ಮುಖ್ಯವಾಗಿರುತ್ತದೆ. ಜನರಿಗೆ ಧಾರವಾಡಕ್ಕೆ ಬರಲಿಕ್ಕೆ ಹತ್ತಿರವಿದ್ದಾಗ, ಅವರಿಗೆ ಬೇಕಾದುದ್ದನ್ನು ಕೇಳಬೇಕೆ ವಿನಾಃ ತಮಗೆ ಇಷ್ಟಬಂದ ರೀತಿಯಲ್ಲಿ ಮಾಡಬಾರದು. ಎರಡು ಪೀಠಗಳ ಅವಶ್ಯಕತೆ ಇರಲಿಲ್ಲ. ಗುಲ್ಬರ್ಗಾದಲ್ಲಿ ಪೀಠ ರಾಜಕೀಯವಾಗಿ ಬಂದದ್ದು. ಅಲ್ಲಿಯ ರಾಜಕೀಯವಾಗಿ ಗಟ್ಟಿಗರಾಗಿದ್ದರಿಂದ ಅವರಿಗೆ ಪೀಠ ಬಹಳ ಬೇಗ ಸಿಗ್ತು. ನಾವು ಮಾಡಿದಷ್ಟು ಹೋರಾಟ ಅವರು ಮಾಡಿಲ್ಲ. ನಾವು ಮಾಡಿದಾಗ ಅವರು ಮಾಡುತ್ತಿದ್ದರು. ನೀವು ೫೦ ವರ್ಷಗಳಿಂದ ಮಾಡಿದ ಹೋರಾಟದ ಇತಿಹಾಸ ಅವರಿಗಿಲ್ಲ ಗುಲ್ಬರ್ಗಾ– ಬೆಂಗಳೂರು ಮತ್ತು ಧಾರವಾಡ–ಬೆಂಗಳೂರು ಅಂತರವನ್ನು ನೋಡಿ ಕೊಟ್ಟಿದ್ದಾರೆ. ಈಗ ಅವರಿಗೆ ಕೇಸ್ ಕಡಿಮೆ ಇದೆ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ[೧೩].

ಬರೇ ಶ್ರೀಮಂತರಿಗಷ್ಟೇ ಪೀಠದ ಸ್ಥಾಪನೆಯಿಂದ ಅನುಕೂಲವಾಗಿಲ್ಲ. ಬಡಕಕ್ಷಿದಾರರಿಗೂ ಅನುಕೂಲವಾಗಿದೆ. ಈಗ ಕಕ್ಷಿದಾರ ತನ್ನ ಕೇಸಿಗೆ ಸಂಬಂಧಪಟ್ಟ ಮಾಹಿತಿಯನ್ನು ಸುಲಭವಾಗಿ ತಿಳಿದುಕೊಳ್ಳಬಲ್ಲ ಎಂದು ಅಭಿಪ್ರಾಯಪಟ್ಟರು[೧೪].

ಧಾರವಾಡದಲ್ಲಿ ಹೈಕೋರ್ಟ್ ಸಂಚಾರಿ ಪೀಠದ ಸ್ಥಾಪನೆಯಿಂದ ರೈತರಿಗೆ ಮತ್ತು ಬಡ ಜನರಿಗೆ ಯಾವ ರೀತಿ ಅನುಕೂಲವಾಗಿದೆ ಮತ್ತು ಅನನುಕೂಲವಾಗಿದೆ ಎನ್ನುವ ಪ್ರಶ್ನೆಗೆ ಹೇಮರೆಡ್ಡಿ ಎಂಬ ಹೆಸರಿನ ಒಬ್ಬ ಬಡ ರೈತ ಕಕ್ಷಿದಾರನು ಈ ರೀತಿ ಹೇಳುತ್ತಾರೆ. "ನನ್ನ ಕೇಸು ಜಮೀನಿಗೆ ಸಂಬಂಧಿಸಿದ್ದು ಮೊದಲು ಬೆಂಗಳೂರಿನಲ್ಲಿತ್ತು. ನಾನು ಎಲ್ಲಾ ಹಣವನ್ನು ವಕೀಲರಿಗೆ ಕೊಟ್ಟಿದ್ದೆ. ಆದರೆ ಈಗ ನನ್ನ ಕೇಸು ಧಾರವಾಡಕ್ಕೆ ವರ್ಗಾವಣೆಯಾದ ನಂತರ ನಾನು ಅವರಿಗೆ ಮತ್ತೇ ಧಾರವಾಡದ ವಕೀಲರನ್ನು ಮಾಡಿ ಅವರಿಗೆ ಮತ್ತೆ ಹಣವನ್ನು ಕೊಟ್ಟಿರುತ್ತೇನೆ. ಧಾರವಾಡದಲ್ಲಿ ಕೇಸ್ ವರ್ಗಾವಣೆ ಆಗಿರುವುದು ಹೋಗಲು ಬರಲು ಅನುಕೂಲವಾಗಿದ್ದರೂ ಕೂಡ ಆರ್ಥಿಕವಾಗಿ ನನಗೆ ಅನನುಕೂಲವಾಗಿದೆ"[೧೫].

ಮತ್ತೊಬ್ಬ ರೈತನಾದ ಜೆ.ಬಸವರಾಜ್ ಕಡ್ಲುಬಾಳ್ , ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರದು ಜಮೀನಿಗೆ ಸಂಬಂಧಿಸಿದ ಕೇಸು. ಧಾರವಾಡದಲ್ಲಿ ಹೈಕೋರ್ಟ್ ಆದಾಗಿನಿಂದ ಬಹಳ ಅನುಕೂಲವಾಗಿದೆ. ಖರ್ಚು ಕಡಿಮೆ ಬರುತ್ತದೆ. ಕೇಸು ಏನಾಗಿದೆ ಮತ್ತು ಏನಾಗುತ್ತದೆ ಎಂದು ನೋಡಿಬರಬಹುದಾಗಿದೆ. ಮೊದಲು ಬೆಂಗಳೂರಿನಲ್ಲಿದ್ದಾಗ ಅಲ್ಲಿಗೆ ಹೋಗುವುದು, ಊಟ ವಸತಿಯ ಖರ್ಚು, ಬಸ್ಸು ಖರ್ಚು ಎಲ್ಲಾ ಖರ್ಚುದಾಯಕವಾಗಿತ್ತು. ಆದರೆ ಈ ಒಂದು ದಿನದಲ್ಲಿ ಹೋಗಿ ಬರಬಹುದಾಗಿದೆ. ಇದು ಕಡಿಮೆ ವೆಚ್ಚದಲ್ಲಿ ಆಗುತ್ತದೆ" ಎಂದು ಹೇಳುತ್ತಾರೆ[೧೬].

ಸಂಡೂರಿನಲ್ಲಿ ಪೊಲೀಸ್ ಕೆಲಸ ನಿರ್ವಹಿಸುವ ಶಾಂತಪ್ಪ ಅವರು "ಮನೆಗೆ ಸಂಬಂಧಿಸಿದ ನನ್ನ ಕೇಸು ಧಾರವಾಡದಲ್ಲಿದೆ. ನಾನು ನನ್ನ ಕೇಸ್‌ನ ವಿಷಯವಾಗಿ ಒಂದು ದಿನದಲ್ಲಿ ಧಾರವಾಡಕ್ಕೆ ಹೋಗಿಬರುತ್ತೇನೆ. ಖರ್ಚು ಕಡಿಮೆಯಾಗುತ್ತದೆ. ರೈಲು ಮಾರ್ಗವಾಗಿ ಸುಲಭವಾಗಿ ಹೋಗಿ ಬರಬಹುದಾಗಿರುತ್ತದೆ" ಎಂದು ಹೇಳುತ್ತಾರೆ.[೧೭]

ಧಾರವಾಡ ಹಿರಿಯ ವಕೀಲರಾದ ಪಾಟೀಲ್ ಅವರು ಬೆಂಗಳೂರು ಇಲ್ಲಿಯ ಜನರಿಗೆ ದೂರವಿದೆ. ಜನರಿಗೆ ಅನಾನುಕೂಲವಾಗುತ್ತದೆ. ಬೆಂಗಳೂರಿಗೆ ಹೋಗಿ ಬರುವ ಖರ್ಚಿನಲ್ಲಿ ಧಾರವಾಡದ ಹೈಕೋರ್ಟ್‌ನಲ್ಲಿ ಕೇಸು ಮುಗಿಯುತ್ತದೆ ಅಂದರೆ ೪ ಸಾವಿರದಿಂದ ೫ ಸಾವಿರದ ಖರ್ಚು ಬೆಂಗಳೂರು ಹೈಕೋರ್ಟ್‌ಗೆ ಹೋಗುವುದು. ಕೆಲವೊಮ್ಮೆ ಮತ್ತೆ ಬನ್ನಿ ಅಂದರೆ ಜನರು ಹೋಗಬೇಕಾಗುತ್ತಿತ್ತು. ಇದು ಖರ್ಚುದಾಯಕವಾಗುತ್ತದೆ. ಹೈಕೋರ್ಟ್ ಸಂಚಾರಿ ಪೀಠದ ಸ್ಥಾಪನೆಯಿಂದ ಬರೇ ಬಂಡವಾಳಶಾಹಿಗಳಿಗೆ ಮತ್ತು ಊಳಿಗಮಾನ್ಯಶಾಹಿಗಳಿಗೆ ಅನುಕೂಲವಾಗುತ್ತಿದೆ ಎಂದು ಆಪಾದನೆ ಇದೆಯಲ್ಲಾ ಎನ್ನುವ ಪ್ರಶ್ನೆಗೆ ಅವರು "ಹಾಗೇನೂ ಇಲ್ಲ ಈಗ ಮೈನ್ಸ್ ಮತ್ತು ಕಂಪನಿಗಳಿಗೆ ಸಂಬಂಧಪಟ್ಟ ಕೇಸುಗಳನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಳ್ಳಲಾಗಿದೆ" ಎಂದರು[೧೮].

ಶಿವನಗೌಡರ ಪಾಟೀಲ್ (ಸಂತಹಳ್ಳಿ ಕಾರವಾರ ಜಿಲ್ಲೆ ಶಿರಸಿ ತಾಲ್ಲೂಕು) ಇವರು "ಜಮೀನು ಕೇಸ್‌ಗಾಗಿ ೨ ವರ್ಷದಿಂದ ಶಿರಿಸಿ ಕೋರ್ಟ್‌ಗೆ ತಿರುಗುತ್ತಾ ಇದ್ದೆ. ಆಗ ಹೈಕೋರ್ಟ್‌ಗೆ ಬೆಂಗಳೂರಿಗೆ ಹೋಗಿದ್ದೆ. ಧಾರವಾಡಕ್ಕೆ ಹೈಕೋರ್ಟ್ ಬರ್‍ತೈತಿ ಹೋಗಿ ಅಂದ್ರು, ತುಂಬಾ ಖುಷಿಯಾಯ್ತು. ಬೆಂಗಳೂರಿಗೆ ಹೋಗಿ ಬರೋಕೆ ತುಂಬಾ ಹಣ ಬೇಕಾಗಿತ್ತು. ಈಗ ಇಲ್ಲೇ ಆದ್ದರಿಂದ ಕಡಿಮೆ ದುಡ್ಡಾದರೂ ಸಾಕು. ಹೊಸದಾಗಿ ಹೈಕೋರ್ಟ್‌ಗೆ ಕೇಸ್ ಕೊಡೋಕೆ ಬಂದೀನಿ" ಎಂದರು[೧೯].

ಗಂಗಪ್ಪ ಮಡಗೂ (ತಡಕೋಡ ಗ್ರಾಮ ಧಾರವಾಡ ತಾಲ್ಲೂಕು) ಇವರು "ಜಮೀನು ಖರೀದಿ ಹಿಡಿದಿದ್ದು, ಖರೀದಿಗೆ ಕೊಟ್ಟು ಕೇಸ್ ಹಾಕೆವು. ಈ ಕೇಸ್‌ಗಾಗಿ ೫ ವರ್ಷದಿಂದ ಹೈಕೋರ್ಟ್‌ಗೆ ಹೋಗಿ ಬರ್‍ತಾ ಇದ್ದೆ. ಒಮ್ಮೆ ಹೋಗಿ ಬರಬೇಕು ಅಂದ್ರೇ ರೂ ೨ ಸಾವಿರ ಖರ್ಚಾಗಿತ್ತು. ಅಲ್ದೆ ಕೆಲಸವನ್ನು ಬಿಟ್ಟು ಹೋಗಬೇಕಾಗಿತ್ತು. ಈಗ ಕೋರ್ಟ್ ಧಾರವಾಡಕ್ಕೆ ಬಂದಿರೋದು ಒಳ್ಳೆದಾಯ್ತು. ಆಗಾಗ ಹೋಗಿ ಕೇಸ್ ಏನಾಯ್ತು ನೋಡಬಹುದು" ಎಂದರು[೨೦].

ಬಸವನಗೌಡಪ್ಪ ಪಾಟೀಲ್ ಅವರಾದಿ, ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ ಇವರು "ಜಮೀನ್ ಕೇಸ್‌ಗಾಗಿ ೧೦ ವರ್ಷದಿಂದ ಬೆಂಗಳೂರು ಹೈಕೋರ್ಟ್ ತಿರುಗಾಕತ್ತೀನಿ. ಒಮ್ಮೆ ಹೋಗಿಬರಬೇಕು ಅಂದ್ರೆ ಸಾವಿರ ಖರ್ಚು. ಅಲ್ಲಿ ವಸತಿ ಉಳಿದರೆ ಇನ್ನಷ್ಟು ಖರ್ಚು ಅಂತ ರೈಲಿಗೆ ಹೋಗಿ ರೈಲಲ್ಲಿ ಬಂದು ಬಿಡ್ತಾ ಇದ್ದೆ. ಈಗ ಧಾರವಾಡಕ್ಕೆ ಬಂದಿರೋದು ಒಳ್ಳೇದಾಯ್ತು. ಹಣ ಕಡಿಮೆ ಖರ್ಚು ಆಗುತ್ತೆ. ಆಗಾಗ ಬಂದು ಕೇಸ್ ನೋಡಿದ್ರೆ ಬೇಗ ಮುಗಿಬಹುದು ಎಂದರು.[೨೧]

ಆ ರಾಜಧಾನಿ ಬೆಂಗಳೂರು ಎಂದ ಕೂಡಲೇ ಖರ್ಚಿಗೆ ಹೆದರುತ್ತಿದ್ದ ಜನರಲ್ಲಿ ಧಾರವಾಡ ಮತ್ತು ಗುಲ್ಬರ್ಗ ಹೈಕೋರ್ಟ್ ಸಂಚಾರಿ ಪೀಠವು ಹೊಸ ಭರವಸೆ ಮೂಡಿಸಿದೆ. ಕಡಿಮೆ ಖರ್ಚಿನಲ್ಲಿ ನ್ಯಾಯ ಪಡೆಯಬಹುದೆಂಬ ಆಶಾಭಾವ ಮೂಡಿದೆ. ಹಣದ ಮುಗ್ಗಟ್ಟಿನಿಂದ ಎಷ್ಟೋ ಜನ ಹೈಕೋರ್ಟ್‌ಗೆ ಹೋಗದೆ ಸ್ಥಳೀಯ ನ್ಯಾಯಾಲಯಗಳಲ್ಲಿ ದೊರೆತ ನ್ಯಾಯಕ್ಕೆ ತೃಪ್ತಿಪಟ್ಟುಕೊಳ್ಳುವುದು ಅನಿವಾರ್ಯವಾಗಿತ್ತು. ಪ್ರತಿ ವ್ಯಾಜ್ಯಕ್ಕೂ ಬೆಂಗಳೂರಿಗೆ ಓಡುವುದು ಸಾಧ್ಯವಾಗಿರಲಿಲ್ಲ. ಈಗ ಈ ಸಂಕಷ್ಟಗಳೆಲ್ಲ ದೂರ. ತಮ್ಮ ಹತ್ತಿರವೇ ಹೈಕೋರ್ಟ್ ಪೀಠ ಇರುವಾಗ ಇನ್ನೇಕೆ ಭಯ ಎಂಬ ಆತ್ಮಸ್ಥೈರ್ಯ ತುಂಬಿದೆ. ಬಡಕಕ್ಷಿದಾರರಲ್ಲಿ ಭರವಸೆಯ ಬೀಜವನ್ನೇ ಬಿತ್ತಿದೆ. ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಆರಂಭವಾಗಿದ್ದರಿಂದ ಬಡಕಕ್ಷಿದಾರರಿಗೆ ಅನುಕೂಲತೆಯೇ ಹೆಚ್ಚಾಗಿದೆ ಎಂದು ತಿಳಿಸಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಮರುಳಸಿದ್ಧಯ್ಯ ಎಚ್.ಎಂ. (ಸಂ),ಕೋಚೆ ನ್ಯಾಯದೃಷ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ ೮೮–೮೯, ೧೯೯೬.

೨. ಅದೇ ಪುಸ್ತಕ, ಪುಟ ೯೪ ಮತ್ತು ೯೫.

೩. ಉತ್ತರ ಕರ್ನಾಟಕ ಹೈಕೋರ್ಟ್ ಪೀಠ ವಿಶೇಷಾಂಕ ೦೪.೦೭.೨೦೦೭

೪. ಅದೇ ಪುಟ

೫. ಕರ್ನಾಟಕ ವಾರ್ತೆ ೦೫.೦೭.೨೦೦೮

೬. ಅದೇ ಪುಟ

೭. ಅದೇ ಪುಟ

೮. ಅದೇ ಪುಟ

೯. ಕರ್ನಾಟಕ ವಾರ್ತೆ (ಸಂಚಾರಿ ಹೈಕೋರ್ಟ್) ೦೮.೦೭.೨೦೦೮

೧೦. ಸಂದರ್ಶನ ೧೩.೦೮.೨೦೦೯

೧೧. ಸಂದರ್ಶನ ೧೩.೦೮.೨೦೦೯

೧೨. ಸಂದರ್ಶನ ೧೩.೦೮.೨೦೦೯

೧೩. ಸಂದರ್ಶನ ೧೩.೦೮.೨೦೦೯

೧೪. ಸಂದರ್ಶನ ೨೮.೦೭.೨೦೦೯

೧೫. ಸಂದರ್ಶನ ೦೯.೦೯.೨೦೦೯

೧೬. ಸಂದರ್ಶನ ೦೯.೦೯.೨೦೦೯

೧೭. ಸಂದರ್ಶನ ೮.೦೯.೨೦೦೯

೧೮. ಸಂದರ್ಶನ ೨೮.೦೭.೨೦೦೯

೧೯. ಕರ್ನಾಟಕ ವಾರ್ತೆ (ಸಂಚಾರಿ ಹೈಕೋರ್ಟ್) ೦೮.೦೭.೨೦೦೮

೨೦. ಅದೇ ಪುಟ

೨೧. ಅದೇ ಪುಟ

* * *

ಅಧ್ಯಾಯ–೫

ಸಮಾರೋಪ

ಅಧ್ಯಾಯ–೫

ಸಮಾರೋಪ

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕಾಗಿ ನಡೆದ ಚಳವಳಿಯ ಬಗ್ಗೆ ವಿವರಿಸುವ ಮೊದಲು ಕರ್ನಾಟಕದಲ್ಲಿ ನ್ಯಾಯಾಂಗ ವ್ಯವಸ್ಥೆಯು ಬೆಳೆದು ಬಂದ ಬಗೆ ಮತ್ತು ಪ್ರಾಚೀನ ಕಾಲದಲ್ಲಿ ನ್ಯಾಯಾಲಯಗಳ ಕಲ್ಪನೆ ಹೇಗೆ ಬಂತು ಮತ್ತು ನ್ಯಾಯಾಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಎರಡನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ರಾಜನು ತನ್ನ ನ್ಯಾಯಾಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದನು. ನ್ಯಾಯ ಪ್ರದಾನ ಮಾರ್ಗದಿಂದ ಭಂಡಾರವನ್ನು ಸಮೃದ್ಧಿಗೊಳಿಸುವುದು. ವಾದಿಗಳಿಗೆ ನಿಷ್ಪಕ್ಷಪಾತವಾದ ನ್ಯಾಯ ಇದ್ದು ನ್ಯಾಯಾಡಳಿತ ನಡೆಸುವುದು ರಾಜ್ಯದ ಮೂಲ ಪ್ರಕಾರ್ಯಗಳಲ್ಲಿ ಒಂದಾಗಿತ್ತು. ಹೊಯ್ಸಳರು ಹೆಚ್ಚಾಗಿ ತಮಗೆ ಗಂಗರಿಂದ ಮತ್ತು ಚಲುಕ್ಯರಿಂದ ಬಳುವಳಿಯಾಗಿ ಬಂದ ನ್ಯಾಯಾಡಳಿತ ಕ್ರಮವನ್ನೇ ಅನುಸರಿಸಿದರು. ಗಂಗರು, ಕದಂಬರು, ಚಲುಕ್ಯರು ಮತ್ತು ರಾಷ್ಟ್ರಕೂಟರು ಕೇವಲ ಸಾಮಾನ್ಯ ಆಡಳಿತದಲ್ಲಿ ಅಷ್ಟೇ ಅಲ್ಲದೆ ನ್ಯಾಯಾಡಳಿತದಲ್ಲಿಯೂ ಕೂಡ ಸ್ಮೃತಿಗಾರರ ಆದೇಶಗಳನ್ನು ಅನುಸರಿಸಿದರೆಂಬುದು ಅವರ ದಾಖಲೆಗಳಿಂದ ಕಂಡುಬರುತ್ತದೆ. ಅತೀ ಮಹತ್ವದ ಪ್ರಕರಣಗಳಲ್ಲಿ ರಾಜನೇ ನ್ಯಾಯದಾನದ ಪರಮಾಧಿಕಾರಿಯಾಗಿದ್ದನು. ನ್ಯಾಯನಿಷ್ಠನಾದ ರಾಜನು ತನ್ನ ಸ್ವಂತ ಸಂಬಂಧಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿಯೂ ಕೂಡ ನಿಷ್ಪಕ್ಷಪಾತವಾಗಿ ವರ್ತಿಸುತ್ತಿದ್ದನು. ಅತೀ ಮಹತ್ವದ ಮತ್ತು ಗಂಭೀರ ಪ್ರಕರಣದಲ್ಲಿ ಸಂತ್ರಸ್ತ ಪಕ್ಷಕಾರರು ರಾಜನಿಗೆ ಮೇಲ್ಮನವಿ ಮಾಡಬಹುದಾಗಿತ್ತು. ಅವನು ಅವರನ್ನು ಮತ್ತು ಪ್ರತಿವಾದಿಗಳನ್ನು ವಿಚಾರಿಸುತ್ತಿದ್ದನು. ಬಹಿರಂಗ ನ್ಯಾಯಾಲಯಗಳಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದನು. ವಿಜಯನಗರ ಕಾಲದಲ್ಲಿ ರಾಜದ್ರೋಹ, ಅವಧಿ ಪರಿಮಿತಿ ಮತ್ತು ಸೇವಾ ಇನಾಮುಗಳ ಉಪಭೋಗ ಮೊದಲಾದಂತಹ ವಿಷಯಗಳಿಗೆ ಸಂಬಂಧಿಸಿದ ವಿಶಿಷ್ಟ ವಿಧಿಗಳಿದ್ದವು. ಪ್ರಥಮತಃ ಒಂದು ಸಂಚು ಮತ್ತು ಇಡೀ ಸಮಾಜ ವಿರುದ್ಧದ ದ್ರೋಹಕ್ಕಿಂತ ಹೆಚ್ಚಾಗಿ ರಾಜ್ಯ ಅಥವಾ

ರಾಜದ್ರೋಹವನ್ನು ಹೀನಾಪರಾಧವೆಂದು ಪರಿಗಣಿಸಲಾಗುತ್ತಿತ್ತು. ಬಹಮನ್‌ಷಾಹಿ ಕಾಲದಲ್ಲಿ ರಾಜನು ಕೇವಲ ರಾಜ್ಯಾಧಿಪತಿಯಷ್ಟೇ ಅಲ್ಲದೇ ನ್ಯಾಯಾಧೀಶನೂ ಸೇನಾನಾಯಕನೂ ಮತ್ತು ಸಾರ್ವಜನಿಕ ಧರ್ಮಾಧಿಕಾರಿಯೂ ಆಗಿದ್ದನು. ಹೈದರ್ ಮತ್ತು ಟಿಪ್ಪು ಇವರ ರಾಜ್ಯಭಾರ ಕಾಲದಲ್ಲಿ ಕಂದಾಯಾಧಿಕಾರಿಗಳಿಗೆ ನ್ಯಾಯಿಕ ಪ್ರಕಾರ್ಯಗಳನ್ನು ವಹಿಸಿಕೊಡಲಾಗಿತ್ತು. ಬ್ರಿಟಿಷರು ೧೮೩೧ರಲ್ಲಿ ಮೈಸೂರು ರಾಜ್ಯದ ಆಡಳಿತವನ್ನು ವಹಿಸಿಕೊಂಡ ಬಳಿಕ ಒಂದು ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಮತ್ತು ನ್ಯಾಯಾಲಯಗಳಿಗೆ ಮಾರ್ಗದರ್ಶನ ನಿಯಮಗಳನ್ನು ರಚಿಸುವ ಬಗ್ಗೆ ೧೮೩೪ರ ಅಕ್ಟೋಬರ್ ೨೭ರಂದು ಆದೇಶವನ್ನು ಹೊರಡಿಸಲಾಯಿತು. ಈ ಆದೇಶದ ಮೇರೆಗೆ ಕೆಳಕಂಡ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ೧) ಅಮೀನಲರು ೨) ಪಟ್ಟಣ ಮುನ್ಸೀಫರು ೩) ಸದರ್ ಮುನ್ಸಿಮುಫ್ ೪) ಮುಖ್ಯ ಸದರ್ ಮನ್ಸಿಮುಫ್ ಮತ್ತು ೫)ಯುರೋಪಿಯನ್ ಸೂಪರಿಂಟೆಂಡೆಂಟರ್ ನ್ಯಾಯಾಲಯಗಳು, ಕೆಲವು ಪ್ರಕರಣಗಳಲ್ಲಿ ಪಂಚಾಯಿತಿಯ ಸಹಾಯ ಪಡೆಯುವುದು ಕಡ್ಡಾಯವಾಗಿತ್ತು. ಅಮೀನರು ಮತ್ತು ಪಟ್ಟಣ ಮುನ್ಸಿಫರ ನ್ಯಾಯಾಲಯಗಳು ಮೂಲ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿದ್ದವು. ಅಮೀನರು ೧. ಕ್ಷಿಪ್ರ ರೀತಿಯಲ್ಲಿ ತೀರ್ಮಾನವಾಗುವ ೨೦ ರೂಪಾಯಿ ಮೌಲ್ಯವು ಮೀರದ ಪ್ರಕರಣಗಳನ್ನು ೨. ಕ್ರಮಬದ್ಧವಾಗಿ ವ್ಯವಹರಣೆಗಳನ್ನು ದಾಖಲುಗೊಳಿಸಿದ ತರುವಾಯ ೧೦೦ ರೂಪಾಯಿಗೆ ಮೀರದ ದಾವೆಗಳನ್ನು ಮತ್ತು ೩. ಪಂಚಾಯತಿನ ಸಹಾಯ ದೊರೆತಾಗ ೫೦೦ ರೂಪಾಯಿಗೆ ಮೀರದ ಎಲ್ಲ ಬೇಡಿಕೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದರು. ಎರಡನೇಯ ಮತ್ತು ಮೂರನೇಯ ಬಗೆಯ ಪ್ರಕರಣಗಳಲ್ಲಿ ಅಮಿಲನ ತೀರ್ಮಾನದ ಮೇಲೆ ಸದರ್ ಮುನ್ಸಿಫ್ ನ್ಯಾಯಾಲಯಕ್ಕೆ ಮಾತ್ರ ಮೇಲ್ಮನವಿ ನಡೆಯುತ್ತಿತ್ತು. ಮುಖ್ಯ ಸದರ್ ಮುನ್ಸೀಫನ ಮತ್ತು ಯೂರೋಪಿಯನ್ ಸೂಪರಿಂಟೆಂಡೆಂಟನ ಈ ಎರಡು ನ್ಯಾಯಾಲಯಗಳು ಮೂಲ ಮತ್ತು ಅಪೀಲು ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದವು. ೧೮೬೨ ರಿಂದ ೧೮೮೭ರವರೆಗಿನ ಅವಧಿಯಲ್ಲಿ ನ್ಯಾಯಾಂಗಕ್ಕೆ ಮನ್ನಣೆ ನೀಡುವ ಅನೇಕ ಕ್ರಮಗಳನ್ನು ಒಂದರ ಮೇಲೊಂದರಂತೆ ಕೈಗೊಳ್ಳಲಾಯಿತು. ರಾಜ್ಯದಲ್ಲಿ ೧೮೭೭ರಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯನ್ನು (೧೮೭೭ರ ಅಧಿನಿಯಮವನ್ನು) ಜಾರಿಗೆ ಗೊಳಿಸಿದ ನಂತರ ನ್ಯಾಯಾಂಗ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ತರಲಾಯಿತು. ಇನ್ನು ಸ್ಥಳೀಯ ನ್ಯಾಯಾಡಳಿತಕ್ಕೆ ಸಂಬಂಧಪಟ್ಟಂತೆ ಪ್ರಾಚೀನ ಕರ್ನಾಟಕದಲ್ಲಿ ನ್ಯಾಯ ತೀರ್ಮಾನವು ಗ್ರಾಮಸಭೆ ಇಲ್ಲವೆ ಪಟ್ಟಣ ಸಮುದಾಯಗಳೆಂಬ ಸ್ಥಳೀಯ ಆಡಳಿತದಿಂದ ಬಹುಮಟ್ಟಿಗೆ ನಡೆಯುತ್ತಿತ್ತು.

೧೯೨೭ರಲ್ಲಿ ಧಾರವಾಡ ಉಳವಿ ಚೆನ್ನಬಸಪ್ಪನ ಗುಡ್ಡದ ಮೇಲೆ ಕರ್ನಾಟಕ ರಾಜಕೀಯ ಪರಿಷತ್ತಿನ ಮೊದಲ ಅಧಿವೇಶನ ನಡೆಯಿತು. ಅಧಿವೇಶನದ ಅಧ್ಯಕ್ಷತೆಯನ್ನು ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ನಿವೃತ್ತರಾಗಿದ್ದ ವಿ.ಪಿ.ಮಾಧವರಾಯರು ವಹಿಸಿದ್ದರು. ಆ ಸಂದರ್ಭದಲ್ಲಿ ಹೈಕೋರ್ಟ್ ಪೀಠ ಎಲ್ಲಿ ಆಗಬೇಕು ಎಂದು ಚರ್ಚೆಯಾಗಿತ್ತು ಎಂದು ಬಿ.ಡಿ. ಹಿರೇಮಠ ಅವರ ಅಭಿಪ್ರಾಯವಾಗಿದೆ. ನಂತರ ಭಾಷಾವಾರು ಪ್ರಾಂತ್ಯಗಳ ವಿಂಗಡಣೆ ಸಮಯದಲ್ಲಿ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಅಗತ್ಯವಿದೆ ಎಂದು ಕೂಗು ಎದ್ದಿತು. ೧೯೫೪ ಜೂನ್ ೫ ಮತ್ತು ೭ರಂದು ಅಂದಿನ ಮೈಸೂರು ಸರ್ಕಾರದ ಮಂತ್ರಿಗಳು ಮತ್ತು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ

ಉನ್ನತ ಸಮಿತಿಯೊಂದು ರಚನೆಯಾಗಿತ್ತು. ಆ ಸಮಿತಿಯಲ್ಲಿದ್ದ ಸದಸ್ಯರೆಂದರೆ ಮೈಸೂರು ಸರ್ಕಾರದ ಮಾಜಿ ಮಂತ್ರಿ ಎಂ.ಶೇಷಾದ್ರಿ, ಮೈಸೂರು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಟಿ.ಸಿಂಗಾರವೇಲು. ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ವಿ.ಎಲ್.ಡಿಸೌಜಾ ಬೆಂಗಳೂರು ಜಿಲ್ಲಾ ಮಂಡಳಿಯ ಮಾಜಿ ಅಧ್ಯಕ್ಷ ಹೆಚ್.ಆರ್.ಗುರುವಾರೆಡ್ಡಿ ಮತ್ತು ಚಿತ್ರದುರ್ಗ ನ್ಯಾಯವಾದಿಗಳಾಗಿದ್ದ ಓ.ವೀರಬಸಪ್ಪ. ಈ ಸಮಿತಿ ನೀಡಿರುವ ವರದಿಯಲ್ಲಿ ಹುಬ್ಬಳ್ಳಿ, ಧಾರವಾಡದಲ್ಲಿ ಹೈಕೋರ್ಟ್ ಪೀಠವೊಂದು ಅಗತ್ಯವಿದೆ ಎಂಬ ಅಂಶ ಪ್ರಧಾನವಾಗಿ ಉಲ್ಲೇಖವಾಗಿದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಯಾಕೆ? ಎಂಬುದಕ್ಕೆ ಈ ಸಮಿತಿ ನೀಡುವ ಕಾರಣವೂ ಹೀಗಿದೆ. ದೂರದ ಊರುಗಳಿಂದ ಕಕ್ಷಿದಾರರು ಬೆಂಗಳೂರಿಗೆ ತೆರಳುವುದು ಕಷ್ಟದಾಯಕ. ಆದ್ದರಿಂದ ರಾಜ್ಯದ ಕೇಂದ್ರ ಭಾಗದಲ್ಲಿ ಹೈಕೋರ್ಟ್ ಪೀಠವೊಂದು ಸ್ಥಾಪನೆಯಾದರೆ ಅದರಿಂದ ಕಕ್ಷಿದಾರರಿಗೆ ಬಹಳಷ್ಟು ಅನುಕೂಲವಾಗುತ್ತದೆ. ಈ ವಿಷಯವನ್ನು ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು ಎಂಬ ಕಾರಣವನ್ನು ನೀಡಿತ್ತು ಆದರೆ ಇಂತಹ ವರದಿಗಳನ್ನು ಸರ್ಕಾರಗಳು ಕಣ್ಣೆತ್ತಿಯೂ ನೋಡದೆ ತಾತ್ಸಾರ ಮಾಡಿತ್ತು. ಸಮಿತಿಯು ಸರ್ಕಾರಕ್ಕೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನೇನೋ ನೀಡಿತು. ಆದರೆ ಅವು ಕೊನೆ ತನಕ ಅನುಷ್ಠಾನಕ್ಕೆ ಬಾರದೆ ಹೋಗಿದ್ದು ದುರಂತ. ಚಳವಳಿ ಮತ್ತು ಉಗ್ರ ಪ್ರತಿಭಟನೆ ಮೂಲಕವೇ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಲಭಿಸಿರುವುದು ಇಲ್ಲಿ ಗಮನಾರ್ಹ.

ಅಧ್ಯಾಯ ಮೂರನೇ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕಾಗಿ ವಿವಿಧ ರಾಜಕೀಯ ಪಕ್ಷ ಮತ್ತು ವಿವಿಧ ಸಂಘಟನೆಗಳ ಮೂಲಕ ನಡೆದ ಚಳವಳಿಗಳ ಬಗ್ಗೆ ವಿವರಿಸಲಾಗಿದೆ. ೧೯೬೨ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಡಿ.ಜತ್ತಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಉದ್ಘಾಟನಾ ಸಮಾರಂಭದಲ್ಲಿ ಅವಳಿನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ವಿಚಾರಕ್ಕೆ ಚಾಲನೆ ನೀಡಿದರು. ಆದರೆ ಅಂದಿನ ಸಂದರ್ಭದಲ್ಲಿ ಇದು ಕಾರ್ಯಗತವಾಗಲಿಲ್ಲ. ೧೯೭೫ರಲ್ಲಿ ಕಾನೂನು ಸಚಿವರಾಗಿದ್ದ ಡಿ.ಕೆ.ನಾಯ್ಕರ್ ೭೫ ಜನ ಶಾಸಕರ ಸಹಿ ಸಂಗ್ರಹಿಸಿ ಹೈಕೋರ್ಟ್‌ಪೀಠದ ಬೇಡಿಕೆಗೆ ಅಧಿಕೃತ ರೂಪ ನೀಡಿದ್ದರು. ಇದಕ್ಕಾಗಿ ಸಂಪುಟದ ಒಪ್ಪಿಗೆ ಪಡೆದು, ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಚರ್ಚಿಸಿ, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಮಾಜಿ ಮುಖ್ಯಮಂತ್ರಿ ದಿವಂಗತ ಆರ್.ಗುಂಡೂರಾವ್ ತಮ್ಮ ಅಧಿಕಾರಾವಧಿಯಲ್ಲಿ ಅವಳಿನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಪ್ರಸ್ತಾವವನ್ನು ಶೀಘ್ರವಾಗಿ ಮನ್ನಿಸಬೇಕು ಎಂದು ಕೇಂದ್ರಕ್ಕೆ ಒತ್ತಾಯದ ಮನವಿ ಸಲ್ಲಿಸಿದ್ದರು. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ರಚಿಸಿದ್ದ ೧೯೮೧ರಲ್ಲಿ ನ್ಯಾಯಮೂರ್ತಿ ಜಸ್ವಂತ್‌ಸಿಂಗ್ ಆಯೋಗದ ವ್ಯಾಪ್ತಿಯನ್ನು ಗುವಾಹಟಿ, ಕರ್ನಾಟಕ, ಮಧ್ಯ ಪ್ರದೇಶ, ಮದ್ರಾಸ್ ರಾಜ್ಯಗಳ ಹೈಕೋರ್ಟ್ ಪೀಠಗಳ ಬೇಡಿಕೆಗೂ ವಿಸ್ತರಿಸಿತು. ಈ ಆಯೋಗವು ಕರ್ನಾಟಕದಲ್ಲಿ ಇನ್ನೊಂದು ಹೈಕೋರ್ಟ್ ಪೀಠ ಸ್ಥಾಪನೆ ಕುರಿತು ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿಯಲ್ಲಿ ವಿಚಾರಣೆ ನಡೆಸಿತು. ನಂತರ ೧೯೮೭ರಲ್ಲಿ ಆಯೋಗವು ಕೇಂದ್ರಕ್ಕೆ ವರದಿ ಸಲ್ಲಿಸಿ, ಉತ್ತರ ಕರ್ನಾಟಕದಲ್ಲಿ ಪೀಠ ಸ್ಥಾಪನೆಗೆ ಶಿಫಾರಸ್ಸು ಮಾಡಿತು. ಆದರೂ ಸಹ ಇದು ಕಾರ್ಯಗತವಾಗಲಿಲ್ಲ. ರೊಚ್ಚಿಗೆದ್ದ ಧಾರವಾಡ ವಕೀಲರ ಸಂಘ ಈ ಬೇಡಿಕೆಯನ್ನು ಚಳವಳಿಯಾಗಿ ಪರಿವರ್ತಿಸಿತು. ಹಿರಿಯ ವಕೀಲರಾದ

ಎಂ.ಜಿ.ಅಗಡಿ ನೇತೃತ್ವದಲ್ಲಿ ೧೯೯೧ರ ಮಾರ್ಚ್ ೨೫ರಂದು ಹೈಕೋರ್ಟ್ ಪೀಠ ಸ್ಥಾಪನಾ ಹೋರಾಟದ ಕೇಂದ್ರ ಕ್ರಿಯಾ ಸಮಿತಿಯನ್ನು ರಚಿಸಲಾಯಿತು. ಜಿಲ್ಲೆಯಾದ್ಯಂತ ಪ್ರಜಾತಾಂತ್ರಿಕ ಚಳವಳಿಗಳು ಪ್ರಾರಂಭವಾದವು. ಅಂದಿನ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರನ್ನು ವಕೀಲರ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಿತು. ಮತ್ತೆ ೧೯೯೨ ರಲ್ಲಿ ೨ನೇ ಹಂತದ ಚಳವಳಿ ಆರಂಭವಾಗಿತು. ಸತ್ಯಾಗ್ರಹ ಮುಂತಾದ ಚಳವಳಿಗಳು ನಡೆದವು. ನಂತರ ೧೯೯೬ರಲ್ಲಿ ಧಾರವಾಡ ವಕೀಲರ ಸಂಘದ ಅಧ್ಯಕ್ಷರಾಗಿ ಬಿ.ಡಿ.ಹಿರೇಮಠ ಆಯ್ಕೆಯಾದ ನಂತರ ಈ ಚಳವಳಿ ಉಗ್ರ ಸ್ವರೂಪ ಪಡೆಯಿತು. ಉಪವಾಸ ಸತ್ಯಾಗ್ರಹಗಳು, ಬಂದ್ ಮತ್ತು ಕೋರ್ಟ್ ಕಲಾಪಗಳಿಂದ ದೂರ ಉಳಿಯುವುದು ಈ ರೀತಿಯ ಪ್ರತಿಭಟನೆ ನಡೆದರೂ ಕೂಡ ಕೇವಲ ಭರವಸೆಯ ಮೇಲೆ ಒಂದು ಹಂತದಲ್ಲಿ ತಣ್ಣಗಾಗುವುದು ಮತ್ತೊಂದು ಹಂತದಲ್ಲಿ ಮತ್ತೆ ಚಳವಳಿಯು ಆರಂಭವಾಗುವುದು ಸಾಮಾನ್ಯವಾಗಿತ್ತು.

ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್ ಅವರು ನ್ಯಾಯಮೂರ್ತಿ ಜೆ.ಸಿ.ಭರೂಕ್ ನೇತೃತ್ವದ ಏಳು ಸದಸ್ಯರ ಸಮಿತಿ ರಚಿಸಿತು. ಈ ಸಮಿತಿಯ ಐವರು ಸದಸ್ಯರು ಪೀಠ ಸ್ಥಾಪನೆಗೆ ಒಲವು ತೋರಿದ್ದರೆ ಇಬ್ಬರು ಅವಶ್ಯಕತೆ ಇಲ್ಲ ಎಂದಿದ್ದರು. ಹೈಕೋರ್ಟ್ ಪೀಠಕ್ಕಾಗಿ ನಿರಂತರವಾಗಿ ಚಳವಳಿ ನಡೆದಿದ್ದರಿಂದ ೨೦೦೩ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮುಖ್ಯ ನ್ಯಾಯಮೂರ್ತಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಪೀಠ ಸ್ಥಾಪನೆಯ ಸ್ಥಳ ಕುರಿತು ವಿವಾದ ಹುಟ್ಟಿಕೊಂಡಿತ್ತು. ಇದಕ್ಕಾಗಿಯೇ ನ್ಯಾಯಮೂರ್ತಿ ಎಸ್.ಆರ್. ನಾಯಕ ನೇತೃತ್ವದ ಮೂವರು ಸದಸ್ಯರ ಸಮಿತಿ ರಚಿಸಲಾಯಿತು. ನಂತರ ಕರ್ನಾಟಕದಲ್ಲಿ ಎರಡು ಸಂಚಾರಿ ಪೀಠಗಳು (ಒಂದು ಧಾರವಾಡದಲ್ಲಿ ಮತ್ತೊಂದು ಗುಲ್ಬರ್ಗಾದಲ್ಲಿ) ಆರಂಭವಾದವು.

ಅಧ್ಯಾಯದಲ್ಲಿ ನಾಲ್ಕನೇ ಚಳವಳಿಗಳ ಸ್ವರೂಪದ ಬಗ್ಗೆ ವಿವರಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳು ಸ್ಥಾಪನೆಯಾದರೆ ಯಾರಿಗೆ ಇವು ಅನುಕೂಲವಾಗುತ್ತದೆ ಎಂಬ ವಿಷಯವನ್ನು ಚರ್ಚಿಸಲಾಗಿದೆ. ಪೀಠದ ಲಾಭವನ್ನು ಬಡಜನರು ಪಡೆದುಕೊಳ್ಳುವುದು ಮುಖ್ಯವಾಗಿರುತ್ತದೆ. ಏಕೆಂದರೆ ಅನ್ಯಾಯಕ್ಕೆ ತುತ್ತಾಗುವ ಜನರಲ್ಲಿ ಶೇ. ೯೦ರಷ್ಟು ಬಡವರಾಗಿರುತ್ತಾರೆ. ಇವರಿಗೆ ಕಡಿಮೆ ಖರ್ಚಿನಲ್ಲಿ ಶೀಘ್ರ ನ್ಯಾಯ ದೊರೆಯುವುದು ಮುಖ್ಯವಾಗಿರುತ್ತದೆ. ನ್ಯಾಯ ಪರಿಪಾಲನೆಯ ಉದ್ದೇಶ ಸೂಕ್ತ ನ್ಯಾಯದಾನ ಮಾಡುವುದು. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಅನ್ಯಾಯಕ್ಕೆ ಬಲಿಯಾದ ಬಡಜನರಿಗೆ ನ್ಯಾಯ ಒದಗಿಸಲಾಗುತ್ತದೆ.

* * *

ಅನುಬಂಧ

೧. ಗ್ರಂಥಋಣ
೨. ಸಂದರ್ಶನಗಳು
೩. ಪತ್ರಿಕೆಗಳು
೪. ನಕ್ಷೆಗಳು
೫. ಛಾಯಾಚಿತ್ರಗಳು

೧. ಗ್ರಂಥಋಣ

೧. ಅಗರ್‌ವಾಲ, ಬಿ.ಆರ್., ಅನುವಾದ: ಗೌತಮ್ ಎಸ್.ಆರ್. ನಮ್ಮ ನ್ಯಾಯಾಂಗ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ೨೦೦೦.

೨. ಕಟಗೇರಿ ಹ., ಗತಕಾಲದ ಧಾರವಾಡ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ ೨೦೦೮

೩. ಕಂಠೀರಾವ್., ನಮ್ಮ ನ್ಯಾಯವೇತ್ತರು, ಜಾಗೃತ ಭಾರತ, ಧಾರವಾಡ ೧೯೭೯

೪. ಗೋಪಾಲರಾವ್ ಎಚ್.ಎಸ್., ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೯೬.

೫. ಗೋವಿಂದರಾಜು ಸಿ.ಆರ್., ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಎಸ್.ಬಿ.ಎಸ್. ಪಬ್ಲಿಷರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು ೧೯೯೮.

೬. ಗೌತಮ್ ಎಸ್.ಆರ್., ನಿತ್ಯ ಜೀವನದಲ್ಲಿ ಕಾನೂನು, ಪುಸ್ತಕ–೨ ನವಕರ್ನಾಟಕ ಪ್ರಕಾಶನ ೧೯೯೨.

೭. ಚೆನ್ನಬಸಪ್ಪ ಕೋ., ನ್ಯಾಯಾಧೀಶನ ನೆನಪುಗಳು, ವಾಗ್ದೇವಿ ಪುಸ್ತಕಗಳು, ದೇವರಾಜ ಅರಸ್ ರಸ್ತೆ, ಮೈಸೂರು ೧೯೯೪

೮. ತಂಬಂಡ ವಿಜಯ್ ಪೂಣಚ್ಚ., ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಚರಿತ್ರೆ : ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧.

೯. ಬಣಕಾರ್ ಬಿ.ಜಿ., ಸಮಗ್ರನೋಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೩

೧೦. ಬೆಂಜಮಿನ್ ಎನ್ ಕಾರ್ಡೋಜ. ಅನುವಾದ: ರಾಜ. ಸಿ.ಕೆ.ಎನ್., ನ್ಯಾಯಿಕ ಪ್ರಕ್ರಿಯೆಯ ಸ್ವರೂಪ, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

೧೧. ಮರುಳಸಿದ್ಧಯ್ಯ ಎಚ್.ಎಂ.,(ಸಂ) ಕೋಚೆ ನ್ಯಾಯದೃಷ್ಟಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೬.

೧೨. ಮಿರ್ದೆ ಎಮ್.ಎಮ್., ಕಾಲದೊಂದಿಗೆ ಕಾನೂನಿನ ಓಟ, ಜಾಗೃತ ಭಾರತ, ಧಾರವಾಡ, ೧೯೮೪

೧೩. ಲಕ್ಷ್ಮಣ್ ತೆಲಗಾವಿ., ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ವಾಲ್ಮೀಕಿ ಸಾಹಿತ್ಯ ಸಂಪದ. (ಇಸವಿ)

೧೪. ವಿರೂಪಾಕ್ಷಿ ಪೂಜಾರಹಳ್ಳಿ., ಜಲಸಂಬಂಧಿ ಚಳವಳಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೯.

೧೫. ಸುಭಾಷ್ ಸಿ.ಕಶ್ಯಪ್. ಅನುವಾದ: ಗುರುಮೂರ್ತಿ ಬಿ.ಎನ್., ಪ್ರಜೆಗಳು ಮತ್ತು ಸಂವಿಧಾನ, ಪ್ರಕಾಶನ ವಿಭಾಗ, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಭಾರತಸರ್ಕಾರ, ಪಾಟಿಯಾಲ ಹೌಸ್, ನವದೆಹಲಿ, ೨೦೦೦.

೧೬. ಸೀತಾರಾಮಯ್ಯ.ವಿ., ಕಾನೂನು ನ್ಯಾಯ ರಾಜ್ಯಾಂಗ ತತ್ವ, ವಿ.ಸೀ. ಸಂಪದ, ರಾಜೀವನಗರ, ಬನಶಂಕರಿ, ೩ನೇ ಸ್ಟೇಜ್, ಬೆಂಗಳೂರು, ೨೦೦೭.

೧೭. ಶ್ರೀನಿವಾಸ ಸಿರನೂರಕರ್., ವಿಜ್ಞಾನೇಶ್ವರ ಮಿತಾಕ್ಷರ, ಪ್ರಸಾರಾಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗಾ, ೨೦೦೫.

೧೮. ದಿವಾಕರ್ ಆರ್.ಆರ್., ಕರ್ನಾಟಕ ಏಕೀಕರಣ ಕಥೆ, ಹುಬ್ಬಳ್ಳಿ, ೧೯೫೬.

ಇಂಗ್ಲಿಷ್

19. Bhagawathi.P.N., Law Freedom and Social change, Bangalore, Bangalore University 1979.

20. Biju.M.R., Politics of Democracy and Decentralisation in India, Atlantic Publishers, New Delhi 1997.

21. Chatterjee.N.C., Judicial Review and fundamental rights under the constitution of India, Bangalore, Bharadwaj Publishers 1966.

22. Carter.L.H., Administrative Law and Politics, cases and comments, Harper Callins, New York 1991.

23. Desai.P.B (ed)., A History of Karnataka, Karnataka University, Dharwad 1970.

24. Gandhi.J.S., Lawyers and Touts, Hindusthan Publishing Corporation, New Delhi 1982.

25. Gajendra Gakhar.P.B., Law Liberty and Social Justice, Bombay, Asia Publishing House, 1965.

26. Griffith.J.A.C., The Politics of Judiciary, Manchester, Manchester University Press, 1977.

27. Gandhi.J.S., Sociology of Legal Profession, Law and Legal System, Gan Publishing House, Delhi 1987.

28. John Kelsall., Bellary Gazetter, Government of Karnataka Publication, 2004.

29. Krishna Iyer.V.R., Indian Justice, Vedpol Law House, Indore, 1984.

30. Krishna Iyer.V.R., Constitutional Challenges and Democratic Response, Jagrut Bharat, Dharwad, 1985.

31. Kulshreshtha.S.K., Fundamental Rights and the Supreme Court, Rawat Publications, Jaipur and New Delhi, 1995.

32. Lalith Bhasin., Lawyers in the Freedom Struggle of India, Congress Centenary Celebration Committee, Delhi Art Press, Delhi, 1985.

33. Michanda.J. Translated from the French by Raman menon.V.K., History of Mysore, Asian Educational services , New Delhi, 2003.

34. Noorani A.G., Crisis of Judiciary, The IndiCn express, New Delhi, 1986

35. Norrani A.G., Constitutional questions in India, Published in India by Oxford University Press, 2000.

36. Raja .C.K.N, Freedom of speech and expression, extension services and publications, Karnataka University, Dharwad, 1979

37. Reddy Jag Mohan, Social Justice and the constitution waltaire, Andhra University press, 1981.

38. Raina S.M.N., Law Judges and Justice, Indore, Vedpal Law House 1979.

39. Seervai H.M., The power of Judiciary under the constitution of India, Bombay, University of Bombay, 1970

40. Shashinath Saraswathi, Right to Equality in the Indian constitution, concept Publishing company, New Delhi, 2002.

41. Singh Sehgal B.P., Law Judiciary and Justice in India, Deep and Deep Publications, New Delhi, 1993.

42. Sharma B.R., Constitutional Law and Judicial Activism, Ashish Publishing House, New Delhi, 1990.

ಗೆಜೆಟಿಯರ್‌ಗಳು

೧. ಪಾಟೀಲ ಎಂ.ಬಿ., ಕರ್ನಾಟಕ ರಾಜ್ಯ ಗೆಜೆಟಿಯರ್, ಗುಲ್ಬರ್ಗಾ ಜಿಲ್ಲೆ ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೯೭.

೨. ಮುನಿಸ್ವಾಮಿ ಆರ್., ಕರ್ನಾಟಕ ರಾಜ್ಯ ಗೆಜೆಟಿಯರ್, ವಿಜಾಪುರ ಜಿಲ್ಲೆ, ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೯೯.

೩. ವೆಂಕಟ ರಂಗೋಕಟ್ಟಿ., ಧಾರವಾಡ ಬೆಳಗಾವಿ, ವಿಜಾಪುರ, ಕಾನಡಾ ಈ ನಾಲ್ಕು ಜಿಲ್ಲೆಗಳದು ಗೆಜೆಟಿಯರ್, ಏಶಿಯನ್ ಎಜುಕೇಶನಲ್ ಸರ್ವೀಸಸ್, ನವದೆಹಲಿ, ೧೯೮೪.

೪. ಸೂರ್ಯನಾಥ್ ಕಾಮತ್.ಯು., ಕರ್ನಾಟಕ ರಾಜ್ಯ ಗೆಜೆಟಿಯರ್, ಲೋಟಸ್ ಪ್ರಿಂಟರ್ಸ್, ಬೆಂಗಳೂರು, ೧೯೮೫.

೫. ಸೂರ್ಯನಾಥ ಕಾಮತ್.ಯು., ಕರ್ನಾಟಕ ರಾಜ್ಯ ಗೆಜೆಟಿಯರ್, ಧಾರವಾಡ ಜಿಲ್ಲೆ, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೯೫.

೨. ಸಂದರ್ಶನಗಳು

೧. ಬಿ.ಡಿ.ಹಿರೇಮಠ., ವಕೀಲರು ಮತ್ತು ಧಾರವಾಡ ವಕೀಲರ ಸಂಘದ ಅಧ್ಯಕ್ಷರು, ಧಾರವಾಡ ೧೩.೦೯.೨೦೦೯

೨. ಪ್ರಫುಲ್ಲಾ ನಾಯಕ್., ಹಿರಿಯ ವಕೀಲರು., ಧಾರವಾಡ ೨೮.೦೭.೨೦೦೯

೩. ಶಾಂತಪ್ಪ, ಪೊಲೀಸ್ ಹುದ್ದೆ., ಹಗರಿ ಬೊಮ್ಮನಹಳ್ಳಿ ತಾಲೂಕು, ಸೀಗನಹಳ್ಳಿ ಕಕ್ಷಿದಾರ ೦೮.೦೯.೨೦೦೯

೪. ಹೇಮರೆಡ್ಡಿ., ವ್ಯವಸಾಯ, ಮೆಟ್ರಿ ಕಕ್ಷಿದಾರ ೦೯.೦೯.೨೦೦೯

೫. ಜೆ.ಬಸವರಾಜ., ವ್ಯವಸಾಯ, ಕಡ್ಲುಬಾಳ, ಹಗರಿಬೊಮ್ಮನಹಲ್ಲಿ ತಾಲೂಕು, ಕಕ್ಷಿದಾರ ೦೯.೦೯.೨೦೦೯

೬. ಕೆ.ಎಲ್.ಪಾಟೀಲ್., ಹಿರಿಯ ವಕೀಲರು, ಧಾರವಾಡ ೨೮.೦೭.೨೦೦೯.

೩. ಪತ್ರಿಕೆಗಳು

೧. ಪ್ರಜಾವಾಣಿ ದಿನಾಂಕ : ೧೮.೦೧.೨೦೦೨
೨. ಪ್ರಜಾವಾಣಿ ದಿನಾಂಕ : ೨೮.೦೩.೨೦೦೨
೩. ಪ್ರಜಾವಾಣಿ ದಿನಾಂಕ : ೩೧.೦೩.೨೦೦೨
೪. ಪ್ರಜಾವಾಣಿ ದಿನಾಂಕ : ೨೭.೦೨.೨೦೦೩
೫. ಪ್ರಜಾವಾಣಿ ದಿನಾಂಕ : ೧೭.೦೩.೨೦೦೩
೬. ಪ್ರಜಾವಾಣಿ ದಿನಾಂಕ : ೦೭.೦೩.೨೦೦೩
೭. ಪ್ರಜಾವಾಣಿ ದಿನಾಂಕ : ೨೪.೦೮.೨೦೦೩
೮. ಪ್ರಜಾವಾಣಿ ದಿನಾಂಕ : ೩೧.೦೮.೨೦೦೩
೯. ಪ್ರಜಾವಾಣಿ ದಿನಾಂಕ : ೧೫.೧೦.೨೦೦೩
೧೦. ಪ್ರಜಾವಾಣಿ ದಿನಾಂಕ : ೨೩.೧೦.೨೦೦೩
೧೧. ಪ್ರಜಾವಾಣಿ ದಿನಾಂಕ : ೧೪.೦೧.೨೦೦೪
೧೨. ಪ್ರಜಾವಾಣಿ ದಿನಾಂಕ : ೨೭.೦೮.೨೦೦೪
೧೩. ಪ್ರಜಾವಾಣಿ ದಿನಾಂಕ : ೦೨.೦೯.೨೦೦೪
೧೪. ಪ್ರಜಾವಾಣಿ ದಿನಾಂಕ : ೦೯.೦೯.೨೦೦೪
೧೫. ಪ್ರಜಾವಾಣಿ ದಿನಾಂಕ : ೧೪.೦೯.೨೦೦೪
೧೬. ಪ್ರಜಾವಾಣಿ ದಿನಾಂಕ : ೧೪.೦೯.೨೦೦೪
೧೭. ಪ್ರಜಾವಾಣಿ ದಿನಾಂಕ : ೧೬.೧೨.೨೦೦೭
೧೮. ಪ್ರಜಾವಾಣಿ ದಿನಾಂಕ : ೧೭.೧೨.೨೦೦೭
೧೯. ಪ್ರಜಾವಾಣಿ ದಿನಾಂಕ : ೦೪.೦೭.೨೦೦೮
೨೦. ಪ್ರಜಾವಾಣಿ ದಿನಾಂಕ : ೦೫.೦೭.೨೦೦೮
೨೧. ಪ್ರಜಾವಾಣಿ ದಿನಾಂಕ : ೦೮.೦೭.೨೦೦೮
೨೨. ಪ್ರಜಾವಾಣಿ ದಿನಾಂಕ : ೦೫.೦೭.೨೦೦೯
೨೩. ಪ್ರಜಾವಾಣಿ ದಿನಾಂಕ : ೦೬.೦೭.೨೦೦೯
೨೪. ಸಂಯುಕ್ತ ಕರ್ನಾಟಕ ದಿನಾಂಕ : ೨೧.೦೩.೨೦೦೨
೨೫. ಸಂಯುಕ್ತ ಕರ್ನಾಟಕ ದಿನಾಂಕ : ೨೭.೦೪.೨೦೦೨
೨೬. ಸಂಯುಕ್ತ ಕರ್ನಾಟಕ ದಿನಾಂಕ : ೧೦.೦೭.೨೦೦೨
೨೭. ಸಂಯುಕ್ತ ಕರ್ನಾಟಕ ದಿನಾಂಕ : ೧೧.೦೭.೨೦೦೨

೨೮. ಸಂಯುಕ್ತ ಕರ್ನಾಟಕ ದಿನಾಂಕ : ೧೨.೦೯.೨೦೦೨

೨೯. ಸಂಯುಕ್ತ ಕರ್ನಾಟಕ ದಿನಾಂಕ : ೨೪.೦೧.೨೦೦೩

೩೦. ಸಂಯುಕ್ತ ಕರ್ನಾಟಕ ದಿನಾಂಕ : ೨೫.೦೧.೨೦೦೩

೩೧. ಸಂಯುಕ್ತ ಕರ್ನಾಟಕ ದಿನಾಂಕ : ೨೬.೦೧.೨೦೦೩

೩೨. ಸಂಯುಕ್ತ ಕರ್ನಾಟಕ ದಿನಾಂಕ : ೨೬.೦೧.೨೦೦೩

೩೩. ಸಂಯುಕ್ತ ಕರ್ನಾಟಕ ದಿನಾಂಕ : ೧೬.೦೩.೨೦೦೩

೩೪. ಸಂಯುಕ್ತ ಕರ್ನಾಟಕ ದಿನಾಂಕ : ೦೭.೦೩.೨೦೦೩

೩೫. ಸಂಯುಕ್ತ ಕರ್ನಾಟಕ ದಿನಾಂಕ : ೧೧.೦೭.೨೦೦೩

೩೬. ಸಂಯುಕ್ತ ಕರ್ನಾಟಕ ದಿನಾಂಕ : ೨೦.೦೯.೨೦೦೩

೩೭. ಸಂಯುಕ್ತ ಕರ್ನಾಟಕ ದಿನಾಂಕ : ೦೯.೦೯.೨೦೦೪

೩೮. ಸಂಯುಕ್ತ ಕರ್ನಾಟಕ ದಿನಾಂಕ : ೧೭.೧೨.೨೦೦೭

೩೯. ಸಂಯುಕ್ತ ಕರ್ನಾಟಕ ದಿನಾಂಕ : ೦೪.೦೭.೨೦೦೮

೪೦. ಸಂಯುಕ್ತ ಕರ್ನಾಟಕ ದಿನಾಂಕ : ೦೮.೦೭.೨೦೦೮

೪೧. ವಿಜಯಕರ್ನಾಟಕ ದಿನಾಂಕ : ೨೯.೦೩.೨೦೦೨

೪೨. ವಿಜಯಕರ್ನಾಟಕ ದಿನಾಂಕ : ೨೯.೦೩.೨೦೦೨

೪೩. ವಿಜಯಕರ್ನಾಟಕ ದಿನಾಂಕ : ೦೪.೦೪.೨೦೦೨

೪೪. ವಿಜಯಕರ್ನಾಟಕ ದಿನಾಂಕ : ೦೧.೧೦.೨೦೦೨

೪೫. ವಿಜಯಕರ್ನಾಟಕ ದಿನಾಂಕ : ೧೮.೦೧.೨೦೦೩

೪೬. ವಿಜಯಕರ್ನಾಟಕ ದಿನಾಂಕ : ೨೬.೦೧.೨೦೦೩

೪೭. ವಿಜಯಕರ್ನಾಟಕ ದಿನಾಂಕ : ೨೩.೦೨.೨೦೦೩

೪೮. ವಿಜಯಕರ್ನಾಟಕ ದಿನಾಂಕ : ೦೫.೦೩.೨೦೦೩

೪೯. ವಿಜಯಕರ್ನಾಟಕ ದಿನಾಂಕ : ೧೭.೦೩.೨೦೦೩

೫೦. ವಿಜಯಕರ್ನಾಟಕ ದಿನಾಂಕ : ೨೫.೦೩.೨೦೦೩

೫೧. ವಿಜಯಕರ್ನಾಟಕ ದಿನಾಂಕ : ೨೨.೦೪.೨೦೦೩

೫೨. ವಿಜಯಕರ್ನಾಟಕ ದಿನಾಂಕ : ೧೩.೦೮.೨೦೦೩

೫೩. ವಿಜಯಕರ್ನಾಟಕ ದಿನಾಂಕ : ೨೪.೦೮.೨೦೦೩

೫೪. ವಿಜಯಕರ್ನಾಟಕ ದಿನಾಂಕ : ೩೧.೧೦.೨೦೦೩

೫೫. ವಿಜಯಕರ್ನಾಟಕ ದಿನಾಂಕ : ೦೧.೦೯.೨೦೦೪

೫೬. ವಿಜಯಕರ್ನಾಟಕ ದಿನಾಂಕ : ೧೪.೦೪.೨೦೦೪

೫೭. ವಿಜಯಕರ್ನಾಟಕ ದಿನಾಂಕ : ೧೭.೧೨.೨೦೦೭

೫೮. ವಿಜಯಕರ್ನಾಟಕ ದಿನಾಂಕ : ೧೭.೧೨.೨೦೦೭

೫೯. ವಿಜಯಕರ್ನಾಟಕ ದಿನಾಂಕ : ೦೪.೦೭.೨೦೦೮

೬೦. ವಿಜಯಕರ್ನಾಟಕ ದಿನಾಂಕ : ೦೫.೦೭.೨೦೦೮

೬೧. ವಿಜಯಕರ್ನಾಟಕ ದಿನಾಂಕ : ೦೮.೦೭.೨೦೦೮

೬೨. ಕನ್ನಡಪ್ರಭ ದಿನಾಂಕ : ೦೪.೧೨.೨೦೦೨

೬೩. ಕನ್ನಡಪ್ರಭ ದಿನಾಂಕ : ೨೫.೦೧.೨೦೦೩

೬೪. ಕನ್ನಡಪ್ರಭ ದಿನಾಂಕ :೨೭.೦೧.೨೦೦೩

೬೫. ಕನ್ನಡಪ್ರಭ ದಿನಾಂಕ :೨೨.೦೨.೨೦೦೩

೬೬. ಕನ್ನಡಪ್ರಭ ದಿನಾಂಕ :೧೬.೦೩.೨೦೦೩

೬೭. ಕನ್ನಡಪ್ರಭ ದಿನಾಂಕ :೨೫.೦೩.೨೦೦೩

೬೮. ಕನ್ನಡಪ್ರಭ ದಿನಾಂಕ :೧೫.೦೮.೨೦೦೩

೬೯. ಕನ್ನಡಪ್ರಭ ದಿನಾಂಕ :೩೦.೦೮.೨೦೦೩

೭೦. ಕನ್ನಡಪ್ರಭ ದಿನಾಂಕ :೦೧.೦೯.೨೦೦೪

೭೧. ಕನ್ನಡಪ್ರಭ ದಿನಾಂಕ :೦೭.೦೯.೨೦೦೪

೭೨. ಕನ್ನಡಪ್ರಭ ದಿನಾಂಕ : ೧೬.೧೨.೨೦೦೭

೭೩. ಕನ್ನಡಪ್ರಭ ದಿನಾಂಕ :೧೭.೧೨.೨೦೦೭

೭೪. ಕನ್ನಡಪ್ರಭ ದಿನಾಂಕ :೦೫.೦೭.೨೦೦೮

೭೫. ಕನ್ನಡಪ್ರಭ ದಿನಾಂಕ :೦೮.೦೭.೨೦೦೮

೭೬. ಉದಯ ವಾಣಿ ದಿನಾಂಕ : ೧೨.೦೪.೨೦೦೨

೭೭. ಉದಯ ವಾಣಿ ದಿನಾಂಕ : ೨೪.೦೩.೨೦೦೩

೭೮. ಉದಯ ವಾಣಿ ದಿನಾಂಕ :೩೧.೦೩.೨೦೦೩

೭೯. ಉದಯ ವಾಣಿ ದಿನಾಂಕ :೧೬.೧೨.೨೦೦೭

೮೦. ಉದಯ ವಾಣಿ ದಿನಾಂಕ :೦೫.೦೭.೨೦೦೮

೮೧. ಉದಯ ವಾಣಿ ದಿನಾಂಕ :೦೬.೦೭.೨೦೦೮

೮೨. ಕರ್ಮವೀರ ದಿನಾಂಕ ೨೧.೦೯.೨೦೦೩

೮೩. ದಿ ಹಿಂದು ದಿನಾಂಕ : ೨೪.೦೩.೨೦೦೦೩

೮೪. ದಿ ಹಿಂದು ದಿನಾಂಕ : ೦೪.೦೯.೨೦೦೩

೮೫. ದಿ ಹಿಂದು ದಿನಾಂಕ : ೧೯.೦೩.೨೦೦೫

೮೬. ದಿ ಹಿಂದು ದಿನಾಂಕ :೨೧.೦೩.೨೦೦೫

೮೭. ದಿ ಹಿಂದು ದಿನಾಂಕ :೨೦.೦೮.೨೦೦೮

೮೮. ದಿ ಹಿಂದು ದಿನಾಂಕ :೧೭.೧೨.೨೦೦೭

೮೯. ದಿ ಹಿಂದು ದಿನಾಂಕ :೧೨.೦೪.೨೦೦೪

೯೦. ದಿ ಹಿಂದು ದಿನಾಂಕ :೦೪.೦೮.೨೦೦೮

೯೧. ದಿ ಹಿಂದು ದಿನಾಂಕ :೦೮.೦೭.೨೦೦೮

೯೨. ಇಂಡಿಯನ್ ಎಕ್ಸ್‌ಪ್ರೆಸ್ ದಿನಾಂಕ : ೧೬.೧೨.೨೦೦೭

೯೩. ಇಂಡಿಯನ್ ಎಕ್ಸ್‌ಪ್ರೆಸ್ ದಿನಾಂಕ ೧೭.೧೨.೨೦೭

೯೪. ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಾಂಕ ೦೪.೦೭.೨೦೦೮

೯೫. ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಾಂಕ ೦೫.೦೭.೨೦೦೮

೯೬. ಡೆಕ್ಕನ್ ಹೆರಾಲ್ಡ್ ದಿನಾಂಕ ೧೬.೧೨.೨೦೦೭

೯೭. ಡೆಕ್ಕನ್ ಹೆರಾಲ್ಡ್ ದಿನಾಂಕ ೧೭.೧೨.೨೦೦೭

೯೮. ಡೆಕ್ಕನ್ ಹೆರಾಲ್ಡ್ ದಿನಾಂಕ ೦೮.೦೭.೨೦೦೮

೯೯. ಟೈಮ್ಸ್ ಆಫ್ ಇಂಡಿಯಾ ದಿನಾಂಕ ೧೬.೧೨.೨೦೦೭

೧೦೦. ಹೈಕೋರ್ಟ್ ಪೀಠ ವಿಶೇಷಾಂಕ ದಿನಾಂಕ : ೦೪.೦೭.೨೦೦೮

* * *


೪. ನಕ್ಷೆಗಳು

ಉತ್ತರ ಕರ್ನಾಟಕ ನಕ್ಷೆ



ಕೃಪೆ : ಇಂಟರ್‌ನೆಟ್

ಧಾರವಾಡ ಜಿಲ್ಲೆ ನಕ್ಷೆ



ಕೃಪೆ: ಇಂಟರ್‌ನೆಟ್

೫. ಛಾಯಾಚಿತ್ರಗಳು



ಬಾಂಬೆ ಹೈಕೋರ್ಟ್ 14.08.1862



ಬೆಂಗಳೂರು ಹೈಕೋರ್ಟ್



ಕರ್ನಾಟಕ ಹೈಕೋರ್ಟ್ ಸಂಚಾರಿ ಪೀಠದ ಮುಖದ್ವಾರ, ಧಾರವಾಡ



ಕರ್ನಾಟಕ ಹೈಕೋರ್ಟ್ ಸಂಚಾರಿ ಪೀಠ, ಧಾರವಾಡ

04.07.2008




ಕರ್ನಾಟಕ ಹೈಕೋರ್ಟ್ ಸಂಚಾರಿ ಪೀಠ, ಗುಲ್ಬರ್ಗಾ 07.07.2008

ಕೃಪೆ : [illegible] ...ರ್ಟ್ ಪೀಠ ವಿಶೇಷಾಂಕ



ಹೈಕೋರ್ಟ್ ಪೀಠಕ್ಕಾಗಿ ಉಪವಾಸ ಸತ್ಯಾಗ್ರಹ
ಕೈಗೊಂಡಿರುವ ಬಿ.ಡಿ.ಹಿರೇಮಠ್



ಹೈಕೋರ್ಟ್ ಪೀಠಕ್ಕಾಗಿ ಬಿ.ಡಿ.ಹಿರೇಮಠ ಅವರು
ಆಮರಣ ಉಪವಾಸ ಕೈಗೊಂಡಿದ್ದರು



ಧಾರವಾಡ ವಕೀಲರ ಸಂಘದಿಂದ ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ
ಸ್ಥಾಪಿಸುವಂತೆ ನಡೆಸಿದ ಚಳವಳಿ



ಧಾರವಾಡ ವಕೀಲರಿಂದ
ಹೈಕೋರ್ಟ್‌ಪೀಠಕ್ಕಾಗಿ
ನಡೆಸಿದ ರಸ್ತಾರೋಖೋ
ಚಳವಳಿ



ಧಾರವಾಡ
ವಕೀಲರು ಮತ್ತು
ಜನ ಸಾಮಾನ್ಯರು
ಹೈಕೋರ್ಟ್‌ಪೀಠ
ಬೇಕೆಂದು ನಡೆಸಿದ
ಚಳವಳಿ



ಹೈಕೋರ್ಟ್ ಪೀಠ ಸ್ಥಾಪನೆಗೆ
ಆಗ್ರಹಿಸಲು ಬೆಂಗಳೂರಿಗೆ
ತೆರಳುತ್ತಿರುವ ಬಿ.ಡಿ ಹಿರೇಮಠ್



ಧಾರವಾಡ ವಕೀಲರ ಸಂಘದಿಂದ ಹೈಕೋರ್ಟ್ ಪೀಠದ ಕಟ್ಟಡ
ಒತ್ತಾಯಿಸಿ ನಡೆಸಿದ ಚಳವಳಿ





ಧಾರವಾಡ ದಲ್ಲಿ ಹೈಕೋರ್ಟ್ ಪೀಠ
ಸ್ಥಾಪಿಸುವಂತೆ ನಡೆದ ಚಳವಳಿಗೆ ಬೆಂಬಲ
ನೀಡಿದ ಸಂಘ ಸಂಸ್ಥೆಗಳ ಪ್ರತಿನಿಧಿಗಳು

ಅಭಿಯೋಜಕರ ಕಛೇರಿ
ಮುಂದೆ ಹೈಕೋರ್ಟ್‌ಪೀಠ
ಬೇಕೆಂದು ನಡೆಸಿದ ಪ್ರತಿಭಟನೆ



ಬೆಂಗಳೂರು ಉಚ್ಚ ನ್ಯಾಯಾಲಯದಿಂದ ಧಾರವಾಡ ಹೈಕೋರ್ಟ್
ಸಂಚಾರಿ ಪೀಠಕ್ಕೆ ವರ್ಗಾವಣೆಗೊಂಡುಬಂದ ಕಡತಗಳು



ಧಾರವಾಡ ಹೈಕೋರ್ಟ್ ಸಂಚಾರಿ ಪೀಠದ ಕಲಾಪನಡೆಸಲು ಹೊರಟಿರುವ
ನ್ಯಾಯಮೂರ್ತಿ ಎ.ಎಸ್.ಪಚ್ಚಾಪುರೆ, ಅಶೋಕ್.ಬಿ.ಹಿಂಚಿಗೇರಿ ಮತ್ತು
ಎ.ಎಸ್.ವೇಣುಗೋಪಾಲಗೌಡ , ಎಸ್.ಆರ್.ಬನ್ನೂರ್ ಮಠ್, ಎಸ್.ಅಬ್ದುಲ್ ನಜೀರ್



ಬಿ.ಡಿ.ಹಿರೇಮಠ್ , ವಕೀಲರು ಮತ್ತು
ಪ್ರಮುಖ ಹೋರಾಟಗಾರರು



ಪ್ರಫುಲ್ಲಾನಾಯಕ್ ವಕೀಲರು ಮತ್ತು
ಪ್ರಮುಖ ಮಹಿಳಾಹೋರಾಟಗಾರತಿ